ಅಥವಾ ವ್ಯಕ್ತಿಯ ಹೆಸರು ಉಲ್ಲೇಖಿಸುವಂತಿಲ್ಲ. ಆದರೆ ಇಂದು ಪತ್ರಿಕೆಗಳೂ ಸೇರಿದಂತೆ ಎಲ್ಲ ಮಾಧ್ಯಮಗಳು ಸಂತ್ರಸ್ತರ ಕುಟುಂಬದ ಸಂದರ್ಶನವನ್ನೂ ಪ್ರಕಟಿಸುತ್ತವೆ. ಮಾಧ್ಯಮಗಳ ಉದ್ದೇಶ ಗಲಭೆ ಸಂತ್ರಸ್ತರ ಸಾಂತ್ವನ ಆಗಿದ್ದರೂ, ಇದು ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಮತ್ತೊಂದು ಕೋಮಿನವರನ್ನು ಪ್ರಚೋದಿಸುವ ಸಾಧ್ಯತೆಗಳನ್ನೂ ಅಲ್ಲಗಳೆಯುವಂತಿಲ್ಲ. ಈ ನಿಟ್ಟಿನಲ್ಲಿ ಮಾಧ್ಯಮಗಳಿಗೆ ಅಂಕುಶ ಹಾಕಬೇಕಾದ ಪತ್ರಿಕಾ ಮಂಡಳಿ ಮೂಕಸಾಕ್ಷಿಯಾಗುತ್ತಿರುವುದು ವ್ಯವಸ್ಥೆಯ ದುರಂತ. ಏಕೆಂದರೆ ಪತ್ರಿಕಾ ಮಂಡಳಿ ಹಲ್ಲಿಲ್ಲದ ಹಾವು.
ಕೋಮುಸೂಕ್ಷ್ಮ ವಿಷಯಗಳಲ್ಲಿ ಕಟ್ಟುನಿಟ್ಟಿನ ನೀತಿಸಂಹಿತೆ ಪಾಲಿಸುವಂತೆ ನಿಗಾ ವಹಿಸಲು ಪತ್ರಿಕಾ ಮಂಡಳಿಗೆ ಅಗತ್ಯ ಅಧಿಕಾರ ನೀಡಿದಾಗ ಮಾತ್ರ ಮಾಧ್ಯಮಗಳು ಹೆಚ್ಚು ಜವಾಬ್ದಾರಿಯುತವಾಗಿ ಕೆಲಸ ಮಾಡಲು ಸಾಧ್ಯ.

## 6. ಮಹಿಳಾ ಮೀಸಲಾತಿ ನೈಜ ಪರಿಹಾರದ ನಿರೀಕ್ಷೆ

ಮಹಿಳೆಯರು ವಿಶ್ವ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಪಾಲು ಹೊಂದಿದ್ದಾರೆ. ಜತೆಗೆ ಒಟ್ಟು ಜಾಗತಿಕ ಮತದಾರರ ಅರ್ಧಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿದ್ದಾರೆ. ಅದಾಗ್ಯೂ ವಿಶ್ವದ ಶಾಸನಸಭೆಗಳಲ್ಲಿ ಇವರ ಪ್ರಾತಿನಿಧ್ಯ ನಗಣ್ಯ. 2008ರಲ್ಲಿ ವಿಶ್ವದ ವಿವಿಧ ರಾಷ್ಟ್ರಗಳ ಪಾರ್ಲಿಮೆಂಟ್‌ಗಳಲ್ಲಿ ಮಹಿಳಾ ಪ್ರಾತಿನಿಧ್ಯ ಸರಾಸರಿ ಶೇಕಡ 18ರಷ್ಟಿತ್ತು. ಆದರೆ ಭಾರತ ಈ ಅಸಮತೋಲನವನ್ನು ಸರಿಪಡಿಸಲು ಇದುವರೆಗೂ ಗಂಭೀರ ಪ್ರಯತ್ನಗಳನ್ನು ಮಾಡಿಲ್ಲ. ಭಾರತದಲ್ಲಿ ಸದ್ಯಕ್ಕೆ ಸಂಸತ್ತಿನಲ್ಲಿ ಕೇವಲ ಶೇಕಡ 8ರಷ್ಟು ಮಹಿಳಾ ಪ್ರಾತಿನಿಧ್ಯವಿದೆ. ಮಹಿಳೆಯರಿಗೆ ಮತದಾನದ ಹಕ್ಕನ್ನು ಮಂಜೂರು ಮಾಡಿದ ಮೊದಲ ಪ್ರಜಾಸತ್ತಾತ್ಮಕ ದೇಶ ಭಾರತ. ಆದರೆ ಇಲ್ಲಿ ಶಾಸನಬದ್ಧ ಸ್ಥಾನಗಳಿಗೆ ಮಹಿಳೆಯರ ಪ್ರಾತಿನಿಧ್ಯ ತೀರಾ ಕಡಿಮೆ ಮತ್ತು ರಾಷ್ಟ್ರೀಯ ಕಾನೂನುಗಳನ್ನು ರೂಪಿಸುವಲ್ಲೂ ಇವರ ಪಾತ್ರ ಸೀಮಿತವಾಗಿದೆ.

ದೇಶದಲ್ಲಿ ಮಹಿಳಾ ಮೀಸಲಾತಿ ಮಸೂದೆ ಸಿದ್ಧವಾಗಿ ಹನ್ನೆರಡು ವರ್ಷಗಳ ಬಳಿಕವೂ ಇನ್ನೂ ಚರ್ಚೆಯ ಹಂತದಲ್ಲೇ ಇದೆ. ರಾಷ್ಟ್ರಮಟ್ಟದಲ್ಲಿ ಕೋಲಾಹಲ ಮತ್ತು ಬಿಸಿ ಬಿಸಿ ಚರ್ಚೆಗಳಿಗೆ ಕಾರಣವಾಗಿದ್ದ ಮಸೂದೆ ಕೊನೆಗೂ 2008ರ ಬಜೆಟ್ ಅಧಿವೇಶನದ ವೇಳೆ ರಾಜ್ಯಸಭೆಯಲ್ಲಿ ಮಂಡನೆಯಾಯಿತು. ಇದು ಸಂವಿಧಾನ ತಿದ್ದುಪಡಿ ಮಸೂದೆಯಾಗಿರುವುದರಿಂದ. ಸಂಸತ್ತಿನ ಒಪ್ಪಿಗೆ ಪಡೆಯಲು ಮೂರನೇ ಎರಡರಷ್ಟು ಬಹುಮತ ಸಾಧಿಸಬೇಕು. 2010ರ ಮೇ ತಿಂಗಳಲ್ಲಿ ಈ ವಿವಾದಾತ್ಮಕ ಮತ್ತು ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆಯನ್ನು ರಾಜ್ಯಸಭೆ ಅಂಗೀಕರಿಸಿತು. ಪಾರ್ಲಿಮೆಂಟ್ ಮತ್ತು ಎಲ್ಲ ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡುವ ಈ ಮಸೂದೆಗೆ ರಾಜ್ಯಸಭೆ ಎರಡು ದಿನಗಳ ನಾಟಕೀಯ ಬೆಳವಣಿಗೆಗಳು ಮತ್ತು ಅಡ್ಡಿ ಆತಂಕಗಳನ್ನು ಎದುರಿಸಿದ ಬಳಿಕ ಅಂಗೀಕರಿಸಿತು.

ಮಹಿಳಾ ಮೀಸಲಾತಿಯ ಪರವಾದ ವಾದದ ಪ್ರಮುಖ ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

* ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಅರ್ಧದಷ್ಟು ಪಾಲು ಹೊಂದಿದ್ದಾರೆ. ಆದ್ದರಿಂದ ಅರ್ಧದಷ್ಟು ಶಾಸನಸಭೆ ಸ್ಥಾನಗಳಿಗೆ ಅವರು ಅರ್ಹರಾಗಿದ್ದಾರೆ. ಏಕೆಂದರೆ ಸಂಸತ್ತಿನಲ್ಲಿ ನಡೆಯುವ ಚರ್ಚೆಗಳು ಅವರ ಜೀವನದ ಮೇಲೆ ನೇರ ಪರಿಣಾಮ ಬೀರುವುದರಿಂದ ಅವರಿಗೆ ನ್ಯಾಯಬದ್ಧ ಪ್ರಾತಿನಿಧ್ಯ ಸಿಗಬೇಕು.

* ಮಹಿಳೆಯರಿಗೆ ವಿಭಿನ್ನವಾದ ಸಾಮಾಜಿಕ ಹಾಗೂ ಜೈವಿಕ ಅನುಭವಗಳಿದ್ದು, ಇವು ಆಡಳಿತ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಪಡೆಯಬೇಕು.

* ಮಹಿಳೆಯರು ಹಾಗೂ ಪುರುಷರು ಆಂಶಿಕವಾಗಿ ಸಂಘರ್ಷಾತ್ಮಕ ಆಸಕ್ತಿಗಳನ್ನು ಹೊಂದಿದ್ದಾರೆ.

* ಮಹಿಳೆಯರು ಅಧಿಕಾರದ ಸ್ಥಾನಕ್ಕೆ ಬಂದಾಗ ಇದು ಮತ್ತಷ್ಟು ಮಹಿಳೆಯರು ಆ ಹುದ್ದೆಗೆ ಏರಲು ಪ್ರೇರಣೆ ನೀಡುತ್ತದೆ. ಇಂಥ ಪ್ರಭಾವಿ ಮತ್ತು ನೀತಿನಿರೂಪಣಾ ಪಾತ್ರವನ್ನು ನಿರ್ವಹಿಸಲು ಇದು ಉತ್ತೇಜನ ನೀಡುತ್ತದೆ.

ಇತರೆಲ್ಲ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಬಹುತೇಕ ಸಮಾನ ನಿಲುವು ಪ್ರದರ್ಶಿಸಿದರೂ, ಕಮ್ಯುನಿಸ್ಟ್ ಪಾರ್ಟಿಗಳು ವಿಶ್ವಾದ್ಯಂತ ಇಂಥ ಬೆಳವಣಿಗೆಗಳನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಇಂದಿಗೂ ಇವು ಮಹಿಳೆಯರನ್ನು ತೀರಾ ಕೆಳಹಂತದ ಕೆಲಸಗಾರರಾಗಿಯೇ ಪರಿಗಣಿಸಿವೆ. ಜತೆಗೆ ಈ ಪಕ್ಷಗಳ ಪಾಲಿಟ್‌ಬ್ಯೂರೊಗಳಲ್ಲಿ ಪುರುಷರ ಪ್ರಾಧಾನ್ಯವೇ ಎದ್ದುಕಾಣುತ್ತಿದೆ. ಜತೆಗೆ ಮಹಿಳೆಯರು ಉನ್ನತ ಹುದ್ದೆಗಳನ್ನು ಅಲಂಕರಿಸಿದರೆ,

ಅವರ ಕುಟುಂಬದ ಹಿನ್ನೆಲೆಯಿಂದಾಗಿ ಅವರು ಆ ಸ್ಥಾನಕ್ಕೆ ಏರಿರುತ್ತಾರೆ, ಉದಾಹರಣೆಗೆ ಇವರು ಪ್ರಭಾವಿ ರಾಜಕಾರಣಿಗಳ ಪತ್ನಿಯಾಗಿ, ಮಗಳಾಗಿ, ಸೊಸೆಯಾಗಿ ಅಥವಾ ಸೋದರ ಸಂಬಂಧಿಯಾಗಿ ಈ ಹುದ್ದೆಗೆ ಏರಿರುತ್ತಾರೆ. ಆದರೆ ಮಾಯಾವತಿ, ಮಮತಾ ಬ್ಯಾನರ್ಜಿಯಂಥವರು ಮಾತ್ರ ಇದಕ್ಕೆ ಅಪವಾದ. ಇವರು ಯಾವುದೇ ಕೌಟುಂಬಿಕ ರಾಜಕೀಯದ ಹಿನ್ನೆಲೆ ಇಲ್ಲದೆಯೂ ರಾಜಕೀಯದಲ್ಲಿ ಉನ್ನತ ಸ್ಥಾನ ಅಲಂಕರಿಸುವುದು ಸಾಧ್ಯವಾಗಿದೆ. ಅದು ಅವರ ಅಸಾಮಾನ್ಯ ಗುಣಗಳಿಂದಾಗಿ. ಇವರನ್ನು ಸಾಮಾನ್ಯ ಮಹಿಳೆಯರಿಗೆ ಉದಾಹರಣೆಯಾಗಿ ಪರಿಗಣಿಸಲಾಗದು. ಇವರ ಸಾಧನೆಗಳು ಅವರ ಜಾತಿಯ ಎಲ್ಲೆಯನ್ನು ಮೀರಿವೆ. ಉದಾಹರಣೆಗೆ ಮಾಯಾವತಿ ದಲಿತ ಕುಟುಂಬದಿಂದ ಬಂದವರಾದರೆ, ಬ್ಯಾನರ್ಜಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು.

ಲಿಂಗ ತಾರತಮ್ಯವನ್ನು ನಿವಾರಿಸಲು ಮತ್ತು ಮಹಿಳಾ ಸಬಲೀಕರಣವನ್ನು ಉತ್ತೇಜಿಸಲು, ಮಹಿಳೆಯರಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ ಗೃಹಕೃತ್ಯ, ಕೆಲಸದ ಸ್ಥಳ ಮತ್ತು ರಾಜಕೀಯ ವಲಯದಲ್ಲಿ ಇವರ ಪ್ರಾತಿನಿಧ್ಯ ಹೆಚ್ಚಬೇಕು. ಹೆಚ್ಚುವ ರಾಜಕೀಯ ಪ್ರಭಾವವು ಸಹಜವಾಗಿಯೇ ಮಹಿಳಾ ಸಮಾನತೆಯನ್ನು ಹೆಚ್ಚಿಸಲು ಅನುಕೂಲವಾಗುತ್ತವೆ. ಇದರಿಂದ


www.shikarat.com

ಭಾರತದ ಆರ್ಥಿಕ ಪ್ರಗತಿಯ ವೇಗವೂ ಹೆಚ್ಚಿ, ದೇಶದ ಕಾರ್ಯಕ್ಷಮತೆ ಮತ್ತು ಒಟ್ಟಾರೆ ರಾಷ್ಟ್ರೀಯ ಆದಾಯ ಹೆಚ್ಚಳಕ್ಕೆ ಕಾರಣವಾಗುತ್ತದೆ. ಇದು ಎಲ್ಲ ಸಾಮಾಜಿಕ ಅಭಿವೃದ್ಧಿಯ ಹೊಸ ಮೈಲುಗಲ್ಲುಗಳ ಸ್ಥಾಪನೆಗೆ ಕಾರಣವಾಗುತ್ತದೆ.

ಶಾಸನಸಭೆಗಳಲ್ಲಿ ಸ್ಥಾನಗಳ ಮೀಸಲಾತಿಯು ಮಹಿಳಾ ಸಬಲೀಕರಣ ಮತ್ತು ಅಭಿವೃದ್ಧಿ ಪಾಲುದಾರಿಕೆಗೆ ಮೂಲ, ನಿರಂತರ ಹಾಗೂ ತಾರ್ಕಿಕ ಕ್ರಮವಾಗಿದೆ. ಅದರಲ್ಲೂ ಮುಖ್ಯವಾಗಿ ಪಾಲ್ಗೊಳ್ಳುವಿಕೆ ಮತ್ತು ನಿರೂಪಣೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ನೀಡಲಾಗುವುದು ಎಂಬ ಭರವಸೆ ನೀಡಿರುವ ಸರ್ಕಾರಕ್ಕೆ ಇದು ಅನಿವಾರ್ಯ. ಮಹಿಳೆಯರಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದುಕಿನಲ್ಲಿ ಸಮಾನ ಸ್ಥಾನ ಕಲ್ಪಿಸುವುದು ಕಾರ್ಯಸೂಚಿಯ ಹೃದಯದಲ್ಲಿದೆ ಎಂದು ಮಹಿಳಾ ಸಬಲೀಕರಣ ಕುರಿತ ರಾಷ್ಟ್ರೀಯ ನೀತಿ 2011ರಲ್ಲಿ ಘೋಷಿಸಿತ್ತು.

ಬಹುತೇಕ ತಜ್ಞರು ಅಭಿಪ್ರಾಯಪಡುವಂತೆ ಮಹಿಳಾ ರಾಜಕಾರಣಿಗಳನ್ನು ರೂಪಿಸುವ ನಿಟ್ಟಿನಲ್ಲಿ ಪಕ್ಷಗಳು ನಾಯಕತ್ವ ತೆಗೆದುಕೊಳ್ಳಬೇಕು. ರಾಜಕೀಯ ಪಕ್ಷಗಳು ತಮ್ಮ ನೇಮಕಾತಿ ಪದ್ಧತಿ ಹಾಗೂ ಕಾರ್ಯಶೈಲಿಯನ್ನು ಬದಲಾಯಿಸಿಕೊಳ್ಳದಿದ್ದರೆ, ಮಹಿಳೆಯರ ರಾಜಕೀಯ ಬದುಕು ಉತ್ತಮಗೊಳ್ಳಲು ಸಾಧ್ಯವಿಲ್ಲ ಹಾಗೂ ದೇಶದಲ್ಲಿ ಅಧಿಕಾರಯುತವಾಗಿ ಅವರು ತಮ್ಮ ಪಾತ್ರವನ್ನು ನಿರ್ವಹಿಸಲು ಅವಕಾಶವಾಗದು. ಆದರೆ ಯಾವ ರಾಜಕೀಯ ಪಕ್ಷಗಳೂ ಈ ನಿಟ್ಟಿನಲ್ಲಿ ಉತ್ಸುಕವಾಗಿಲ್ಲ. ಮಹಿಳಾ ಮೀಸಲಾತಿ ಬಗೆಗೆ ರಾಜಕೀಯ ಪಕ್ಷಗಳಿಗೆ ಇರುವ ಔದಾಸೀನ್ಯದ ಕಾರಣದಿಂದ ಮಹಿಳೆಯರ ಸ್ಥಾನಮಾನ ಬಲಪಡಿಸುವ ಕಾರ್ಯವನ್ನು ಸರ್ಕಾರದ ಹೆಗಲಿಗೇರಿಸಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡಿವೆ. ರಾಜಕೀಯ ಪಕ್ಷಗಳೇ ತ್ಯಾಗ ಮಾಡಿದ ಕಾರ್ಯವನ್ನು ಸರ್ಕಾರ ಮುಂದುವರಿಸಲು ನಿರ್ಧರಿಸಿದ ಮೇಲೆ ಇಲ್ಲಿ ಯಾವುದೇ ಸಂಘರ್ಷಕ್ಕೆ ಅವಕಾಶ ಇರುವುದಿಲ್ಲ.

ತಜ್ಞರು ಅಭಿಪ್ರಾಯಪಡುವಂತೆ ಮಹಿಳಾ ಮೀಸಲಾತಿ ನಿಗದಿಪಡಿಸುವುದು ಕೇವಲ ತೋರಿಕೆಯ ಬದಲಾವಣೆ ತರಬಹುದೇ ವಿನಃ ಅವರು ರಾಜಕೀಯ ಪ್ರಕ್ರಿಯೆಯಲ್ಲಿ ಪ್ರಭಾವ ಬೀರುವ ವಾತಾವರಣ ನಿರ್ಮಿಸಲಾಗದು. ಮೀಸಲು ಸ್ಥಾನಗಳಿಗೆ ಯಾವ ರೀತಿಯ ಮಹಿಳೆಯರಿಗೆ ಅವಕಾಶ ನೀಡಬೇಕು ಎಂದು ನಿರ್ಧರಿಸುವಲ್ಲೂ ಬಹಳಷ್ಟು ಅಂಶಗಳು ಪ್ರಭಾವ ಬೀರಬಹುದು. ಭಾರತ ಕೇವಲ ಜಾತಿಯಿಂದ ವಿಭಜಿತವಾಗಿರುವ ರಾಷ್ಟ್ರವಷ್ಟೇ ಅಲ್ಲದೇ, ವರ್ಗದಿಂದ ವಿಭಜನೆಯಾಗಿರುವ ಸಮಾಜವೂ ಹೌದು. ಒಂದು ರಾಜಕೀಯ ಪಕ್ಷದ ಸ್ವರೂಪ ಮತ್ತು ಅಂಶಗಳು ಬದಲಾವಣೆಯಾದಾಗ ಮಾತ್ರ ಮಹಿಳೆಯರಿಗೆ ಅವರ ಅರ್ಹತೆಯ ಆಧಾರದಲ್ಲಿ ಟಿಕೆಟ್ ನೀಡಲು ಸಾಧ್ಯ. ಮಹಿಳೆಯರ ರಾಜಕೀಯ ಸಾಮರ್ಥ್ಯವನ್ನು ಬಲಪಡಿಸಲು ರಾಜಕೀಯ ವ್ಯವಸ್ಥೆಯಲ್ಲಿ ನಗಣ್ಯವಾದ ಪ್ರಯತ್ನಗಳು ನಡೆದಿರುವ ಹಿನ್ನೆಲೆಯಲ್ಲಿ, ತಳಹಂತದಿಂದ ಮೇಲಿನ ಹಂತಕ್ಕೆ ಮಹಿಳಾ ನಾಯಕತ್ವ ರೂಪುಗೊಳ್ಳಬೇಕಾಗಿದೆ. ಸಹಜವಾಗಿಯೇ ಇದು ಉನ್ನತ ಮಟ್ಟದಲ್ಲಿ ಮಹಿಳಾ ನೇತಾರರ ಸ್ಥಾನಗಳನ್ನು ಖಾಲಿಯಾಗಿಸಿದೆ. ಇಂಥ ಖಾಲಿ ಸ್ಥಾನಗಳಿಗೆ ಉನ್ನತ ರಾಜಕಾರಣಿಗಳ ಪತ್ನಿ ಅಥವಾ ಹೆಣ್ಣುಮಕ್ಕಳು ಆಯ್ಕೆಯಾಗುತ್ತಾರೆ. ಇತರ ಸಾಮಾನ್ಯ ಹಿನ್ನೆಲೆಯಿಂದ ಬಂದ ಮಹಿಳೆಯರಿಗೆ ಉನ್ನತ ಹಂತದಲ್ಲಿ ಅವಕಾಶ ಲಭಿಸುವುದು ದುರ್ಲಭವಾಗುತ್ತದೆ.

ಭಾರತೀಯ ಮಹಿಳೆಯರು ಪ್ರಬಲ ಶ್ರೇಣೀಕೃತ ವ್ಯವಸ್ಥೆಯಲ್ಲಿ ಹುಟ್ಟಿರುವುದರಿಂದ, ಹಿಂದೆ ಅವರು ಬೇರೆಯವರ ನಿಯಂತ್ರಣದಲ್ಲಿ ಸಿಲುಕಿ ಹಾಕಿಕೊಂಡ ಪರಿಣಾಮವಾಗಿ, ಅವರು ಉನ್ನತಿ ಸಾಧಿಸಲು ಮುಂದಾದಾಗಲೆಲ್ಲ ಅವರು ತಡೆಗಳನ್ನು ಎರಿಸುವಂತಾಗಿದೆ. ಮತ್ತು ಇಂಥ ತಡೆಗಳನ್ನು ನಿವಾರಿಸಿಕೊಳ್ಳುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು ಕಷ್ಟಸಾಧ್ಯವಾಗುತ್ತಿದೆ. ಕೇವಲ ಕುಟುಂಬದ ಬೆಂಬಲ ಇದ್ದರೆ ಮಾತ್ರ ಇಂಥ ತಡೆಗಳನ್ನು ಮೀರಿ ಅವರು ಬೆಳೆಯಲು ಸಾಧ್ಯ. ಸುದೀರ್ಘ ಅವಧಿಯಿಂದ ಮಹಿಳೆಯರಿಗೆ ಉತ್ತೇಜನ ಸಿಕ್ಕದ ಹಿನ್ನೆಲೆಯಲ್ಲಿ ತೀರಾ ಅಪರೂಪದ ವ್ಯಕ್ತಿತ್ವದ ಮತ್ತು ಸಾಮರ್ಥ್ಯ ಹೊಂದಿರುವ ಮಹಿಳೆಯರಷ್ಟೇ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಅವಕಾಶ ಪಡೆಯುತ್ತಾರೆ. ಇದು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಇದು ಭಾರತದಲ್ಲಿ ಇಂದಿಗೂ ಪ್ರತಿದಿನದ ಕಥೆ.

ಮಹಿಳೆಯರ ಪ್ರಗತಿಗೆ ಇದ್ದ ಅಡ್ಡಿ ಆತಂಕಗಳನ್ನು ಕಳೆದ ಅರುವತ್ತು ವರ್ಷಗಳಲ್ಲಿ ನಿಧಾನವಾಗಿ ನಿವಾರಿಸಲಾಗುತ್ತಿದೆ. ಮಧ್ಯಮವರ್ಗದ ಕುಟುಂಬಗಳು ತಮ್ಮ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪೂರಕವಾಗಿ ಒತ್ತು ನೀಡುತ್ತಿದ್ದು, ಅವರ ಮಹತ್ವಾಕಾಂಕ್ಷಿ ಉದ್ಯೋಗದ ಕನಸಿಗೂ ಪೂರಕ ವಾತಾವರಣ ಕಲ್ಪಿಸಿಕೊಡುತ್ತಿವೆ. ಆದರೆ ಈ ಬದಲಾವಣೆ ತೀರಾ ನಿಧಾನ. ಇದರ ಪ್ರಯೋಜನಗಳು ಮಹಿಳೆಯರ ಸಣ್ಣ ವರ್ಗಕ್ಕಷ್ಟೇ ಸಿಕ್ಕಿವೆ. ಅದರಲ್ಲೂ ಮುಖ್ಯವಾಗಿ ಮಹಾನಗರಗಳ ಸುಶಿಕ್ಷಿತ ಮಧ್ಯಮವರ್ಗದ ಕುಟುಂಬಗಳ ಮಹಿಳೆಯರಿಗಷ್ಟೇ ಇದು ಸೀಮಿತ ಎಂಬಂತಾಗಿದೆ. ತಮ್ಮದೇ ಆಸಕ್ತಿ ಮತ್ತು ಸಾಮರ್ಥ್ಯದಿಂದ ಮಹಿಳೆಯರು ಹಲವು ವೃತ್ತಿಗಳಲ್ಲಿ ಮುಂಚೂಣಿಗೆ ಬಂದಿದ್ದಾರೆ. ಆದರೆ ಬಹುತೇಕ ಕುಟುಂಬಗಳು ಆ ಕುಟುಂಬದ ಪುರುಷರಿಗೆ ನೀಡಿದಷ್ಟು ಬೆಂಬಲವನ್ನು ಮಹಿಳೆಯರಿಗೆ ನೀಡುತ್ತಿಲ್ಲ ಎನ್ನುವುದು ವಾಸ್ತವ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಎಲ್ಲವೂ ಕುಟುಂಬಗಳ ಬೆಂಬಲದಿಂದ ಆಗಿರುವ ಸಾಧನೆಯೇ ಹೊರತು ಸರ್ಕಾರ ಇಲ್ಲಿ ನಿರ್ವಹಿಸಿರುವ ಪಾತ್ರ ತೀರಾ ನಿರಾಶಾದಾಯಕ.

ಸ್ವಾತಂತ್ರ್ಯ ಬಂದು ಅರುವತ್ತು ವರ್ಷ ಕಳೆದರೂ, ಮಹಿಳೆಯರ ವಿರುದ್ಧದ ಪರಿಸ್ಥಿತಿಗಳು ಇಂದಿಗೂ ಜೀವಂತವಾಗಿ ಇವೆ. ಈ ಕಾರಣದಿಂದಾಗಿ ಅವರು ಸಾರ್ವಜನಿಕ ಜೀವನದಲ್ಲಿ ಹೆಚ್ಚಿನ ಸಾಧನೆಯನ್ನು ಮಾಡುವುದು ಸಾಧ್ಯವಾಗುತ್ತಿಲ್ಲ. ಅವರು ಸಾರ್ವಜನಿಕ ಜೀವನದಲ್ಲಿ ಸಾಧನೆ ಮಾಡಬೇಕಾದರೆ ಇಂಥ ಮೀಸಲಾತಿ ಅನಿವಾರ್ಯವಾಗುತ್ತದೆ. ರಾಜಕೀಯ ಪಕ್ಷಗಳ ನೇತಾರರು, ಮಹಿಳೆಯರ ಕಲ್ಯಾಣಕ್ಕೆ ತೀವ್ರ ಹಾಗೂ ದೀರ್ಘಾವಧಿ ಆಸಕ್ತಿಯನ್ನು ತೆಗೆದುಕೊಳ್ಳಬೇಕಾಗಿದೆ. ಕೇವಲ ಅವರನ್ನು ರಾಜಕೀಯ ಚದುರಂಗದಾಟದಲ್ಲಿ ಕಾಲಾಳುಗಳಾಗಿ ಬಳಸಿಕೊಳ್ಳುವ ಮನೋಪ್ರವೃತ್ತಿಯನ್ನು ಬಿಟ್ಟು, ಅವರಿಗೆ ಶಕ್ತಿ ಮತ್ತು ಅಧಿಕಾರವನ್ನು ತುಂಬುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಭಾರತದ ಸಮಾಜದ ಬದಲಾವಣೆಗೆ ಪ್ರಜಾಪ್ರಭುತ್ವ ವ್ಯವಸ್ಥೆ ಸೀಮಿತ ಕೊಡುಗೆಯನ್ನಷ್ಟೇ ನೀಡಬಲ್ಲದು. ನಮ್ಮ ರಾಜಕೀಯ ಪಕ್ಷಗಳು ನಮ್ಮ ಸಮಾಜದ ಸ್ಥಿತಿಯನ್ನು ಪ್ರತಿಫಲಿಸುತ್ತವೆ ಎನ್ನುವುದನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಸಮಾಜದ ಬಹುತೇಕ ಜನರ ಅಭಿಪ್ರಾಯಗಳು ರಾಜಕೀಯ ಪಕ್ಷಗಳ ಕಾರ್ಯವೈಖರಿಯಲ್ಲಿ ಬಿಂಬಿತವಾಗುತ್ತವೆ. ಭಾರತದಲ್ಲಿ ಇಂದಿನ ತುರ್ತು ಅಗತ್ಯವೆಂದರೆ ಮಹಿಳೆಯರ ಬಗೆಗಿನ ದೃಷ್ಟಿಕೋನದಲ್ಲಿ ಸಮಗ್ರ ಸುಧಾರಣೆ. ಇದೇ ಬದಲಾವಣೆ ಎಲ್ಲ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಮುಖಂಡರ ಮನೋಪ್ರವೃತ್ತಿಯಲ್ಲೂ ಆಗಬೇಕಾಗಿದೆ. ಜತೆಗೆ ವಿಧಾನ ಮಂಡಲ ಹಾಗೂ ಸಂಸತ್ತಿನ ಹಂತಕ್ಕೂ ಇದು ವ್ಯಾಪಿಸಬೇಕು.

Universal Coaching Centre


www.shikarat.com

ಮಹಿಳೆಯರಿಗೆ ಪರಿಣಾಮಕಾರಿ ಉತ್ತೇಜನ ನೀಡುವ ಪ್ರಕ್ರಿಯೆ ಕುಟುಂಬದ ಹಂತದಿಂದಲೇ ಆಗಬೇಕಾಗಿದೆ. ಕುಟುಂಬಗಳು ತಮ್ಮ ಕುಟುಂಬದ ಮಗಳು, ಸಹೋದರಿಯರು ಮತ್ತು ಸೊಸೆಯಂದಿರಿಗೆ ಉತ್ತೇಜನ ನೀಡಿದಾಗ ಮಾತ್ರ, ಭಾರತೀಯ ಮಹಿಳೆಯರ ಪರಿಸ್ಥಿತಿ ಬದಲಾಗಲು ಸಾಧ್ಯ. ವೈಯಕ್ತಿಕ ಘಟನೆಗಳು ಇದನ್ನು ಈಗಾಗಲೇ ಸಮರ್ಥಿಸಿವೆ. ವೈಯಕ್ತಿಕ ಹಂತದಲ್ಲಿ ಮಹಿಳೆಯರ ಸಬಲೀಕರಣವಾಗಬೇಕು. ಇದು ಕಟುಂಬ ಘಟಕದ ಮಟ್ಟದಲ್ಲಿ ಆರಂಭವಾಗಬೇಕು. ಇದನ್ನು ಆಗ ಸಮಾಜ ಸಾರ್ವತ್ರಿಕವಾಗಿ ಒಪ್ಪಿಕೊಳ್ಳುವ ಹಂತಕ್ಕೆ ಬೆಳೆಯುತ್ತದೆ. ಇದು ಮಹಿಳೆಯರ ಉನ್ನತೀಕರಣದಲ್ಲಿ ಸಮಗ್ರ ಹಾಗೂ ಪವಾಡಸದೃಶ ಬದಲಾವಣೆಗೆ ಕಾರಣವಾಗಲಿದೆ. ಆದರೆ ಇವೆಲ್ಲವೂ ಹೇಳಲು ಸುಲಭ; ಇದನ್ನು ಸಾಧಿಸುವಲ್ಲಿ ಬಹಳಷ್ಟು ಅಡೆ ತಡೆಗಳು ಎದುರಾಗುತ್ತವೆ.

ಮೊಟ್ಟಮೊದಲನೆಯದಾಗಿ ಹೆಣ್ಣುಮಕ್ಕಳ ವಿಚಾರದಲ್ಲಿ ಸಮಾಜದ ಮಾನಸಿಕ ಸ್ಥಿತಿ ಬದಲಾಗಬೇಕು. ಇಲ್ಲೂ ಸರ್ಕಾರ ಮಹತ್ವದ ಪಾತ್ರವನ್ನು ವಹಿಸಲು ಸಾಧ್ಯವಿದೆ. ಹೆಣ್ಣುಮಕ್ಕಳನ್ನು ಹೆರುವ ಕುಟುಂಬಕ್ಕೆ ಉತ್ತೇಜನ ನಿಡುವ ಜತೆಗೆ ಗಂಡುಮಕ್ಕಳ ಪರವಾಗಿ ತಾರತಮ್ಯ ನೀತಿ ಅನುಸರಿಸುವವರಿಗೆ ಶಿಕ್ಷೆ ವಿಧಿಸುವ ಮೂಲಕ ಈ ತಾರತಮ್ಯವನ್ನು ನಿವಾರಿಸಿ ಹೆಣ್ಣುಮಕ್ಕಳಿಗೂ ಸಮಾನ ಅವಕಾಶ ಸೃಷ್ಟಿಸಲು ಮುಂದಾಗಬೇಕು. ಈ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗದಿರುವ ಹಿನ್ನೆಲೆಯಲ್ಲಿ ಅಪೇಕ್ಷಿತ ಫಲಿತಾಂಶ ಬಂದಿಲ್ಲ.

ಮಹಿಳಾ ಜನಸಂಖ್ಯೆ ದೇಶದ ಅನಪೇಕ್ಷಿತ ನಾಗರಿಕರು ಎಂಬ ಮನೋಸ್ಥಿತಿ ಇರುವಲ್ಲಿಯವರೆಗೂ ದೇಶದ ಸಮಗ್ರ ಪ್ರಗತಿಯನ್ನು ಕಲ್ಪಿಸಿಕೊಳ್ಳುವುದು ಹೇಗೆ ಸಾಧ್ಯ? ಮಹಿಳೆಯರು ಉತ್ತಮ ತಾಯಿಯಾಗಬಹುದಾದರೆ ಉತ್ತಮ ಮಗಳೂ ಆಗಬಲ್ಲಳು ಎನ್ನುವುದನ್ನು ಸಮಾಜ ಏಕೆ ಒಪ್ಪಿಕೊಳ್ಳುವುದಿಲ್ಲ? ಭಾರತೀಯ ಸಮಾಜದಲ್ಲಿ ತಾಂಡವವಾಡುತ್ತಿರುವ ಇಂಥ ವೈರುಧ್ಯ ಸ್ಥಿತಿಯ ಬಗ್ಗೆ ಜಾಗೃತಿ ಮೂಡಿಸುವ ಪ್ರಾಮಾಣಿಕ ಪ್ರಯತ್ನ ನಡೆಯಬೇಕು. ಮತ್ತೊಬ್ಬ ಮಹಿಳೆಯ ಉನ್ನತಿಗೆ ಮತ್ತು ಸಾರ್ವತ್ರಿಕವಾಗಿ ಮಹಿಳಾ ಸಬಲೀಕರಣಕ್ಕೆ ಮಹಿಳೆಯರೇ ದೊಡ್ಡ ಹೆಜ್ಜೆ ಇಡಬೇಕು. ಇದಕ್ಕೆ ರಾಜಕೀಯ ಪ್ರಾತಿನಿಧ್ಯ ಮೊದಲ ಹಂತವಾಗಬೇಕು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಇರುವ ನಿಜವಾದ ಪರೀಕ್ಷೆ ಎಂದರೆ, ಸಮಾಜದ ದುರ್ಬಲ ಮತ್ತು ತುಳಿತಕ್ಕೆ ಒಳಗಾದ ವರ್ಗಗಳಿಗೆ ಸಮಾನ ಅವಕಾಶವನ್ನು ಸೃಷ್ಟಿಸಿಕೊಡುವುದು. ಈ ಪ್ರಕರಣದಲ್ಲಿ ಅದು ಭಾರತೀಯ ಮಹಿಳೆ. ಇದನ್ನು ಸಾಧಿಸಬೇಕಾದರೆ ಪೂರಕವಾದ ಸಾಮಾಜಿಕ ವಾತಾವರಣ ಮತ್ತು ರಾಜಕೀಯ ಇಚ್ಛಾಶಕ್ತಿ ಅಗತ್ಯ. ಹಿಂದುಳಿದ ಮತ್ತು ಸಂಪ್ರದಾಯವಾದಿ ಎನಿಸಿಕೊಂಡ ಪಾಕಿಸ್ತಾನದಲ್ಲಿ ಮಹಿಳೆಯರಿಗೆ ಶೇಕಡ 33ರ ಮೀಸಲಾತಿ ಕಲ್ಪಿಸಲು ಸಾಧ್ಯವಾಗಿದ್ದರೆ, ಭಾರತದಲ್ಲಿ ಇದು ಏಕೆ ಸಾಧ್ಯವಿಲ್ಲ ಎನ್ನುವ ಬಗ್ಗೆ ಚಿಂತನೆ ನಡೆಯಬೇಕಿದೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಈ ನಿಟ್ಟಿನಲ್ಲಿ ಹಿಂದುಳಿಯಬೇಕೇ?

Universal Coaching Centre

## 7. ಭಾರತದಲ್ಲಿ ಆಹಾರ ಭದ್ರತೆ

**ಪೀಠಿಕೆ**

ವಿಶ್ವಬ್ಯಾಂಕ್, ಆಹಾರ ಮತ್ತು ಕೃಷಿ ಸಂಸ್ಥೆ, ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತಿತರ ಅಂತಾರಾಷ್ಟ್ರೀಯ ಸಂಸ್ಥೆಗಳು ವ್ಯಾಖ್ಯಾನಿಸಿದಂತೆ, "ಎಲ್ಲ ಜನತೆ ಮೂಲ ಆಹಾರವನ್ನು ಭೌತಿಕ ಮತ್ತು ಆರ್ಥಿಕವಾಗಿ ಪಡೆಯುವಂತೆ ನೋಡಿಕೊಳ್ಳುವುದೇ ಆಹಾರ ಭದ್ರತೆಯ ಸ್ಥಿತಿ" ಭೌತಿಕ ಲಭ್ಯತೆಯನ್ನು ಪರಿಗಣಿಸುವುದಾದರೆ, ಇದನ್ನು ಗಣಿತಶಾಸ್ತ್ರದ ಪ್ರಕಾರ ನಾವು ಖಚಿತವಾಗಿ ಲೆಕ್ಕಹಾಕಬಹುದು. ಅಂದರೆ ಆ ದೇಶದ ಒಟ್ಟು ಜನಸಂಖ್ಯೆ ಹಾಗೂ ಆಹಾರ ಧಾನ್ಯ ಉತ್ಪಾದನೆಯನ್ನು ಹೋಲಿಸಿದರೆ, ಖಚಿತವಾಗಿ ಭೌತಿಕ ಲಭ್ಯತೆಯ ವಾಸ್ತವ ಚಿತ್ರಣ ದೊರಕುತ್ತದೆ. ಅಂದರೆ ಒಂದು ದೇಶದಲ್ಲಿ ಆ ದೇಶದ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಆಹಾರ ಉತ್ಪಾದನೆ ಆಗುತ್ತಿಲ್ಲ ಎಂದಾದರೆ ಆ ದೇಶ ಆಹಾರ ಭದ್ರತೆ ಹೊಂದಿಲ್ಲ ಎಂದರ್ಥ. ಆದರೆ ಆರ್ಥಿಕವಾಗಿ ಆಹಾರ ಲಭ್ಯತೆ ಎನ್ನುವುದು ಸಂಕೀರ್ಣ ಪರಿಕಲ್ಪನೆ. ಯಾವುದೇ ಒಂದು ಕಾರಣದಿಂದ ದೇಶದ ಸಂಪೂರ್ಣ ಜನತೆಗೆ ಆಹಾರ ಲಭ್ಯತೆ ಇಲ್ಲ ಎಂದಾದರೆ, ಆ ದೇಶ ಆಹಾರ ಭದ್ರತೆ ಹೊಂದಿಲ್ಲ ಎಂದರ್ಥ. ಕಳೆದ ಐದು ವರ್ಷದಲ್ಲಿ ಭಾರತದ ಆಹಾರಧಾನ್ಯ ಅಂದರೆ ಗೋಧಿ, ಅಕ್ಕಿ, ಜೋಳ, ಬಾಜ್ರಾ, ಮೆಕ್ಕೆಜೋಳ ಮತ್ತು ಬೇಳೆಕಾಳುಗಳ ಉತ್ಪಾದನೆ ಶೇಕಡ ಒಂದರಷ್ಟು ಪ್ರಗತಿ ಹೊಂದಿವೆ. ಆದರೆ ದೇಶದ ಜನಸಂಖ್ಯೆ ಹೆಚ್ಚಳ ಪ್ರಮಾಣ ಶೇಕಡ 1.67ರಷ್ಟಿದೆ. ಅಂದರೆ ಇದು ಸ್ಪಷ್ಟವಾಗಿ ಭೌತಿಕ ಆಹಾರ ಭದ್ರತೆಯಲ್ಲಿ ಭಾರತ ಹಿಂದಿದೆ ಎನ್ನುವುದನ್ನು ಸೂಚಿಸುತ್ತದೆ. ಆಹಾರದ ಆರ್ಥಿಕ ಲಭ್ಯತೆಯನ್ನು ಪರಿಗಣಿಸಿದರೆ, ಭಾರತ ಬಹಳಷ್ಟು ವ್ಯತ್ಯಯಗಳನ್ನು ಕಂಡಿರುವುದು ತಿಳಿದುಬರುತ್ತದೆ. ಸಮೀಕ್ಷೆಗಳ ಅಧ್ಯಯನದ ಪ್ರಕಾರ, ದೇಶದ ಶೇಕಡ 50ರಷ್ಟು ಮಂದಿ ಆಹಾರ ಭದ್ರತೆ ಹೊಂದಿಲ್ಲ. ದೇಶದ ಪ್ರತಿಯೊಬ್ಬ ಜನರೂ ಸರಿಯಾಗಿ ಆಹಾರ ಸೇವಿಸಲು ಒಟ್ಟು 275 ದಶಲಕ್ಷ ಟನ್ ಆಹಾರಧಾನ್ಯ ಅಗತ್ಯ. ಅಷ್ಟೇ ಅಲ್ಲದೇ ಭಾರತ 22 ದಶಲಕ್ಷ ಟನ್ ಹೆಚ್ಚುವರಿ ದಾಸ್ತಾನು ಹೊಂದಿರಬೇಕಾಗುತ್ತದೆ. ಜತೆಗೆ 10 ದಶಲಕ್ಷ ಟನ್ ಆಹಾರಧಾನ್ಯವನ್ನು ಕಡ್ಡಾಯ ರಫ್ತು ಅಗತ್ಯತೆಗಾಗಿ ತೆಗೆದಿರಿಸಬೇಕಾಗುತ್ತದೆ.

ಆದರೆ ಭಾರತದಲ್ಲಿ ವಾಸ್ತವ ಸಮಸ್ಯೆ ಎಂದರೆ, ವಿತರಣೆಗೆ ಸಂಬಂಧಿಸ ಸಮಸ್ಯೆಗಳು. ಈ ಸಮಸ್ಯೆಗಳು ಜನರಿಗೆ ಆಹಾರ ಲಭ್ಯವಾಗದಿರಲು ಮುಖ್ಯ ಕಾರಣ. ಆಹಾರದ ಭೌತಿಕ ಭದ್ರತೆ ವಿಚಾರದಲ್ಲಿ ದೇಶದಲ್ಲಿ ಪರಿಣಾಮದ ಕಾರಣ ತಿಳಿಯದಿರಲು ಇದು ಕೂಡಾ ಕಾರಣ. ಅದಾಗ್ಯೂ


www.shikarat.com

ಎಲ್ಲ ಜನರಿಗೆ ಆಹಾರ ಸಿಗುವಂತೆ ಮಾಡಿದರೆ, ಖಂಡಿತವಾಗಿಯೂ ಭಾರತದ ಆಹಾರಧಾನ್ಯ ಕೊರತೆ ಮತ್ತಷ್ಟು ತೀವ್ರ ಸ್ವರೂಪದ್ದು ಎನಿಸಲಿದೆ. ಆಹಾರ ಭದ್ರತಾ ಕಾಯ್ದೆ ಅನ್ವಯ ಎಲ್ಲ ರಾಜ್ಯಗಳು ಎಲ್ಲ ಜನರಿಗೆ ಆಹಾರಧಾನ್ಯ ಲಭ್ಯವಾಗುವಂತೆ ಮಾಡಿದಾಗ ಆಹಾರ ಧಾನ್ಯದ ಕೊರತೆ ಎದುರಾಗಬಹುದು. ಆ ಸಂದರ್ಭದಲ್ಲಿ ಭಾರತ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬರಬಹುದು. ಐಸಿಎಆರ್ ಮತ್ತು ಯೋಜನಾ ಆಯೋಗದ ಅಂದಾಜಿನಂತೆ, 2020ರ ವೇಳೆಗೆ ಭಾರತ ಕನಿಷ್ಠ 340 ದಶಲಕ್ಷ ಟನ್ ಆಹಾರಧಾನ್ಯಗಳನ್ನು ಉತ್ಪಾದಿಸಬೇಕಾಗುತ್ತದೆ. ಈಗ ಆಗುತ್ತಿರುವ ಜನಸಂಖ್ಯೆ ಅಭಿವೃದ್ಧಿ ದರಕ್ಕೆ ಅನುಗುಣವಾಗಿ ಮತ್ತು ಪ್ರಮುಖವಾಗಿ ದೇಶದ ಜನತೆಯ ಖರೀದಿ ಸಾಮರ್ಥ್ಯ ಹೆಚ್ಚುವ ಹಿನ್ನೆಲೆಯಲ್ಲಿ ಈ ಅಂದಾಜು ಮಾಡಲಾಗಿದೆ. ಇದನ್ನು ಸಾಧಿಸಬೇಕಾದರೆ, ಕೃಷಿಭೂಮಿ ಮತ್ತು ನೀರಾವರಿ ಸೌಲಭ್ಯ ಕೂಡಾ ಹೆಚ್ಚಬೇಕಾದ್ದು ಅನಿವಾರ್ಯ.

**ಭಾರತದಲ್ಲಿ ಆಹಾರ ಭದ್ರತೆ ಸಿದ್ಧಾಂತ**

ಭಾರತದಲ್ಲಿ ಆಹಾರ ಭದ್ರತೆಯ ಸವಾಲನ್ನು ಅರ್ಥಮಾಡಿಕೊಳ್ಳಬೇಏಕಾದರೆ, ದೇಶದ ಆಹಾರ ಭದ್ರತೆಯ ಮೂಲ ಸಿದ್ಧಾಂತವನ್ನು ಅರ್ಥ ಮಾಡಿಕೊಳ್ಳಬೇಕು. ದೇಶದ ಅನುಸರಿಸಿದ ಮೂರು ಹಂತಗಳ ಆಹಾರ ನೀತಿಯಿಂದ ದೇಶದ ಆಹಾರ ಭದ್ರತಾ ಸಿದ್ಧಾಂತವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಬಹುದು.

**ಮೊದಲ ಹಂತ**

ಮೊದಲ ಹಂತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಬಳಿಕ ಮೂರು ದಶಕಗಳ ಕಾಲ ಮುಂದುವರಿಯಿತು. ಈ ಅವಧಿಯ ಪ್ರಮುಖವಾದ ಗುರಿ ಮತ್ತು ಹೋರಾಟವೆಂದರೆ, ಭಾರತದ ಜನರಿಗೆ ಸಾಕಾಗುವಷ್ಟು ಆಹಾರಧಾನ್ಯವನ್ನು ಉತ್ಪಾದಿಸುವುದು. ದೇಶದಲ್ಲಿ ಆಹಾರಧಾನ್ಯದ ಸಮರ್ಪಕ ವಿತರಣೆಗೆ ಬೇಕಾಗುವಷ್ಟು ಆಹಾರಧಾನವ್ಯವನ್ನು ಉತ್ಪಾದಿಸುವುದು ಪ್ರಮುಖ ಸವಾಲು ಮತ್ತು ಗುರಿ. ಅಂದರೆ ಜನತೆಗೆ ಭೌತಿಕವಾಗಿ ಆಹಾರ ಲಭ್ಯವಾಗುವಂತೆ ನೋಡಿಕೊಳ್ಳುವುದು. ಈ ಹಂತದ ಕೊನೆಯ ವೇಳೆಗೆ ದೇಶದಲ್ಲಿ ಹಸಿರು ಕ್ರಾಂತಿಯ ಪರಿಕಲ್ಪನೆಯನ್ನು ಜಾರಿಗೊಳಿಸಲಾಯಿತು. ಹಸಿರು ಕ್ರಾಂತಿಯಿಂದಾಗಿ ಭಾರತದ ಗುರಿ ಸಾಧನೆಯಾಗುವ ವಿಶ್ವಾಸ ಮೂಡಿತು. 1
980ರ ದಶಕದ ಕೊನೆಗೆ ಭಾರತ ಆಹಾರಧಾನ್ಯ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿತು.

ಎರಡನೇ ಹಂತ: ಭಾರತ ಮೊದಲ ಹಂತದ ಯಶಸ್ಸಿನ ಬಗ್ಗೆ ಖುಷಿಪಡುತ್ತಿರುವಾಗಲೇ, ಹೊಸ ಸವಾಲುಗಳು ಭಾರತಕ್ಕೆ ಎದುರಾದವು. ಅದು ಜನರಿಗೆ ಆಹಾರದ ಆರ್ಥಿಕ ಲಭ್ಯತೆಯನ್ನು ಸಾಧಿಸುವಂಥದ್ದು. ಈ ಪರಿಸ್ಥಿತಿ ಹದಗೆಡುತ್ತಲೇ ಸಾಗಿತು. 2000ನೇ ಇಸ್ವಿಯ ಆರಂಭದ ವೇಳೆಗೆ, ದೇಶದಲ್ಲಿ ವೈರುಧ್ಯ ಸ್ಥಿತಿ ತಲೆದೋರಿತು. ಅದೆಂದರೆ ದೇಶದ ಕೇಂದ್ರೀಯ ವ್ಯವಸ್ಥೆಯಲ್ಲಿ ಗರಿಷ್ಠ ದಾಸ್ತಾನು ಪ್ರಮಾಣದ ಮೂರು ಪಟ್ಟು ಆಹಾರಧಾನ್ಯ ಸಂಗ್ರಹ ಇತ್ತು. ಆದರೆ ಹಲವು ರಾಜ್ಯಗಳಲ್ಲಿ ಜನ ಆಹಾರ ಅಭಾವದಿಂದ ಸಾಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದು ಗರಿಷ್ಠ ದಾಸ್ತಾನು ಮಾಡುವ ಕ್ರಮದ ಹಿಂದಿನ ತಾರ್ಕಿಕತೆಯನ್ನೇ ಪ್ರಶ್ನಿಸುವಂತಾಯಿತು. ಭಾರತದಲ್ಲಿ ಹಸಿರು ಕ್ರಾಂತಿಯ ಯಶಸ್ಸು ಮತ್ತು ಕಲ್ಯಾಣ ರಾಜ್ಯದ ಪರಿಕಲ್ಪನೆ ಸಾಕಾರಗೊಂಡ ದೇಶದಲ್ಲಿ ಈ ಸ್ಥಿತಿ ನಿರ್ಮಾಣವಾಯಿತು. ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಸುಪ್ರೀಂಕೋರ್ಟ್‌ನಲ್ಲಿ ಈ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ ಬಳಿಕ, ಸುಪ್ರೀಂಕೋರ್ಟ್ ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡಿತು. ಇದಾದ ಬಳಿಕ ರಾಷ್ಟ್ರಮಟ್ಟದಲ್ಲಿ ಕೂಲಿಗಾಗಿ ಕಾಳು ಯೋಜನೆ ಆರಂಭಿಸಲಾಯಿತು. ಈ ಯೋಜನೆಯನ್ನು ಇದೀಗ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ವಿಲೀನಗೊಳಿಸಲಾಗಿದೆ. ಇದಲ್ಲದೇ ಸುಪ್ರೀಂಕೋರ್ಟ್ ಆದೇಶವನ್ನು ಪಾಲಿಸುವ ಸಲುವಾಗಿ (ಆಹಾರಧಾನ್ಯ ಹಾನಿಯಾಗುವುದನ್ನು ತಡೆಯಲು) ಸರ್ಕಾರ ಕಡಿಮೆ ಬೆಲೆಯಲ್ಲಿ ಗೋಧಿ ರಫ್ತು ಮಾಡಲು ಆರಂಭಿಸಿತು. ಈ ಮೂಲಕ ಮಾರುಕಟ್ಟೆ ದರದಲ್ಲಿ ಸ್ಥಿರತೆ ಸಾಧಿಸಿತು. ಈ ಕ್ರಮದಿಂದಾಗಿ ಭಾರತ 2002ರಲ್ಲಿ ವಿಶ್ವದ ಗೋಧಿ ರಫ್ತು ಮಾಡುವ ದೇಶಗಳ ಪೈಕಿ ಏಳನೇ ಸ್ಥಾನಕ್ಕೆ ಜಿಗಿಯಿತು. ಇದು ಎಷ್ಟು ವಿಚಿತ್ರ ಸನ್ನಿವೇಶವೆಂದರೆ, ಆ ಮಾರುಕಟ್ಟೆ ದರದಲ್ಲಿ ಗೋಧಿ ಖರೀದಿಸಲಾದೇ ದೇಶದ ಬಡಜನತೆ ಕಷ್ಟಪಡುತ್ತಿದ್ದರೆ, ಭಾರತ ಅದಕ್ಕಿಂತ ತೀರಾ ಕಡಿಮೆ ಬೆಲೆಗೆ ಗೋಧಿಯನ್ನು ರಫ್ತು ಮಾಡುತ್ತಿತ್ತು.

ಹಸಿರು ಕ್ರಾಂತಿಗೆ ಸಂಬಂಧಿಸಿದಂತೆ ಕೃಷಿ ಪರಿಕರಗಳು ದುಬಾರಿಯಾಗಿದ್ದರಿಂದ, ಉತ್ಪಾದನೆ ಕೂಡಾ ದುಬಾರಿಯಾಗುತ್ತಾ ಹೋಯಿತು. ಈ ದ್ವಂದ್ವವನ್ನು ಬಗೆಹರಿಸುವ ಸಲುವಾಗಿ, ಕಾಲಮಿತಿಯ ಆರ್ಥಿಕ ನೀತಿಗಳನ್ನು ಜಾರಿಗೆ ತರಲಾಯಿತು. ಇದರ ಅನ್ವಯ ಜನಸಾಮಾನ್ಯರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಳ್ಳಲಾಯಿತು. ಅಂದರೆ ಆಹಾರಧಾನ್ಯ ಅವರಿಗೆ ಲಭ್ಯವಾಗುವಂತೆ ಮಾಡಲು ಈ ಕ್ರಮ ಕೈಗೊಳ್ಳಲಾಯಿತು.

ಈ ನಿಟ್ಟಿನಲ್ಲಿ ಭಾರತ ಸಂಪೂರ್ಣವಾಗಿ ವಿಫಲವಾಯಿತು ಎಂದೇ ಹೇಳಬೇಕು. ಸಬ್ಸಿಡಿಯನ್ನು ಒಂದೇಸಮನೆ ಹೆಚ್ಚಿಸುತ್ತಾ ಬಂದಿದ್ದರಿಂದ, ಪರಿಸ್ಥಿತಿ ಮತ್ತಷ್ಟು ವಿಷಮ ಸ್ಥಿತಿ ತಲುಪಿತು. ಇದು ಕೃಷಿ ಮೂಲಸೌಕರ್ಯದ ಮೇಲಿನ ಸರ್ಕಾರಿ ವೆಚ್ಚ ಗಣನೀಯವಾಗಿ ಹೆಚ್ಚಲು ಕಾರಣವಾಯಿತು. ಆಹಾರಧಾನ್ಯಗಳ ಮೇಲೆ ಭಾರಿ ಸಬ್ಸಿಡಿ ನೀಡಿದ ಬಳಿಕವೂ ಕೆಲವ್ಯಕ್ತಿಗಳು ಆಹಾರಧಾನ್ಯವನ್ನು ಖರೀದಿಸುವುದು ಸಾಧ್ಯವಾಗಲಿಲ್ಲ. ಇವರಿಗೆ ಹಸಿವಿನಿಂದ ಸಾಯುವುದು ಬಿಟ್ಟರೆ ಬೇರೆ ಯಾವುದೇ ಆಯ್ಕೆ ಇರಲಿಲ್ಲ. ಇದರ ಜತೆಗೆ ಸಮಸ್ಯೆ ಮತ್ತಷ್ಟು ಸಂಕೀರ್ಣವಾಗುತ್ತಾ ಹೋಯಿತು. ಸಮಸ್ಯೆಗೆ ಹೊಸ ಸೇರ್ಪಡೆ ಎಂದರೆ ಆಹಾರಧಾನ್ಯಗಳ ಕನಿಷ್ಠ ಬೆಂಬಲ ಬೆಲೆ ಹೆಚ್ಚಿಸುವಂತೆ ಒತ್ತಡವೂ ಅಧಿಕವಾಗುತ್ತಾ ಬಂತು. ಅದಾಗ್ಯೂ ರೈತರು ಹೇಳುವಂತೆ ಕೃಷಿ ಇಂದಿಗೂ ಲಾಭದಾಯಕ ಉದ್ಯಮವಾಗಿ ಬೆಳೆದಿಲ್ಲ.

ಎರಡನೇ ಹಂತದ ಸಮಸ್ಯೆಗೆ ಸಂಬಂಧಿಸಿದಂತೆ ಭಾರತ ಈ ಸಂಕಷ್ಟ ಪರಿಸ್ಥಿತಿಯನ್ನು ಎರಡು ದೃಷ್ಟಿಕೋನದ ಮೂಲಕ ಬಗೆಹರಿಸಲು ಪ್ರಯತ್ನ ನಡೆಸುತ್ತಲೇ ಇದೆ. ಒಂದು ಗರಿಷ್ಠ ಲಾಭದಾಯಕ ಉದ್ಯೋಗಗಳ ಸೃಷ್ಟಿ ಹಾಗೂ ಇನ್ನೊಂದು ಆಹಾರಧಾನ್ಯಗಳ ಮೇಲಿನ ವೆಚ್ಚ ನಿಯಂತ್ರಣ (ಹೊಸದಾಗಿ ಜೈವಿಕ ತಂತ್ರಜ್ಞಾನವನ್ನು ಕೃಷಿ ಕ್ಷೇತ್ರದಲ್ಲಿ ಅಳವಡಿಸುವಂತೆ ಮನವೊಲಿಸಲಾಗುತ್ತಿದ್ದು, ಇದನ್ನು ಎರಡನೇ ಹಸಿರು ಕ್ರಾಂತಿ ಎಂದು ಕರೆಯಲಾಗುತ್ತಿದೆ).


www.shikarat.com

ಭಾರತದ ಆಹಾರ ಭದ್ರತೆ ವಿಚಾರವನ್ನು ತೆಗೆದುಕೊಂಡರೆ, ಸ್ವದಕ್ಕೆ ಆಹಾರ ಸ್ವಾವಲಂಬನೆ ಹೊಂದಿರುವುದೇ ಭಾರತಕ್ಕೆ ಅತ್ಯಂತ ಸಂತೋಷದಾಯಕ ವಿಚಾರ. 1990ರ ದಶಕದ ಮಧ್ಯಭಾಗದಿಂದೀಚೆಗೆ, ಜನಸಂಖ್ಯೆ ಹೆಚ್ಚಳದ ಪ್ರಮಾಣಕ್ಕೆ ಹೋಲಿಸಿದರೆ, ಆಹಾರಧಾನ್ಯ ಉತ್ಪಾದನೆ ಬಹಳಷ್ಟು ಹಿಂದುಳಿದಿದೆ. ಅಂದರೆ ಆಹಾರಧಾನ್ಯದ ಭೌತಿಕ ಗುರಿಯನ್ನು ಸಾಧಿಸಲು ಕೂಡಾ ಭಾರತಕ್ಕೆ ಸಾಧ್ಯವಾಗುತ್ತಿಲ್ಲ.

ಮೂರನೇ ಹಂತ: 1980ರ ದಶಕದಿಂದೀಚೆಗೆ, ವಿಶ್ವದಲ್ಲಿ ಆಹಾರಧಾನ್ಯ ಉತ್ಪಾದಿಸಲು ಅನುಸರಿಸುತ್ತಿರುವ ಕ್ರಮಗಳ ಮಾದಿಯನ್ನೇ ತಜ್ಞರು ಪ್ರಶ್ನಿಸಲಾರಂಭಿಸಿದರು. ಅವುಗಳಲ್ಲಿ ಪ್ರಮುಖವಾದದ್ದು, ಬಹುತೇಕ ಕೃಷಿ ಚಟುವಟಿಕೆಗಳು ಇದೀಗ ಕೈಗಾರಿಕೆಗಳನ್ನೇ ಅವಲಂಬಿಸಿರುವುದು. ಅದು ರಸಗೊಬ್ಬರ ಇರಬಹುದು. ಕೀಟನಾಶಕ, ಕೃಷಿ ಪರಿಕರಗಳು, ನೀರಾವರಿ ಉಪಕರಣಗಳು ಇತ್ಯಾದಿ ಯಾವ ಅಂಶವನ್ನು ಪರಿಗಣಿಸಿದರೂ ಕೈಗಾರಿಕೆಗಳ ಮೇಲಿನ ಅವಲಂಬನೆ ತಪ್ಪಿಲ್ಲ. ಆದ್ದರಿಂದ ಬಹುತೇಕ ಮುಂದುವರಿದ ರಾಷ್ಟ್ರಗಳು ಕೃಷಿ ಕ್ಷೇತ್ರವನ್ನು ಕೂಡಾ ಕೈಗಾರಿಕೆ ಎಂದೇ ಪರಿಗಣಿಸಿವೆ. ಇದು ಖಂಡಿತವಾಗಿ ಹಿಂದಿರುಗಿ ನೋಡಿ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮಯ. 1990ರ ಆದಿಭಾಗದಲ್ಲಿ ಹಲವಾರು ದೇಶಗಳು ಪರಿಸರಸ್ನೇಹಿ ಕೃಷಿ ವಿಧಾನಕ್ಕೆ ಒತ್ತು ನೀಡಲು ಆರಂಭಿಸಿದವು. ಇಂಥ ಪರಿಸರ ಸ್ನೇಹಿ ವಿಧಾನಗಳು ಕೈಗಾರಿಕೆ ಮತ್ತು ಸೇವಾ ಕ್ಷೇತ್ರದ ಜತೆಗೆ ಕೃಷಿಕ್ಷೇತ್ರಕ್ಕೂ ಲಗ್ಗೆ ಇಟ್ಟವು. ಇದು ಎಷ್ಟರಮಟ್ಟಿಗೆ ತೀವ್ರವಾಯಿತು ಎಂದರೆ, ಹಸಿರು ಕ್ರಾಂತಿಯನ್ನು ಕೂಡಾ ಪರಿಸರ ದೃಷ್ಟಿಯಿಂದ ಮಾರಕ ವಿಧಾನ ಎಂದು ಪರಿಗಣಿಸಲಾಯಿತು. ಇದೀಗ ಇಡೀ ವಿಶ್ವ ಜೈವಿಕ ಕೃಷಿ, ಹಸಿರು ಕೃಷಿ ಮತ್ತು ಇತರ ಸುಸ್ಥಿರ ಉತ್ಪಾದನಾ ವಿಧಾನಗಳತ್ತ ಗಮನ ಹರಿಸುತ್ತಿವೆ.

ಹಸಿರು ಕ್ರಾಂತಿಯ ಕೃಷಿವಿಧಾನಗಳು ಹಲವಾರು ಕೃಷಿಸಂಬಂಧಿ ಸಮಸ್ಯೆಗಳನ್ನು ಹುಟ್ಟುಹಾಕಲು ಕಾರಣವಾದವು. ಇವುಗಳಲ್ಲಿ ಪ್ರಮುಖವಾದ್ದೆಂದರೆ, ಮಣ್ಣಿನ ಗುಣಮಟ್ಟ ಕುಸಿತ, ಅಂತರ್ಜಲ ಮಟ್ಟ ಕುಸಿತ, ನೀರು ಮತ್ತು ಜಲಮಾಲಿನ್ಯ ಇತ್ಯಾದಿ. ಇದರ ಜತೆಗೆ ಜನರ ಆರೋಗ್ಯದ ಮೇಲೆ ಕೂಡಾ ಇದು ವ್ಯತಿರಿಕ್ತ ಪರಿಣಾಮ ಬೀರಲು ಆರಂಭಿಸಿತು. ಅತಿಯಾದ ರಸಗೊಬ್ಬರ ಬಳಕೆ, ಕೀಟನಾಶಕಗಳ ಬಳಕೆ, ಗಿಡಮೂಲಿಕೆಗಳ ಕೀಟನಾಶಕ ಇತ್ಯಾದಿಗಳು ವಿಷಕಾರಿ ಅಂಶ ಹೆಚ್ಚಲು ಕಾರಣವಾದವು. ಭಾರತದ ಆಹಾರ ಸರಪಣಿ ಎಷ್ಟರಮಟ್ಟಿಗೆ ವಿಷಮಯವಾಗಿದೆ ಎಂದರೆ, ಕೆಲ ವಿಮರ್ಶಕರು ಹೇಳುವಂತೆ, ಭಾರತದಲ್ಲಿ ಉತ್ಪಾದಿಸುವ ಯಾವುದೂ ಮಾನವ ಬಳಕೆಗೆ ಯೋಗ್ಯವಲ್ಲ. ಇಂಥ ಕೃಷಿಪದ್ಧತಿಯನ್ನು ಭಾರತ ಇಂದು ಅನುಸರಿಸುತ್ತಿದೆ. ಅಂದರೆ ಭಾರತ ಆಹಾರಧಾನ್ಯಗಳ ಭೌತಿಕ ಮತ್ತು ಆರ್ಥಿಕ ಲಭ್ಯತೆ ಸವಾಲುಗಳಿಗೆ ಉತ್ತರಿಸಲು ವಿಫಲವಾಗಿರುವುದು ಮಾತ್ರವಲ್ಲದೇ, ಅಮೂಲ್ಯ ಪರಿಸರವನ್ನು ಕಡೆಗಣಿಸಿ ಇಂಥ ಅಪಾಯಕಾರಿ ನೀತಿಯನ್ನು ಅನುಸರಿಸುತ್ತಿರುವುದು ಕೂಡಾ ಕಳವಳಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಭಾರತಕ್ಕೆ ಹೊಸ ಬಗೆಯ ಹಸಿರುಕ್ರಾಂತಿಯ ಅಗತ್ಯವಿದೆ. ಇದು ದೇಶದ ಜನತೆಗೆ ಆಹಾರಧಾನ್ಯ ಭೌತಿಕ ಹಾಗೂ ಆರ್ಥಿಕವಾಗಿ ಲಭ್ಯವಾಗುವಂತೆ ನೋಡಿಕೊಳ್ಳುವ ಜತೆಗೆ ಆಹಾರಧಾನ್ಯಗಳ ಪರಿಸರ ಲಭ್ಯತೆಯನ್ನೂ ಪೂರೈಸುವಂತಿರಬೇಕು. ಅಂದರೆ ಇದೀಗ ಅನಿವಾರ್ಯವಾಗಿರುವ ಎರಡನೇ ಹಸಿರು ಕ್ರಾಂತಿಯಲ್ಲಿ ಈ ಎಲ್ಲ ಅಂಶಗಳನ್ನೂ ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

**ಸದ್ಯದ ಸ್ಥಿತಿಗತಿ**

ಭಾರತದ ಕೃಷಿ ಕ್ಷೇತ್ರ , ದೇಶದಲ್ಲೇ ಅತಿದೊಡ್ಡ ಉದ್ಯೋಗ ನೀಡುವ ಕ್ಷೇತ್ರವಾಗಿದೆ. ಅಂದರೆ ದೇಶದ ಲಭ್ಯ ಕೆಲಸಗಾರರ ಪೈಕಿ ಶೇಕಡ 58.2 ಮಂದಿಗೆ ಈ ಕ್ಷೇತ್ರ ಉದ್ಯೋಗ ಕಲ್ಪಿಸಿದೆ. ಅದಾಗ್ಯೂ ಕೃಷಿಕ್ಷೇತ್ರ ಒಟ್ಟಾರೆ ರಾಷ್ಟ್ರೀಯ ಉತ್ಪನ್ನಕ್ಕೆ ನೀಡುತ್ತಿರುವ ಕೊಡುಗೆ ಅತಿ ಕಡಿಮೆ ಅಂದರೆ ಶೇಕಡ 14.1 ಮಾತ್ರ ಎಂದು 2012–13ರ ಆರ್ಥಿಕ ಸಮೀಕ್ಷೆ ವರದಿ ಸ್ಪಷ್ಟಪಡಿಸಿದೆ. ವಿಚಿತ್ರವೆಂದರೆ, ಮಾನವನ ಅತಿಮುಖ್ಯ ಮೂಲಭೂತ ಅಗತ್ಯವಾದ ಆಹಾರ ಉತ್ಪಾದನಾ ಕ್ಷೇತ್ರವನ್ನು ನಷ್ಟದಾಯಕ ಕ್ಷೇತ್ರ ಎಂದು ಪರಿಗಣಿಸಿರುವುದು. ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಪ್ರತಿ ಹತ್ತು ಕುಟುಂಬಗಳ ಪೈಕಿ ಎಂಟು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿವೆ. ಇದರ ಜತೆಗೆ ಪ್ರತಿ ನಾಲ್ಕು ಮಂದಿ ಗ್ರಾಮವಾಸಿಗಳ ಪೈಕಿ ಮೂರು ಮಂದಿಯ ಜೀವನಾಧಾರ ಕೃಷಿಕ್ಷೇತ್ರ. ಅಂದರೆ ಕೃಷಿ ಕ್ಷೇತ್ರದ ಮೇಲಿನ ಹೂಡಿಕೆಯಗೆ ಕನಿಷ್ಠ ನಾಲ್ಕುಪಟ್ಟು ಪ್ರತಿಫಲ ದೊರಕಲೇಬೇಕು. ಇತರ ಯಾವುದೇ ಕ್ಷೇತ್ರಗಳಿಗೆ ಹೋಲಿಸಿದರೆ, ಬಡತನ ನಿರ್ಮೂಲನೆ ಮಾಡುವ ಸಾಮರ್ಥ್ಯ ಇರುವುದು ಈ ಕ್ಷೇತ್ರಕ್ಕೆ. ಎಲ್ಲಕ್ಕಿಂತ ಮುಖ್ಯವಾಗಿ ಕೃಷಿಕ್ಷೇತ್ರದಲ್ಲಿನ ಬದಲಾವಣೆ ದೇಶದ 50 ಕೋಟಿ ಮಂದಿಯ ಮೇಲೆ ಪರಿಣಾಮ ಬೀರುತ್ತದೆ.

ವಿಶ್ವದಲ್ಲಿ ಜನಸಂಖ್ಯೆ ಹೆಚ್ಚಳವಾಗುತ್ತಿದ್ದು, ಸಂಪನ್ಮೂಲಗಳ ಲಭ್ಯತೆ ಕುಸಿಯುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತಕ್ಕೆ ಕೃಷಿ ಕ್ಷೇತ್ರದಲ್ಲಿ ಬಹುದೊಡ್ಡ ಅವಕಾಶವಿದೆ. ಭಾರತ ಈ ಅವಕಾಶದಿಂದ ತಪ್ಪಿಸಿಕೊಳ್ಳುವಂತೆಯೇ ಇಲ್ಲ. ಜಾಗತಿಕ ಮಟ್ಟದಲ್ಲಿ ಕೃಷಿಯೋಗ್ಯ ಭೂಮಿ ಕೇವಲ ಶೇಕಡ 11 ಆಗಿದ್ದರೆ, ಭಾರತದಲ್ಲಿ ಕೃಷಿಯೋಗ್ಯ ಭೂಮಿ ಶೇಕಡ 52ರಷ್ಟಿದೆ. ಇದರಿಂದ ಭಾರತಕ್ಕೆ ಇತರ ರಾಷ್ಟ್ರಗಳಿಗಿಂತ ಐದು ಪಟ್ಟು ಹೆಚ್ಚು ಪ್ರಯೋಜನವಿದೆ. ಭಾರತದಲ್ಲಿ ಸಾಕುಪ್ರಾಣಿಗಳು ಸಂಖ್ಯೆಯೂ ವಿಶ್ವದಲ್ಲೇ ಗರಿಷ್ಠ ಪ್ರಮಾಣದಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಭಾರತಕ್ಕೆ ನೈಸರ್ಗಿಕ ವರ ಎಂದರೆ ಭಾರತದಲ್ಲಿ ಎಲ್ಲ 15 ಬಗೆಯ ಹವಾಗುಣ ಇದೆ. ವಿಶ್ವದಲ್ಲಿ ಒಟ್ಟು ಇರುವ 60 ಮಣ್ಣಿನ ವರ್ಗಗಳ ಪೈಕಿ 46 ಜಾತಿಯ ಮಣ್ಣು ಭಾರತದಲ್ಲಿದೆ. ದೇಶದಲ್ಲಿ 20 ಕೃಷಿ ವಾತಾವರಣ ಪ್ರದೇಶ ಹಾಗೂ 10 ಜೀವವೈವಿಧ್ಯ ತಾಣಗಳು ಭಾರತದಲ್ಲಿರುವುದರಿಂದ ಕೃಷಿವೈವಿಧ್ಯಕ್ಕೆ ಭಾರತದಲ್ಲಿ ವಿಪುಲ ಅವಕಾಶಗಳಿವೆ. ಇದರ ಜತೆಗೆ ದೇಶದಲ್ಲಿ ಸಾಕಷ್ಟು ಬಿಸಿಲು ಕೂಡಾ ಬೀಳುತ್ತದೆ.

ಹಗಲು ಹೆಚ್ಚಿನ ಪ್ರಮಾಣದಲ್ಲಿದ್ದು, ವರ್ಷವಿಡೀ ಒಂದಲ್ಲ ಒಂದು ರೀತಿಯ ಬೇಸಾಯಕ್ಕೆ ಅನುಕೂಲವಾದ ವಾತಾವರಣವಿದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಇಂದಿನ ತುರ್ತು ಅಗತ್ಯವೆಂದರೆ, ಈಗ ಇರುವ ಕೃಷಿಪದ್ಧತಿಯ ಬದಲಾಗಿ, ಕ್ಷಿಪ್ರ ಮತ್ತು ಗಮನಾರ್ಹ ಪ್ರಗತಿಗೆ ಅನುಕೂಲಕರವಾಗುವ ಮತ್ತು ಕಡಿಮೆ ವೆಚ್ಚದಲ್ಲಿ ಹೆಚ್ಚು ಉತ್ಪಾದನೆ ಮಾಡುವ ಕೃಷಿವಿಧಾನದ ಸಂಶೋಧನೆ. ನ್ಯಾಷನಲ್ ಕೌನ್ಸಿಲ್ ಫಾರ್ ಅಪ್ಲೈಡ್ ಎಕನಾಮಿಕ್ ರಿಸರ್ಚ್ ವರದಿಯ ಪ್ರಕಾರ, ಮುಂದಿನ ದಿನಗಳಲ್ಲಿ ಎಲ್ಲ ಕೃಷಿ ಉತ್ಪನ್ನಗಳು ಕೂಡಾ ದೇಶದಲ್ಲಿ ದೊಡ್ಡ ವ್ಯಾಪಾರಿ ವಸ್ತುವಾಗಿ ಬದಲಾವಣೆಯಾಗಬೇಕು. ಇದು ಸಾಧ್ಯವಾದರೆ ಮುಂದಿನ ದಶಕದ ವೇಳೆಗೆ ಕೇವಲ ಆಹಾರಧಾನ್ಯಗಳೇ, ಸುಮಾರು 300 ಶತಕೋಟಿ ಡಾಲರ್ ಮೌಲ್ಯದ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಿದೆ. ಆದ್ದರಿಂದ ಕೃಷಿಕ್ಷೇತ್ರದ ಬಗ್ಗೆ ಗಮನ ಹರಿಸಲು ಇದು ಸೂಕ್ತ ಸಮಯ. ಕೇವಲ ಆಹಾರಧಾನ್ಯದಲ್ಲಿ ಸ್ವಾವಲಂಬನೆ ಸಾಧಿಸುವುದು ಮತ್ತು ಆಹಾರ ಭದ್ರತೆಯನ್ನು ಸಾಧಿಸುವುದಷ್ಟೇ ಗುರಿಯಾಗಿರದೇ, ಅಧಿಕ




www.shikarat.com

ಪ್ರಮಾಣದಲ್ಲಿ ಉತ್ಪಾದನೆ ಮಾಡುವುದರಿಂದ ಆಹಾರಧಾನ್ಯದ ರಫ್ತು ಕೂಡಾ ಸಾಧ್ಯವಾಗಲಿದೆ. ಇದರಿಂದ ಸಹಜವಾಗಿಯೇ ಕೃಷಿಕ್ಷೇತ್ರದ ಆದಾಯ ಹೆಚ್ಚುತ್ತದೆ. ಜತೆಗೆ ಕೃಷಿಕರ ವೈಯಕ್ತಿಕ ಆದಾಯ ಕೂಡಾ ಅಧಿಕವಾಗುತ್ತದೆ. ಅಂತಿಮವಾಗಿ ಇದು ದೇಶದ ಆರ್ಥಿಕತೆಯ ಮೇಲೆ ಕೂಡಾ ಧನಾತ್ಮಕ ಪರಿಣಾಮ ಬೀರುತ್ತದೆ.

**ಪರ್ಯಾಯಗಳು**

ಕೃಷಿಕ್ಷೇತ್ರವನ್ನು ಹೆಚ್ಚು ದಕ್ಷ, ಉತ್ಪಾದಕ, ಅಧಿಕ ಪ್ರತಿಫಲದ ಕ್ಷೇತ್ರವಾಗಿ ಮಾರ್ಪಡಿಸುವುದು ಮತ್ತು ಕೃಷಿಯನ್ನು ಗೌರವಯುತ ಉದ್ಯೋಗವಾಗಿ ಮಾರ್ಪಡಿಸುವುದು ಭಾರತದ ಮುಂದಿರುವ ಸವಾಲು. ಈ ನಿಟ್ಟಿನಲ್ಲಿ ಸರ್ಕಾರ ಪ್ರಮುಖ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ತಳಹಂತದಲ್ಲಿ ಇದರ ಪರಿಣಾಮಗಳನ್ನು ಕಾದು ನೋಡಬೇಕಾಗಿದೆ. ಈ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ಕೆಲ ಪ್ರಮುಖ ವಿಧಾನಗಳು ಮತ್ತು ಉತ್ತೇಜಕ ಕ್ರಮಗಳೆಂದರೆ:

* ಹೊಸ ಕೃಷಿನೀತಿಯನ್ನು 200ನೇ ಇಸ್ವಿಯಲ್ಲಿ ಜಾರಿಗೊಳಿಸಲಾಯಿತು. ಇದು ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸುತ್ತದೆ. ಈ ಹಿನ್ನೆಲೆಯಲ್ಲಿ ಇದೀಗ ಕೃಷಿ ಕ್ಷೇತ್ರವೂ ಕೈಗಾರಿಕೆಗಳಿಗೆ ಸಿಗುವ ಎಲ್ಲ ಪ್ರಯೋಜನಗಳನ್ನು ಪಡೆಯಲು ಅರ್ಹವಾಗುತ್ತದೆ. ಜತೆಗೆ ಕೃಷಿ ಉತ್ಪನ್ನಗಳು ಮಾರುಕಟ್ಟೆಯ ಸರಕುಗಳಾಗುತ್ತವೆ. ಅದಾಗ್ಯೂ ಬಡವರಿಗೆ ಸಮಾನ ಖರೀದಿಹಕ್ಕು ಇಲ್ಲದಿರುವುದರಿಂದ ಇಂಥ ವಸ್ತುಗಳ ಬೆಲೆ ನಿಯಂತ್ರಣ ವ್ಯವಸ್ಥೆಯ ಮರುಪರಿಶೀಲನೆಗೆ ಸರ್ಕಾರ ಮಧ್ಯಪ್ರವೇಶಿಸಬೇಕು. ಇತರ ಕೈಗಾರಿಕೆಗಳಿಗೆ ಹೋಲಿಸಿದರೆ, ಕೃಷಿಕ್ಷೇತ್ರ ಇದುವರೆಗೂ ದೊಡ್ಡ ಪ್ರಮಾಣದ ಬಂಡವಾಳವನ್ನು ಆಕರ್ಷಿಸಿಲ್ಲ. ಇಲ್ಲಿ ಬಂಡವಾಳ ಎಂದರೆ ವೈಯಕ್ತಿಕ ಮಟ್ಟದಲ್ಲಿ. ಈ ಹಿನ್ನೆಲೆಯಲ್ಲಿ ಕೃಷಿಕ್ಷೇತ್ರಕ್ಕೆ ದೊಡ್ಡ ಕಂಪನಿಗಳು ಕೃಷಿ ಕ್ಷೇತ್ರದ ಬಂಡವಾಳ ಅಂಶದ ಬಗ್ಗೆ ಗಮನ ಹರಿಸಬೇಕಾದ ಅಗತ್ಯವಿದೆ. ಆಗ ಮಾತ್ರ ಕೃಷಿಕ್ಷೇತ್ರ ಪರಿಪೂರ್ಣ ಕೈಗಾರಿಕೆಯಾಗಿ ಮಾರ್ಪಡಲು ಸಾಧ್ಯ.

* ಕೃಷಿಕ್ಷೇತ್ರದಲ್ಲಿ ಕೈಗಾರಿಕಾ ಮಟ್ಟದ ದೊಡ್ಡ ಬಂಡವಾಳ ಹರಿದುಬರಲು ಅನುಕೂಲವಾಗುವಂತೆ ಹೊಸ ರಾಷ್ಟ್ರೀಯ ಕೃಷಿನೀತಿಯು ಗುತ್ತಿಗೆ ಕೃಷಿ ಮತ್ತು ಕಾರ್ಪೊರೇಟ್ ಕೃಷಿ ವಿಧಾನಕ್ಕೆ ಒಪ್ಪಿಗೆ ನೀಡಿದೆ. ಅದಾಗ್ಯೂ ಕಾರ್ಪೊರೇಟ್ ಕೃಷಿಯ ಪರಿಕಲ್ಪನೆ ಇನ್ನೂ ಜನಪ್ರಿಯವಾಗಿಲ್ಲ. ಈ ವಿಧಾನದಲ್ಲಿ ಭೂಮಿಯ ಒಡೆತನ ಸಣ್ಣ ರೈತರ ಬದಲಾಗಿ ಕಾರ್ಪೊರೇಟ್ ಕಂಪನಿಯ ಹೆಸರಿನಲ್ಲಿರುತ್ತದೆ. ಅಂತೆಯೇ ಗುತ್ತಿಗೆ ಕೃಷಿಯ ಸಾಧ್ಯತೆಗಳು ಕೂಡಾ ಇನ್ನೂ ಶೈಶವಾವಸ್ಥೆಯಲ್ಲೇ ಇದೆ. ಕಾರ್ಪೊರೇಟ್ ಕೃಷಿ ಪದ್ಧತಿ ಭಾರತದಲ್ಲಿ ಇನ್ನೂ ಜನಪ್ರಿಯವಾಗದಿರಲು ಮುಖ್ಯ ಕಾರಣವೆಂದರೆ, ಭಾರತದಲ್ಲಿ ಭೂಮಿ ಕೇವಲ ಜೀವನಾಧಾರದ ಮೂಲವಷ್ಟೇ ಅಲ್ಲ; ಅದಕ್ಕೆ ಬಹುಮುಖ್ಯವಾಗಿ, ಸಮಾಜದಲ್ಲಿ ವ್ಯಕ್ತಿಯೊಬ್ಬನ ಸ್ಥಾನಮಾನವನ್ನು ನಿರ್ಧರಿಸುವ ಆರ್ಥಿಕ ಮೌಲ್ಯವೂ ಇದೆ. ಭೂಮಿ ಸಮಾಜದಲ್ಲಿ ಆತನ ಸ್ಥಿತಿಯನ್ನು ವ್ಯಾಖ್ಯಾನಿಸುವ ಹಿನ್ನೆಲೆಯಲ್ಲಿ ಯಾರೂ ಭಾರತದಲ್ಲಿ ತಮ್ಮ ಜಮೀನು ಮಾರಾಟ ಮಾಡಲು ಇಚ್ಛಿಸುವುದಿಲ್ಲ. ಇನ್ನೊಂದು ಪ್ರಮುಖ ಕಾರಣವೆಂದರೆ, ಇತರ ಲಾಭದಾಯಕ ಉದ್ಯೋಗಾವಕಾಶ ಸೃಷ್ಟಿಯಾಗದೇ ಇರುವುದು ಕೂಡಾ ಕೃಷಿಕ್ಷೇತ್ರ ಕೈಗಾರಿಕೆಯಾಗಿ ತಲೆ ಎತ್ತಲು ಸಾಧ್ಯವಾಗದಿರುವುದಕ್ಕೆ ಕಾರಣ.

* ಇದು ಸಾಲದೆಂಬಂತೆ ಭಾರತದಲ್ಲಿ ಇರುವ ಕಟ್ಟುನಿಟ್ಟಿನ ಕಾರ್ಮಿಕ ಕಾನೂನುಗಳು ಕೂಡಾ, ಕಾರ್ಪೊರೇಟ್ ಹಾಗೂ ಗುತ್ತಿಗೆ ಪದ್ಧತಿ ಕೃಷಿಗೆ ಪ್ರತಿಕೂಲವಾಗಿದೆ. ಆದರೆ ಇದಕ್ಕೆ ಪೂರಕವಾದ ಕಾರ್ಮಿಕ ನೀತಿ ಭಾರತದಲ್ಲಿ ಇನ್ನೂ ಬಂದಿಲ್ಲ.

* ಕೃಷಿ ಉತ್ಪನ್ನಗಳಿಗೆ ಕೂಡಾ ಕೈಗಾರಿಕಾ ಉತ್ಪಾದನೆಗಳಂತೆಯೇ ಸುರಕ್ಷೆ ಒದಗಿಸುವ ಸಲುವಾಗಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ (1999) ಆರಂಭಿಸಲಾಗಿದೆ. ಇದರ ನಂತರ ಬಿತ್ತನೆಬೀಜ ವಿಮಾ ಯೋಜನೆ ಜಾರಿಗೆ ಬಂದಿದ್ದರೂ ಇದಕ್ಕೆ ನಿರೀಕ್ಷಿತ ಸ್ಪಂದನೆ ರೈತರಿಂದ ಸಿಕ್ಕಿಲ್ಲ. ಜತೆಗೆ ಈ ಬಗ್ಗೆ ರೈತರಲ್ಲಿ ಹೆಚ್ಚಿನ ಅರಿವು ಮೂಡಿಸುವ ಕಾರ್ಯವೂ ಆಗಿಲ್ಲ. ಇದೀಗ ಭಾರತದಲ್ಲಿ ಇಡೀ ಕೃಷಿವಲಯಕ್ಕೆ ವಿಮಾ ಪ್ಯಾಕೇಜ್ ನೀಡುವ ಸೌಲಭ್ಯವಿದೆ. ಅಂದರೆ ಉತ್ಪಾದನೆ ಕುಂಠಿತವಾಗುವುದರಿಂದ ಹಿಡಿದು ಮಾರುಕಟ್ಟೆ ಕೊರತೆ ಸಮಸ್ಯೆಯವರೆಗೂ ಎಲ್ಲಕ್ಕೂ ವಿಮಾಸುರಕ್ಷೆ ಇದೆ. 2002ನೇ ಇಸ್ವಿಯಲ್ಲಿ ಸರ್ಕಾರವು ಕೃಷಿಕ್ಷೇತ್ರವು ಪ್ರಮುಖ ಚಾಲ್ತಿಯಲ್ಲಿರುವ ಉದ್ಯಮ ಎಂದು ಘೋಷಿಸಿತು. ( ಅದುವರೆಗೂ ಕೈಗಾರಿಕೆ ಈ ಸ್ಥಾನದಲ್ಲಿತ್ತು). ಅಂದರೆ ಇದುವರೆಗೆ ಕೈಗಾರಿಕಾ ಕ್ಷೇತ್ರಕ್ಕೆ ದೊರಕುತ್ತಿದ್ದ ಎಲ್ಲ ಸೌಲಭ್ಯಗಳು ಇನ್ನುಮುಂದೆ ಕೃಷಿಕ್ಷೇತ್ರಕ್ಕೂ ಸಿಗಲಿವೆ. ಇಲ್ಲಿಕೂಡಾ ಇರುವ ದೊಡ್ಡ ಸಮಸ್ಯೆ ಎಂದರೆ ಕೃಷಿಕ್ಷೇತ್ರಕ್ಕೆ ಬಂಡವಾಳ ಮಾರ್ಗವನ್ನು ಕಂಡುಹಿಡಿಯುವುದು. ಇದಕ್ಕೆ ಇರುವ ಏಕೈಕ ಮಾರ್ಗವೆಂದರೆ ಖಾಸಗಿ ಹೂಡಿಕೆ. ಸರ್ಕಾರ ಈಗಾಗಲೇ ಕೃಷಿಕ್ಷೇತ್ರದ ಮೇಲಿನ ಸಬ್ಸಿಡಿಯನ್ನು ಕಡಿತಗೊಳಿಸಬೇಕಾದ ಅನಿವಾರ್ಯತೆಯಲ್ಲಿ ಸಿಲುಕಿರುವುದರಿಂದ ಖಾಸಗಿ ಬಂಡವಾಳವಷ್ಟೇ ಈಗ ಕೃಷಿಗೆ ಮೂಲ.

* ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಮೈಕ್ರೊ ಮ್ಯಾನೇಜ್‌ಮೆಂಟ್ ಆಫ್ ಅಗ್ರಿಕಲ್ಚರ್‌ನಂಥ ಹಲವಾರು ಯೋಜನೆಗಳನ್ನು ಸರ್ಕಾರ ಇದೀಗ ಜಾರಿಗೆ ತಂದಿದೆ. ಕೃಷಿಕ್ಷೇತ್ರದಲ್ಲಿ ಸಾರ್ವಜನಿಕ ಬಂಡವಾಳ ಹೂಡಿಕೆ ಪ್ರಮಾಣ ಹೆಚ್ಚಿಸುವ ಸಲುವಾಗಿ ಈ ಕ್ರಮಗಳನ್ನು ಕೈಗೊಂಡಿದೆ. ಇದು ಸ್ವಲ್ಪಮಟ್ಟಿಗೆ ಆಶಾದಾಯಕ ಫಲಿತಾಂಶವನ್ನು ನೀಡುತ್ತಿದೆ. ಆದರೆ ಇಡೀಕೃಷಿಕ್ಷೇತ್ರವನ್ನು ಬಲಪಡಿಸಲು ಅಗತ್ಯವಾದ ಪ್ರಮಾಣದಲ್ಲಿ ಬಮಡವಾಳ ಆಕರ್ಷಿಸುವ ಹಂತಕ್ಕೆ ಇದು ಇನ್ನೂ ಬೆಳೆಯಬೇಕಾಗಿದೆ.

* ಕೃಷಿ ವಿಸ್ತರಣೆ (ಸಂಶೋಧನೆ ಮತ್ತು ಅಭಿವೃದ್ಧಿ) ಇಡೀ ಕ್ಷೇತ್ರದಲ್ಲಿ ಮರು ವ್ಯಾಖ್ಯಾನಗೊಳ್ಳಬೇಕಾದ ಪರಿಕಲ್ಪನೆ. ಖಾಸಗಿ ವಲಯದ ಪಾಲ್ಗೊಳ್ಳುವಿಕೆ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅಗತ್ಯ ಬದಲಾವಣೆ ಕೃಷಿ ವಿಸ್ತರಣೆ ಕ್ಷೇತ್ರದಲ್ಲಿ ಆಗಬೇಕಿದೆ. ಆದರೆ ಕೃಷಿಕ್ಷೇತ್ರದಲ್ಲಿ ಕಾರ್ಪೊರೇಟ್ ಕಂಪನಿಗಳು ಪ್ರವೇಶಿಸುವ ವರೆಗೂ ಕೃಷಿ ಸಂಶೋಧನೆಗೆ ಅಗತ್ಯ ಪ್ರಮಾಣದ ಬಂಡವಾಳ ಖಂಡಿತವಾಗಿಯೂ ಲಭ್ಯವಾಗದು.


www.shikarat.com

* ವಿವಿಧ ಕೃಷಿ ಪರಿಕರಗಳಿಗೆ ಒದಗಿಸುತ್ತಿದ್ದ ಸಬ್ಸಿಡಿಯನ್ನು ಕಡಿತಗೊಳಿಸುವ ಹಂತ ಕೂಡಾ ಸನ್ನಿಹಿತವಾಗಿದೆ. ರಸಗೊಬ್ಬರ, ವಿದ್ಯುತ್, ನೀರಾವರಿ ಮತ್ತಿತರ ಕ್ಷೇತ್ರಗಳ ಸಬ್ಸಿಡಿ ರದ್ದಾಗುವ ಹಂತದಲ್ಲಿದೆ. ಇನ್ನೊಂದು ಕಡೆ ವಿವಿಧ ಉದ್ಯೋಗ ಸೃಷ್ಟಿ ಯೋಜನೆಗಳ ಮೂಲಕ ಜನಸಾಮಾನ್ಯರ ಖರೀದಿ ಸಾಮರ್ಥ್ಯ ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಿವೆ.

ಮಹತ್ವದ ಅಂಶವೆಂದರೆ ಭಾರತ ಆಹಾರ ಭದ್ರತೆ ಕ್ಷೇತ್ರದಲ್ಲಿ ಮೂರು ಬಗೆಯ ಸವಾಲುಗಳನ್ನು ಎದುರಿಸುತ್ತಿದೆ. ವಿಶ್ವಮಟ್ಟದಲ್ಲಿ ಆಗುತ್ತಿರುವ ಹೊಸ ಬೆಳವಣಿಗೆಗಳು ಭಾರತದ ಆಹಾರಧಾನ್ಯ ಕ್ಷೇತ್ರದಲ್ಲೂ ಹೊಸ ಸವಾಲುಗಳಿಗೆ ಕಾರಣವಾಗುತ್ತಿದೆ. ಅದು ಜಾಗತೀಕರಣದಿಂದ ಆಗುವ ಅಪಾಯ. ಅಂದರೆ ಬೆಲೆ ಮತ್ತು ಗುಣಮಟ್ಟದಲ್ಲಿ ಜಾಗತಿಕ ಪೈಪೋಟಿಗೆ ಸಜ್ಜಾಗುವುದು ಮತ್ತು ಆಂತರಿಕ ಮಾರುಕಟ್ಟೆಯಲ್ಲಿ ಬೆಲೆ ಸ್ಥಿರತೆ ಕಾಪಾಡುವುದು, ದೇಶದ ಬಡವರ ಸಲುವಾಗಿ ಆಹಾರ ಸ್ವಾವಲಂಬನೆ ಸಾಧಿಸುವುದು ಭಾರತದ ಮುಂದಿರುವ ಪ್ರಮುಖ ಸವಾಲುಗಳು.

ಭಾರತಕ್ಕೆ ಎದುರಾಗಿರುವ ಸವಾಲುಗಳನ್ನು ಭಾರತ ಈ ಕೆಳಗಿನ ಎರಡು ವಿಧಾನಗಳ ಮೂಲಕ ಎದುರಿಸಬಹುದಾಗಿದೆ.

1. ಶ್ರೀಮಂತ ರಾಷ್ಟ್ರಗಳಿಗೆ ಕೃಷಿಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಇರುವ ಅವಕಾಶಗಳನ್ನು ಬಳಸಿಕೊಂಡು ಆಯ್ದ ಮತ್ತು ಸಮರ್ಪಕ ವ್ಯಾಪಾರ ನಿರ್ಬಂಧ ಕ್ರಮಗಳನ್ನು ಕೈಗೊಳ್ಳುವ ಹಾಗೂ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ಸಂಬಂಧ ವಿಶ್ವವ್ಯಾಪಾರ ಸಂಸ್ಥೆಯ ಒಪ್ಪಂದದ ಅಂಶಗಳ ಲಾಭ ಪಡೆದುಕೊಳ್ಳುವುದು.
2. ಕೃಷಿಯನ್ನು ವಾಣಿಜ್ಯೀಕರಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಕೈಗಾರಿಕೆಯಾಗಿ ಪರಿವರ್ತಿಸುವುದು.

## 8. ಹಸಿರು ಕ್ರಾಂತಿ

ಸ್ವಾತಂತ್ರ್ಯ ಬಂದಾಗಿನಿಂದಲೂ ಭಾರತಕ್ಕೆ ಇರುವ ಬಲುದೊಡ್ಡ ಸವಾಲು ಎಂದರೆ, ಹೆಚ್ಚುತ್ತಿರುವ ದೇಶದ ಜನಸಂಖ್ಯೆಗೆ ಅನುಗುಣವಾಗಿ ತನ್ನ ಆಹಾರಧಾನ್ಯ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದು. ಈ ನಿಟ್ಟಿನಲ್ಲಿ ಇಂದಿಗೂ ಆಗಿರುವ ಬದಲಾವಣೆ ನಗಣ್ಯ. ಅದಾಗ್ಯೂ ಭಾರತ ಇಡೀ ವಿಶ್ವಕ್ಕೆ ಆಹಾರ ಭದ್ರತೆಯನ್ನು ಪ್ರಸ್ತಾವಿಸುತ್ತದೆ! ಭಾರತ ಮೊದಲ ಹಂತದಲ್ಲಿ ಕೃಷಿಯೋಗ್ಯ ಭೂಮಿಯ ಬಳಕೆಯನ್ನು ಹೆಚ್ಚಿಸುವ ಮೂಲಕ ಆಹಾರಧಾನ್ಯ ಉತ್ಪಾದನೆ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿತು. ಅದು ಭೂ ಸುಧಾರಣಾ ಕ್ರಮಗಳ ಮೂಲಕ. ಆದರೆ 1960ರ ದಶಕದಲ್ಲಿ ಈ ಪ್ರಯತ್ನಕ್ಕೆ ಹಿನ್ನಡೆಯಾಯಿತು. ಇದೇ ವೇಳೆ, ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಗಳ ಮೂಲಕ ಉತ್ಪಾದನೆ ಹೆಚ್ಚಿಸುವ ಪರ್ಯಾಯ ಕ್ರಮವನ್ನೂ ಭಾರತ ಜಾರಿಗೆ ತಂದಿತು.

**ಪೂರ್ವಸಿದ್ಧತೆ**

ಕೃಷಿ ಕ್ಷೇತ್ರದಲ್ಲಿ ಹೊಸ ತಂತ್ರಗಳನ್ನು ಅಳವಡಿಸುವ ಪ್ರಯತ್ನ ಹೆಚ್ಚು ಇಳುವರಿ ನೀಡುವ ತಳಿಯ ಬೀಜದ ಸುತ್ತ ಸಾಗಿತ್ತು. ಅಮೆರಿಕ ಮೂಲದ ಕೃಷಿತಜ್ಞ, ಮಾನವೀಯತೆಯ ಸಾಕಾರಮೂರ್ತಿ ಮತ್ತು ನೊಬೆಲ್ ಪುರಸ್ಕೃತ ನೋರ್ಮನ್ ಬೋರ್ಲಿಂಗ್ ಈ ವಿಶೇಷ ತಳಿ ಅಭಿವೃದ್ಧಿಪಡಿಸಿ, ಇಡೀ ವಿಶ್ವದಲ್ಲಿ ಹಸಿರು ಕ್ರಾಂತಿಯ ಹರಿಕಾರ ಎನಿಸಿಕೊಂಡಿದ್ದರು. ಭಾರತದಲ್ಲಿ ಕೂಡಾ ಹೆಚ್ಚು ಇಳುವರಿ ಪಡೆಯುವ ತಂತ್ರಗಳು ಸ್ಫೂರ್ತಿ ಪಡೆದದ್ದು ಇದೇ ಪ್ರಯೋಗದಿಂದ.

ಇಪ್ಪತ್ತನೇ ಶತಮಾನದ ನಡುಭಾಗದಲ್ಲಿ, ಬೋರ್ಲಿಂಗ್ ತನ್ನ ಸಂಶೋಧನೆಯ ಹೊಸ ತಳಿಗಳನ್ನು ಮತ್ತು ಆಧುನಿಕ ಕೃಷಿ ಉತ್ಪಾದನಾ ತಂತ್ರಗಳನ್ನು ಮೆಕ್ಸಿಕೊ, ಪಾಕಿಸ್ತಾನ ಮತ್ತು ಭಾರತದಲ್ಲಿ ಅನುಷ್ಠಾನಕ್ಕೆ ತಂದರು. 1965ರಿಂದ 1970ರ ನಡುವೆ, ಭಾರತದ ಗೋಧಿ ಉತ್ಪಾದನೆ ಪ್ರಮಾಣ ದ್ವಿಗುಣಗೊಂಡಿತು. ಇದು ಭಾರತದ ಆಹಾರಭದ್ರತೆ ಉತ್ತಮ ಸ್ಥಿತಿ ತಲುಪಲು ಕಾರಣವಾಯಿತು.

ಬೋರ್ಲಿಂಗ್ ಅಭಿವೃದ್ಧಿಪಡಿಸಿದ ಈ ಗೋಧಿ ತಳಿ ಉತ್ಪಾದನೆಯನ್ನು ಶೇಕಡ 200ರಷ್ಟು ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದು ಹೇಳಲಾಯಿತು. 1965ರ ವೇಳೆಗೆ ಈ ತಳಿಯ ಪರೀಕ್ಷಾರ್ಥ ಪ್ರಯೋಗವೂ ಯಶಸ್ವಿಯಾಯಿತು. ಜತೆಗೆ ಆಹಾರ ಕೊರತೆ ಎದುರಿಸುತ್ತಿದ್ದ ಮೆಕ್ಸಿಕೊ ಮತ್ತು ತೈವಾನ್ ರೈತರು ಈ ತಳಿಯ ಬಳಕೆಯನ್ನೂ ಆರಂಭಿಸಿದರು. ಇಡೀ ವಿಶ್ವದಲ್ಲಿ ಹಸಿರು ಕ್ರಾಂತಿಯ ಪರಿಕಲ್ಪನೆ ಹರಡಲು ಕಾರಣವಾದದ್ದು ಎರಡು ಕೃಷಿ ಸಂಶೋಧನಾ ಸಂಸ್ಥೆಗಳು ಎನ್ನುವುದು ಗಮನಿಸಬೇಕಾದ ಅಂಶ.

1. ಮೆಕ್ಸಿಕೋದ ಅಂತಾರಾಷ್ಟ್ರೀಯ ಮೆಕ್ಕೆಜೋಳ ಮತ್ತು ಗೋಧಿ ಅಭಿವೃದ್ಧಿ ಕೇಂದ್ರ
2. ಮನಿಲಾದ ಅಂತಾರಾಷ್ಟ್ರೀಯ ಅಕ್ಕಿ ಸಂಶೋಧನಾ ಕೇಂದ್ರ.

ಈ ಸಂಸ್ಥೆಗಳು ಅಭಿವೃದ್ಧಿಪಡಿಸಿದ ಗೋಧಿ ಮತ್ತು ಅಕ್ಕಿಯ ತಳಿಯಿಂದಾಗಿ ಇಡೀ ವಿಶ್ವದಲ್ಲಿ ಆಹಾರಧಾನ್ಯ ಉತ್ಪಾದನಾ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ಉಂಟಾಯಿತು. ಈ ಎರಡು ಸಂಸ್ಥೆಗಳು ಹಾಗೂ ವಿಶ್ವದ ನಡುವೆ ಸಂಪರ್ಕ ಕಲ್ಪಿಸುವ ಕೆಲಸವನ್ನು ನಿರ್ವಹಿಸಿದ್ದು ವಾಷಿಂಗ್ಟನ್ ಮೂಲದ ವಿಶ್ವಬ್ಯಾಂಕಿನ ಅಂಗಸಂಸ್ಥೆಯಾದ ಕನ್ಸಲ್ಟೇಟಿವ್ ಗ್ರೂಪ್ ಆನ್ ಇಂಟರ್‌ನ್ಯಾಷನಲ್ ಅಗ್ರಿಕಲ್ಚರಲ್ ರಿಸರ್ಚ್. ಎಲ್ಲ ಕೃಷಿ ಸಂಶೋಧನೆಗಳನ್ನು ಜಾಗತಿಕ ಸಾರ್ವಜನಿಕ ಸರಕು ಎಂದು ಪರಿಗಣಿಸಿ, ಎಲ್ಲ ದೇಶಗಳಿಗೂ ಉಚಿತವಾಗಿ ಲಭ್ಯವಾಗುವಂತೆ ನೋಡಿಕೊಂಡಿತು. 1960ರ ದಶಕದ ಮಧ್ಯಭಾಗದಲ್ಲಿ ಭಾರತ ತೀವ್ರ ಪ್ರಮಾಣದ ಆಹಾರಧಾನ್ಯ ಕೊರತೆಯನ್ನು ಅನುಭವಿಸಿತು. ಅದರ ತೀವ್ರತೆಯ ಪ್ರಮಾಣ ಎಷ್ಟಿತ್ತೆಂದರೆ, ಭಾರತದ ಪ್ರಧಾನಿಯಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿಯವರು ದೇಶದ ಜನತೆಗೆ ಕರೆ ನೀಡಿ, ಎಲ್ಲರೂ ವಾರಕ್ಕೆ ಒಂದು ದಿನ ಒಂದು ಊಟವನ್ನು ತ್ಯಜಿಸಬೇಕು ಎಂದು ಮನವಿ ಮಾಡಿದರು. ಇದೇ ಅವಧಿಯಲ್ಲಿ ರಾಕ್‌ಫೆಲ್ಲರ್ ಫೌಂಡೇಷನ್ ಸಹಕಾರದೊಂದಿಗೆ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ಬೋರ್ಲಿಂಗ್ ಅಭಿವೃದ್ಧಿಪಡಿಸಿದ ಹೊಸ ತಳಿಯನ್ನು ದೇಶದಲ್ಲಿ ಬೆಳೆಯುವ ಸಾಧ್ಯತೆಯ ಬಗ್ಗೆ ಸಂಶೋಧನೆ ಆರಂಭಿಸಿತು. ಐಎಆರ್‌ಐ ಸಂಶೋಧನೆಯ ಪ್ರಕಾರ, ಭಾರತದ ಸಾಂಪ್ರದಾಯಿಕ ಕೃಷಿಪದ್ಧತಿಗಿಂತ ಈ ವಿಧಾನದಲ್ಲಿ ದುಪ್ಪಟ್ಟು ಉತ್ಪಾದನೆ ಮಾಡಬಹುದು ಎಂಬ ತೀರ್ಮಾನಕ್ಕೆ ಬರಲಾಯಿತು.

ಕೃಷಿ ಸಚಿವಾಲಯವೂ ತಜ್ಞರ ಸಮಿತಿಯ ವರದಿಯನ್ನು ಅಧ್ಯಯನ ನಡೆಸಿತು. ತಜ್ಞರು ಹಾಗೂ ಕೃಷಿವಿಜ್ಞಾನಿಗಳನ್ನೊಳಗೊಂಡ ಈ ಸಮಿತಿ ಹೊಸ ತಂತ್ರಜ್ಞಾನ ಅಳವಡಿಕೆಯನ್ನು ಬಲವಾಗಿ ಪ್ರತಿಪಾದಿಸಿತು. ತಕ್ಷಣ ಭಾರತ ಇದನ್ನು ಬಹಳ ಜಾಗರೂಕತೆಯಿಂದ ಅನುಸರಿಸುವ ನಿರ್ಧಾರ ಕೈಗೊಂಡಿತು. ಇದಕ್ಕಾಗಿ ಇಂಟೆನ್ಸಿವ್ ಅಗ್ರಿಕಲ್ಚರಲ್ ಡಿಸ್ಟ್ರಿಕ್ಟ್ ಪ್ರೋಗ್ರಾಂ (ಐಎಡಿಪಿ, 1961)ಮತ್ತು ಇಂಟೆನ್ಸಿವ್ ಅಗ್ರಿಕಲ್ಚರಲ್ ಏರಿಯಾ


www.shikarat.com

ಪ್ರೋಗ್ರಾಂ (ಐಎಎಪಿ, 1965) ಮೂಲಕ ಇದರ ಅನುಷ್ಠಾನಕ್ಕೆ ಮುಂದಾಯಿತು. ಅಂತಿಮವಾಗಿ 1966ರಲ್ಲಿ ಹೊಸ ಕೃಷಿ ತಂತ್ರವನ್ನು ಜಾರಿಗೆ ತಂದಿತು. ಇದು ಹಸಿರು ಕ್ರಾಂತಿ ಎಂದು ಜನಪ್ರಿಯವಾಯಿತು.

**ಹಸಿರುಕ್ರಾಂತಿಯ ಅಂಶಗಳು**

ಹಸಿರುಕ್ರಾಂತಿಯು ಕೃಷಿ ಪರಿಕರಗಳ ಸಕಾಲಿಕ ಮತ್ತು ಸಮರ್ಪಕ ಪೂರೈಕೆಯನ್ನು ಅವಲಂಬಿಸಿದೆ. ಅದರಲ್ಲಿ ಪ್ರಮುಖವಾದ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಅಧಿಕ ಇಳುವಳಿಯ ಬಿತ್ತನೆಬೀಜ

ಸಾಮಾನ್ಯವಾಗಿ ಇದನ್ನು ಸುಧಾರಿತ ತಳಿಗಳು ಎಂದು ಕರೆಯಲಾಗುತ್ತದೆ. ಇದನ್ನು ಅಭಿವೃದ್ಧಿಪಡಿಸುವ ಹಂತದಲ್ಲಿ ಹಲವು ಬಾರಿ ಗುಣಪರಿವರ್ತನೆ ಮಾಡಲಾಗಿರುತ್ತದೆ. ಇದು ಅವುಗಳ ಪೌಷ್ಟಿಕಾಂಶದ ಅಂಶಗಳನ್ನು ಅಧಿಕವಾಗಿ ಗೋಧಿಯ ಬೆಳೆಯ ಪ್ರತಿಯೊಂದು ಅಂಗಕ್ಕೂ ಪೌಷ್ಟಿಕಾಂಶ ನೀಡುವ ಇದು ಕೇವಲ ಗೋಧಿ ಕಾಳಿಗಷ್ಟೇ ಹೆಚ್ಚಿನ ಪೌಷ್ಟಿಕಾಂಶಗಳನ್ನು ನೀಡುವಂತೆ ಸಮರ್ಥಗೊಳಿಸಲಾಗಿರುತ್ತದೆ. ಇಂಥ ತಳಿಗಳ ಗೋಧಿ ಹೆಚ್ಚು ತೂಕ ಹೊಂದಿರುತ್ತದೆ. ಇದರ ಪರಿಣಾಮವಾಗಿ ಹೆಚ್ಚಿನ ಇಳುವರಿ ಸಿಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಬೀಜಗಳು ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಒಳಪಡುವುದಿಲ್ಲ ಹಾಗೂ ನಿಗದಿತ ಇಳುವರಿಯನ್ನು ಪಡೆಯಲು ಸೂರ್ಯರಶ್ಮಿಯನ್ನು ಅವಲಂಬಿಸಿರುವುದಿಲ್ಲ.

**ರಸಗೊಬ್ಬರ**

ಭೂಮಿಯಿಂದ ಸಾಕಷ್ಟು ಪ್ರಮಾಣದ ಪೌಷ್ಟಿಕಾಂಶಗಳನ್ನು ತೆಗೆದುಕೊಳ್ಳುವ ಜತೆಗೆ ಈ ಬೀಜಗಳು ಹೆಚ್ಚಿನ ಉತ್ಪಾದಕತೆಯ ಉದ್ದೇಶವನ್ನು ಹೊಂದಿವೆ. ಆದ್ದರಿಂದ ಸಾಂಪ್ರದಾಯಿಕವಾಗಿ ಬಳಸುವ ಕಾಂಪೋಸ್ಟ್ ಗೊಬ್ಬರ ಅಥವಾ ಎಲೆಗೊಬ್ಬರದಿಂದ ಇದಕ್ಕೆ ಸಾಕಷ್ಟು ಪೌಷ್ಟಿಕಾಂಶಗಳು ಸಿಗುವುದಿಲ್ಲ. ಏಕೆಂದರೆ ಇವುಗಳಲ್ಲಿ ಕಡಿಮೆ ಪ್ರಮಾಣದ ಸಮಗ್ರಪೌಷ್ಟಿಕಾಂಶಗಳಿರುತ್ತವೆ. ಆದ್ದರಿಂದ ಅಧಿಕ ಪೋಷಕಾಂಶಯುಕ್ತ ಗೊಬ್ಬರಗಳು ಬೇಕಾಗುತ್ತವೆ. ಈ ತಳಿಯಲ್ಲಿ ನೀಡಲಾಗುವ ಪೌಷ್ಟಿಕಾಂಶಗಳು ಒಂದಕ್ಕಿಂತ ಹೆಚ್ಚು ಬೀಜಗಳಿಗೆ ರವಾನೆಯಾಗುತ್ತವೆ. ಆದ್ದರಿಂದ ಇವುಗಳನ್ನು ಅಧಿಕ ಸಾಂದ್ರೀಕೃತ ಗೊಬ್ಬರಗಳೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ರಸಗೊಬ್ಬರಗಳಾದ ಯೂರಿಯಾ, ಫಾಸ್ಫೇಟ್ ಮತ್ತು ಪೊಟ್ಯಾಷ್ (ಎನ್‌ಪಿಕೆ) ಅಧಿಕ ಪ್ರಮಾಣದಲ್ಲಿ ಬೇಕಾಗುತ್ತದೆ.

**ನೀರಾವರಿ**

ಈ ಬೆಳೆಯ ಪ್ರಗತಿಯನ್ನು ನಿಯಂತ್ರಿಸಲು ಮತ್ತು ರಸಗೊಬ್ಬರಗಳನ್ನು ಸಮರ್ಪಕ ಪ್ರಮಾಣದಲ್ಲಿ ದುರ್ಬಲಗೊಳಿಸಲು ನಿಯಂತ್ರಿತ ನೀರು ಪೂರೈಕೆ ವ್ಯವಸ್ಥೆ ಇರಬೇಕಾಗುತ್ತದೆ. ಇದಕ್ಕೆ ಎರಡು ಪ್ರಮುಖ ಅಂಶಗಳು ಅಗತ್ಯವಾಗುತ್ತವೆ. ಒಂದು, ಈ ಬೆಳೆಗೆ ನಿಗದಿಪಡಿಸಿದ ಕ್ಷೇತ್ರ, ಪ್ರವಾಹ ಸಾಧ್ಯತೆಯಿಂದ ಮುಕ್ತವಾಗಿರಬೇಕು ಮತ್ತು ಇನ್ನೊಂದು ಕೃತಕವಾಗಿ ನೀರು ಹಾಯಿಸುವ ಸೌಲಭ್ಯ ಹೊಂದಿರಬೇಕು.

**ರಾಸಾಯನಿಕ ಕೀಟನಾಶಕ**

ಈ ಬಗೆಯ ತಳಿಯ ಬೀಜಗಳು ಹೊಸದು ಮತ್ತು ಕೀಟಬಾಧೆಗೆ ಒಳಗಾಗುವ ಸಾಧ್ಯತೆ ಅಧಿಕ. ಹುಳಹುಪ್ಪಟೆ ಹಾಗೂ ಕ್ರಿಮಿಕೀಟಗಳು ಸಾಂಪ್ರದಾಯಿಕದ ತಳಿಗಳ ಬೀಜಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ದಾಳಿ ಮಾಡುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ನಿರೀಕ್ಷಿತ ಇಳುವರಿ ಪಡೆಯಲು ರಾಸಾಯನಿಕ ಮತ್ತು ಕೀಟನಾಶಕಗಳ ಬಳಕೆ ಅನಿವಾರ್ಯವಾಗುತ್ತದೆ.

**ರಾಸಾಯನಿಕ ಕಳೆನಾಶಕ**

ಈ ಬೆಳೆಯ ಕ್ಷೇತ್ರದಲ್ಲಿ ಬೆಳೆಯ ಜತೆಗೆ ಇತರ ಕಳೆ ಮತ್ತು ಗಿಡಗಂಟಿಗಳು ಬೆಳೆಯುವುದನ್ನು ತಡೆಯಲು ರಸಾಯನಿಕ ಕಳೆನಾಶಕಗಳ ಬಳಕೆ ಅನಿವಾರ್ಯವಾಗುತ್ತದೆ. ಈ ತಳಿಯ ಬೀಜಗಳಿಗೆ ಈಗಾಗಲೇ ದುಬಾರಿ ರಸಗೊಬ್ಬರಗಳನ್ನು ನೀಡುವ ಕಾರಣದಿಂದ ನಿರೀಕ್ಷಿತ ಇಳುವರಿ ಪಡೆಯುವುದು ಅನಿವಾರ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕಳೆಗಳನ್ನು ತಡೆಯಬೇಕಾದರೆ, ಕಳೆನಾಶಕಗಳ ಬಳಕೆ ಅನಿವಾರ್ಯ.

**ಸಾಲ– ಮಾರುಕಟ್ಟೆ**

ಹಸಿರುಕ್ರಾಂತಿಯ ದುಬಾರಿ ಕೃಷಿಪರಿಕರಗಳು ಸಕಾಲಿಕವಾಗಿ ಕೈಗೆಟುಕುವಂತಾಗಲು ಅಗ್ಗದ ಹಾಗೂ ಸುಲಭದ ಸಾಲಲಭ್ಯತೆ ಕಡ್ಡಾಯವಾಗುತ್ತದೆ. ಇದಕ್ಕೆ ನಿಗದಿಪಡಿಸಿರುವ ಕೃಷಿಭೂಮಿ ಕೂಡಾ ನಿರ್ದಿಷ್ಟ ಗುಣಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ. ಉದಾಹರಣೆಗೆ ಭಾರತದಲ್ಲಿ ಹರ್ಯಾಣ, ಪಂಜಾಬ್ ಹಾಗೂ ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲೇ ಈ ತಳಿಗಳನ್ನು ಬೆಳೆಯಲು ಸಾಧ್ಯ. ಕೊಯ್ಲು ಮಾಡಲಾದ ಬೆಳೆಯನ್ನು ದೇಶದ ಇತರ ಪ್ರದೇಶಗಳಿಗೆ ವಿತರಣೆ ಮಾಡುವ ವರೆಗೂ ಅದೇ ಪ್ರದೇಶದಲ್ಲಿ ದಾಸ್ತಾನು ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಹಸಿರು ಕ್ರಾಂತಿಯ ತಳಿಗಳನ್ನು ಆಯ್ಕೆ ಮಾಡಿಕೊಂಡದ್ದು, ಆಹಾರ ಉತ್ಪಾದನೆಯ ಕೊರತೆ ಇರುವ ದೇಶಗಳು ಮಾತ್ರ. ಇಡೀ ದೇಶದ ಜನರಿಗೆ ಭೌತಿಕವಾಗಿ ಸಾಕಷ್ಟು ಆಹಾರ ಲಭ್ಯವಾಗುವಂತೆ ಮಾಡುವ ದೃಷ್ಟಿಯಿಂದ ಈ ದೇಶಗಳು ಹಸಿರು ಕ್ರಾಂತಿಯ ಮೊರೆಹೋದವು. ಈ ಕಾರಣದಿಂದ ಇದಕ್ಕೆ ಅಗತ್ಯವಾದ ಸರಣಿ ಮಾರುಕಟ್ಟೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಅನಿವಾರ್ಯವಾಯಿತು. ಮಾರುಕಟ್ಟೆ, ವಿತರಣೆ ಮತ್ತು ಸಾಗಾಣಿಕೆ ವ್ಯವಸ್ಥೆಯನ್ನೂ ಅಗತ್ಯ ಬದಲಾವಣೆ ಮಾಡಬೇಕಾಯಿತು. ಈ ಕಾರಣಕ್ಕಾಗಿ ಇಡೀ ದೇಶದಲ್ಲಿ ಇದಕ್ಕೇ ಪ್ರತ್ಯೇಕವಾದ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕಾಯಿತು. ಇದಕ್ಕಾಗಿ ವಿಶ್ವಬ್ಯಾಂಕ್ ಕಡಿಮೆ ಬಡ್ಡಿದರದ ಸಾಲ ನೀಡಿತು.

ಇಂಥ ಫಲಾನುಭವ ಪಡೆದ ದೊಡ್ಡ ದೇಶಗಳಲ್ಲಿ ಭಾರತವೂ ಒಂದು.



www.shikarat.com

**ಹಸಿರುಕ್ರಾಂತಿಯ ಪರಿಣಾಮ**

ಹಸಿರು ಕ್ರಾಂತಿ ವಿಶ್ವಾದ್ಯಂತ ಎಲ್ಲ ದೇಶಗಳ ಮೇಲೆ ಧನಾತ್ಮಕ ಹಾಗೂ ಋಣಾತ್ಮಕ ಸಾಮಾಜಿಕ– ಆರ್ಥಿಕ ಮತ್ತು ಪರಿಸರ ಪರಿಣಾಮಗಳನ್ನು ಬೀರಿದೆ. ಭಾರತಕ್ಕೆಸಾ ಸಂಬಂಧಿಸಿದಂತೆ ಇಂಥ ಕೆಲ ಪರಿಣಾಮಗಳನ್ನು ಕೆಳಗೆ ಪಟ್ಟಿಮಾಡಲಾಗಿದೆ.

**ಸಾಮಾಜಿಕ ಕ್ಷೇತ್ರದ ಮೇಲೆ**

ಆಹಾರಧಾನ್ಯ ಉತ್ಪಾದನೆ ದಿಢೀರನೇ ಹೆಚ್ಚಿದ ಪರಿಣಾಮವಾಗಿ, 1960ರ ದಶಕದಿಂದ 1970ರ ದಶಕದ ಅವಧಿಯಲ್ಲಿ ಹಲವಾರು ದೇಶಗಳು ಆಹಾರಧಾನ್ಯ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದವು. ವಿಶ್ವದ ಕೆಲ ದೇಶಗಳು ಆಹಾರಧಾನ್ಯಗಳನ್ನು ರಫ್ತು ಮಾಡಲು ಕೂಡಾ ಸಮರ್ಥವಾದವು.
ಇದು ದೇಶದಲ್ಲಿ ರೈತರ ನಡುವೆ ಆದಾಯ ಅಸಮತೋಲನಕ್ಕೂ ಕಾರಣವಾಯಿತು. ಆದ್ದರಿಂದ ಸ್ಥಳೀಯ ಮಟ್ಟದಲ್ಲಿ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಸಮಾನತೆ ಹೆಚ್ಚಲು ಕಾರಣವಾಯಿತು. ಇದು ಭಾರತಕ್ಕೂ ಅನುಭವಕ್ಕೆ ಬಂತು. ಇದೆಲ್ಲದಕ್ಕಿಂತ ಹೆಚ್ಚಾಗಿ ಕೃಷಿ ಪ್ರದೇಶಗಳಲ್ಲಿ ಅಧಿಕ ನೀರು ನಿಲ್ಲುವ ಕಾರಣದಿಂದಾಗಿ, ಮಲೇರಿಯಾ ಪ್ರಕರಣ ಕೂಡಾ ಗಣನೀಯವಾಗಿ ಹೆಚ್ಚಿತು. ಇನ್ನೊಂದು ಪ್ರಮುಖ ಋಣಾತ್ಮಕ ಪರಿಣಾಮವೆಂದರೆ, ಬೆಳೆಪದ್ಧತಿಯಲ್ಲಿ ಆದ ಭಾರಿ ಬದಲಾವಣೆ. ರೈತರು ಗೋಧಿ ಹಾಗೂ ಅಕ್ಕಿಯನ್ನು ಅಧಿಕವಾಗಿ ಬೆಳೆಯಲು ಮುಂದಾದ ಹಿನ್ನೆಲೆಯಲ್ಲಿ ಬೇಳೆಕಾಳು, ಎಣ್ಣೆಬೀಜ, ಬಾರ್ಲಿ ಮತ್ತು ಮೆಕ್ಕೆಜೋಳದ ಉತ್ಪಾದನೆ ಗಣನೀಯವಾಗಿ ಕುಂಠಿತವಾಯಿತು.

**ಆರ್ಥಿಕ ಪರಿಣಾಮ**

ಹೊಸ ಕೃಷಿಪದ್ಧತಿಯಡಿ ಕೃಷಿ ಪರಿಕರಗಳು ದುಬಾರಿಯಾಗಿದ್ದರಿಂದ ಕೃಷಿ ಉತ್ಪನ್ನಗಳು ಕೂಡಾ ಸಹಜವಾಗಿಯೇ ದುಬಾರಿಯಾದವು. ಆಹಾರಧಾನ್ಯಗಳ ಬೆಲೆ ಹೆಚ್ಚಳವಾಗುತ್ತಿರುವ ಪ್ರಮಾಣದಲ್ಲಿ ಜನಸಾಮಾನ್ಯರ ಖರೀದಿ ಸಾಮರ್ಥ್ಯ ಹೆಚ್ಚದ ಹಿನ್ನೆಲೆಯಲ್ಲಿ, ಜನಸಾಮಾನ್ಯರಿಗೆ ಆಹಾರಧಾನ್ಯಗಳ ಆರ್ಥಿಕ ಲಭ್ಯತೆ ದುರ್ಲಭವಾಯಿತು. ಹಸಿರುಕ್ರಾಂತಿಯ ಪವಾಡಕ್ಕೆ ಮುನ್ನ ಜನ ಆಹಾರಧಾನ್ಯದ ಕೊರತೆಯಿಂದ ಬಳಲಿದರೆ, ಹಸಿರುಕ್ರಾಂತಿಯ ಬಳಿಕ, ಆಹಾರಧಾನ್ಯವಿದ್ದೂ ಅದು ಕೈಗೆಟುಕದೇ ಜನ ಹಸಿವಿನಿಂದ ಸಾಯುವ ಪರಿಸ್ಥಿತಿ ನಿರ್ಮಾಣವಾಯಿತು. ಈ ಹಿನ್ನೆಲೆಯಲ್ಲಿ ಸರ್ಕಾರ ಆಹಾರಧಾನ್ಯಗಳ ಬೆಲೆಗಳನ್ನು ನಿಯಂತ್ರಿಸಲು ಕ್ರಮ ಕೈಗೊಂಡಿತು. ಒಂದೆಡೆ ಕನಿಷ್ಠ ಬೆಂಬಲ ಬೆಲೆಯನ್ನು ನೀಡಬೇಕಾದರೆ, ಇನ್ನೊಂದೆಡೆ ಕಡಿಮೆ ವೆಚ್ಚದಲ್ಲಿ ಸಾರ್ವಜನಿಕ ಪಡಿತರ ವ್ಯವಸ್ಥೆ ಮೂಲಕ ಇವುಗಳನ್ನು ಸರಬರಾಜು ಮಾಡಬೇಕಾದ ಅನಿವಾರ್ಯತೆಯಲ್ಲಿ ಸರ್ಕಾರ ಸಿಲುಕಿಕೊಂಡಿತು. ಕೃಷಿಯನ್ನು ಲಾಭದಾಯಕ ವೃತ್ತಿಯಾಗಿ ಪರಿವರ್ತಿಸಬೇಕಾದ ಅನಿವಾರ್ಯತೆ ಒಂದೆಡೆಯಾದರೆ, ಈ ಕ್ಷೇತ್ರದಲ್ಲಿ ಹೂಡಿಕೆಯನ್ನು ನಿರ್ವಹಿಸುವುದು ಕೂಡಾ ಅಗತ್ಯವಾಯಿತು. ಈ ಕಾರಣದಿಂದ ಆಹಾರ ಸಬ್ಸಿಡಿ ಪ್ರಮಾಣವನ್ನೂ ಹೆಚ್ಚಿಸಬೇಕಾಯಿತು. ಅಂದರೆ ಭಾರತ ತನ್ನೆಲ್ಲ ನಾಗರಿಕರಿಗೆ ಆಹಾರಧಾನ್ಯ ಭೌತಿಕವಾಗಿ ಲಭ್ಯವಾಗುವಂತೆ ಮಾಡುವಲ್ಲಿ ಯಶಸ್ವಿಯಾದರೂ, ಆಹಾರಧಾನ್ಯದ ಆರ್ಥಿಕ ಲಭ್ಯತೆ ಜನರಿಗೆ ದೊರಕುವಂತೆ ಮಾಡುವಲ್ಲಿ ಬೆಟ್ಟದಷ್ಟು ದೊಡ್ಡ ಸವಾಲು ಎದುರಾಯಿತು. ಈ ಸಮಸ್ಯೆ ಇಂದಿಗೂ ಮುಂದುವರಿದಿದೆ.

**ಪರಿಸರ ಪರಿಣಾಮ**

ಹಸಿರು ಕ್ರಾಂತಿ ದೇಶದ ಪರಿಸರದ ಮೇಲೆ ಬೀರಿದ ಪರಿಣಾಮ ಮಾತ್ರ ತೀರಾ ಗಂಭೀರ ಸ್ವರೂಪದ್ದು. ಈ ಬಗ್ಗೆ ಮಾಧ್ಯಮಗಳು, ತಜ್ಞರು, ಬುದ್ಧಿಜೀವಿಗಳು ಮತ್ತು ಪರಿಸರವಾದಿಗಳು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಹಸಿರುಕ್ರಾಂತಿಯ ಅಡ್ಡಪರಿಣಾಮಗಳನ್ನು ಎದುರಿಸುವ ನಿಟ್ಟಿನಲ್ಲಿ ಸರ್ಕಾರದ ಮಟ್ಟದಲ್ಲಿ ಅಥವಾ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಆಗಿಲ್ಲ. ಹಸಿರು ಕ್ರಾಂತಿ ಪರಿಸರದ ಮೇಲೆ ಮತ್ತು ಪ್ರಕೃತಿಯ ಮೇಲೆ ಉಂಟುಮಾಡುವ ಪರಿಣಾಮಗಳನ್ನು ಅಧ್ಯಯನ ಮಾಡಲು ಹಲವು ಸಮೀಕ್ಷೆಗಳು ನಡೆದರೂ, ಅಡ್ಡಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಚಿಂತನೆ ನಡೆಯಲೇ ಇಲ್ಲ. ಇಂಥ ಗಂಭೀರ ಪರಿಣಾಮಗಳನ್ನು ಈ ಕೆಳಗೆ ಪಟ್ಟಿಮಾಡಲಾಗಿದೆ.

1. ಹಸಿರುಕ್ರಾಂತಿಗೆ ಒಳಪಟ್ಟ ಪ್ರದೇಶಗಳಲ್ಲಿ ಈ ಕೆಳಗಿನ ಪರಿಸರದ ಮೇಲಿನ ಪರಿಣಾಮ, ಕ್ಷೇತ್ರ ಅಧ್ಯಯನದಿಂದ ತಿಳಿದುಬಂತು.

ಎ. ಮಣ್ಣಿನ ಫಲವತ್ತತೆಯಲ್ಲಿ ಕುಸಿತ: ರೈತರು ಒಂದೇ ಬೆಳೆಯನ್ನು ಪದೇ ಪದೇ ಬೆಳೆಯುವ ಪದ್ಧತಿಯಿಂದಾಗಿ ಭೂಮಿಯ ಶೋಷಣೆ ಹೆಚ್ಚುತ್ತದೆ. ಜತೆಗೆ ಮಿಶ್ರಬೆಳೆ ಮತ್ತು ಅಂತರ ಬೆಳೆ ಪದ್ಧತಿ ತಪ್ಪಿದ ಕಾರಣದಿಂದ ಭೂಮಿಯ ಫಲವತ್ತತೆಯಲ್ಲಿ ಭಾರಿ ಇಳಿಕೆ ಕಂಡುಬಂದಿದೆ.

ಬಿ. ನೀರಿನಮಟ್ಟ ಇಳಿಕೆ: ಹೊಸ ಅಧಿಕ ಇಳುವರಿಯ ಬೀಜಗಳಿಗೆ ನೀರು ಅಧಿಕವಾಗಿ ಬೇಕಾದ ಹಿನ್ನೆಲೆಯಲ್ಲಿ ಅತಿಯಾದ ನೀರಿನ ಬಳಕೆ ಮತ್ತು ನೀರಾವರಿ ಸೌಲಭ್ಯದಿಂದಾಗಿ ನೀರಿನ ಮಟ್ಟ ದಿನೇ ದಿನೇ ಕುಸಿಯುತ್ತಲೇ ಇದೆ. ಅಂದರೆ ಈ ಪದ್ಧತಿಯಲ್ಲಿ ಒಂದು ಕೆ.ಜಿ. ಅಕ್ಕಿ ಬೆಳೆಯಲು ಐದು ಟನ್ ನೀರು ಬೇಕಾಗುತ್ತದೆ!


www.shikarat.com

ಸಿ. ರಸಗೊಬ್ಬರ, ಕೀಟನಾಶಕ ಹಾಗೂ ಕಳೆನಾಶಕಗಳ ಅನಿಯಂತ್ರಿತ ಮತ್ತು ಅತಿಯಾದ ಬಳಕೆಯಿಂದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಇಂಥ ಕೃತಕ ರಾಸಾಯನಿಕಗಳ ಬಳಕೆಯಿಂದ ಭೂಮಿ, ನೀರು ಮತ್ತು ವಾಯುಮಾಲಿನ್ಯ ಅಧಿಕವಾಗಿದೆ. ಭಾರತದಲ್ಲಿ ಇದು ಅರಣ್ಯ ನಾಶ ಮತ್ತು ಹುಲ್ಲುಗಾವಲುಗಳ ನಾಶಕ್ಕೂ ಕಾರಣವಾಗಿದೆ.

2. ಆಹಾರ ಸರಪಣಿಯಲ್ಲಿ ವಿಷಕಾರಿ ಅಂಶ: ಕೃತಕ ರಸಗೊಬ್ಬರಗಳ ಬಳಕೆ ಮತ್ತು ಕ್ರಿಮಿನಾಶಕ ಹಾಗೂ ಕಳೆನಾಶಕಗಳ ಬಳಕೆಯಿಂದಾಗಿ ಮತ್ತು ಇವುಗಳನ್ನು ಉತ್ಪಾದಿಸುವ ಕೈಗಾರಿಕೆಗಳಿಂದಾಗಿ ನಮ್ಮ ಆಹಾರ ಸರಪಣಿ ಸಂಪೂರ್ಣ ವಿಷಮಯವಾಗಿ ಪರಿಣಮಿಸಿದೆ.
1990ರ ಮಧ್ಯಭಾಗದ ವೇಳೆಗೆ ಭಾರತ ಆಹಾರಧಾನ್ಯ ಸ್ವಾವಲಂಬನೆಯ ಯಶೋಗಾಥೆಯನ್ನು ಜಗತ್ತಿನ ಜತೆ ಹಂಚಿಕೊಳ್ಳುತ್ತಿದ್ದರೆ, ಇನ್ನೊಂದೆಡೆ ದೇಶಕ್ಕೆ ಅವಳಿ ಸವಾಲುಗಳು ಎದುರಾದವು. ಒಂದನೆಯದಾಗಿ, ಭೌತಿಕವಾಗಿ ಲಭ್ಯವಿರುವ ಆಹಾರಧಾನ್ಯವನ್ನು ಆರ್ಥಿಕವಾಗಿಯೂ ದೇಶದ ಎಲ್ಲ ಸಮುದಾಯಕ್ಕೆ ಲಭ್ಯವಾಗುವಂತೆ ಮಾಡುವುದು ಹಾಗೂ ಇನ್ನೊಂದು ಪರಿಸರದ ದೃಷ್ಟಿಯಿಂದ ಕೃಷಿಪದ್ಧತಿ ಸುಸ್ಥಿತವಾಗಿರುವಂತೆ ನೋಡಿಕೊಳ್ಳುವುದು. ಕೃಷಿವಿಜ್ಞಾನಿಗಳು, ಭೂಮಿಯ ಫಲವತ್ತತೆ ಕಡಿಮೆಯಾಗುತ್ತಿರುವ ಬಗ್ಗೆ, ನೀರು ಮತ್ತು ಗಾಳಿ ಮಾಲಿನ್ಯವಾಗುತ್ತಿರುವ ಬಗ್ಗೆ ಎಚ್ಚರಿಕೆ ನೀಡಿದ್ದು, ಹಸಿರುಕ್ರಾಂತಿಯ ಪರಿಣಾಮವಾಗಿ ಈ ಕ್ಷೇತ್ರದ ಉತ್ಪಾದಕತೆ ಧೀರ್ಘಾವಧಿಯಲ್ಲಿ ಗಣನೀಯವಾಗಿ ಕಡಿಮೆಯಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಪರಿಸರ ಸ್ನೇಹಿ ಕ್ರಮಗಳನ್ನು ಅಳವಡಿಸಿಕೊಳ್ಳುವವರೆಗೂ ಭಾರತದ ಆಹಾರಧಾನ್ಯ ಸ್ವಾವಲಂಬನೆ ಸುಸ್ಥಿರವಾಗಿರಲು ಸಾಧ್ಯವೇ ಇಲ್ಲ.

**ಉಪಸಂಹಾರ**

ಇದುವರೆಗೆ ನಡೆದ ಎಲ್ಲ ಅಧ್ಯಯನ, ಸಮೀಕ್ಷೆ ಮತ್ತು ಸಂಶೋಧನೆಗಳಿಂದ ವ್ಯಕ್ತವಾಗಿರುವ ಪ್ರಮುಖ ಅಂಶವೆಂದರೆ, ಹಸಿರುಕ್ರಾಂತಿ ಜನಪ್ರಿಯಗೊಳಿಸಿದ ಕೃಷಿಪದ್ಧತಿ ಪರಿಸರದ ದೃಷ್ಟಿಯಿಂದ ಸುಸ್ಥಿರವಲ್ಲ. ಇದು ನಮ್ಮ ಕಣ್ಣು ತೆರೆಸಬೇಕಾಗಿದೆ. ಇದೇ ವೇಳೆ ವಿಶ್ವ 1987ರ ಬಳಿಕ ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಿದ್ದು, ಬಹುತೇಕ ಪಾಶ್ಚಿಮಾತ್ಯ ದೇಶಗಳು ಸುಸ್ಥಿರ ಪದ್ಧತಿಯನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳುತ್ತಿವೆ. ಇದೇ ವೇಳೆ ಕೃಷಿ ವಿಜ್ಞಾನಿಗಳು ನಿಜವಾಗಿಯೂ ಹಸಿರು ಹಸಿರುಕ್ರಾಂತಿ (ಪರಿಸರ ದೃಷ್ಟಿಯಿಂದ ಸುಸ್ಥಿರ) ಯನ್ನು ಪ್ರತಿಪಾದಿಸುತ್ತಿದ್ದಾರೆ. ಇದನ್ನು ನಿರಂತರ ಹಸಿರುಕ್ರಾಂತಿ, ಎರಡನೇ ಹಸಿರು ಕ್ರಾಂತಿ, ಹಸಿರು ಕೃಷಿ, ಜೈವಿಕ ಕೃಷಿ, ಸುಸ್ಥಿರ ಕೃಷಿ ಎಂದು ಪರಿಗಣಿಸಲಾಗಿದೆ. ಭಾರತ 1995ರಲ್ಲಿ ತನ್ನ ಸಾರ್ವಜನಿಕ ನೀತಿಗಳಲ್ಲಿ ಸುಸ್ಥಿರ ಅಭಿವೃದ್ಧಿಯಪರಿಕಲ್ಪನೆಯನ್ನು ಅಳವಡಿಸಿಕೊಂಡಿದ್ದು, ಸುಸ್ಥಿರ ಕೃಷಿ ಬಗ್ಗೆಯೂ ನೀತಿಯನ್ನು ರೂಪಿಸುತ್ತಿದೆ.
ಇದೀಗ ಭಾರತ ಸುಸ್ಥಿರ ಕೃಷಿಪದ್ಧತಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ನಡೆಸುತ್ತಿದೆ. ಅದರ ಕೆಲ ಅಂಶಗಳು ಈ ಕೆಳಗಿನಂತಿವೆ.
* ಅಗತ್ಯ ಮೂಲಸೌಕರ್ಯ ಅಭಿವೃದ್ಧಿಪಡಿಸುವುದು: ಇದರಲ್ಲಿ ದೊಡ್ಡ ಸವಾಲೆಂದರೆ, ಹಸಿರು ಪರಿಕರಗಳನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುವುದು. ಅಂದರೆ ಪರಿಸರ ಸ್ನೇಹಿ ಗೊಬ್ಬರ, ಕೀಟನಾಶಕ, ಕ್ರಿಮಿನಾಶಕ, ಕಳೆನಾಶಕಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುವುದು.

* ಸಂಪೂರ್ಣ ಹೊಸ ಕೃಷಿತಯಾರಿಗೆ ಅಗತ್ಯವಾದ ಬಂಡವಾಳವನ್ನು ನಿರ್ವಹಿಸುವುದು.

* ಹಾಲಿ ಇರುವ ಕೃಷಿಪದ್ಧತಿ ಧೀರ್ಘಾವಧಿಯಲ್ಲಿ ಲಾಭದಾಯಕವಲ್ಲ ಮತ್ತು ಸುಸ್ಥಿರವಲ್ಲ ಎನ್ನುವ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸುವುದು ಮತ್ತು ತಕ್ಷಣವೇ ಹೊಸ ವಿಧಾನಕ್ಕೆ ಒಗ್ಗಿಕೊಳ್ಳುವಂತೆ ರೈತರ ಮನವೊಲಿಸುವುದು.

* ಎಲ್ಲ ಜನರಿಗೆ ಆಹಾರಧಾನ್ಯಗಳು ಆರ್ಥಿಕವಾಗಿ ಲಭ್ಯವಾಗುವಂತೆ ಮಾಡುವ ಸಲುವಾಗಿ, ಉತ್ಪಾದನಾ ವೆಚ್ಚ ನಿಯಂತ್ರಿಸುವುದು.

* ಕೃಷಿ ಕ್ಷೇತ್ರದಲ್ಲಿ ಮೂಲಭೂತ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವುದು. ಈ ಮೂಲಕ ಅಧಿಕ ಇಳುವರಿ ನೀಡುವ ಹೊಸ ತಳಿಗಳನ್ನು ಅಭಿವೃದ್ಧಿಪಡಿಸಬಹುದಾಗಿದೆ. ಆ ಮೂಲಕ ಕೃಷಿ ಉತ್ಪಾದನೆ ಕುಂಠಿತವಾಗದಂತೆ ತಡೆಯಬಹುದು. ಅಂತೆಯೇ, ಹೊಸ ಜೈವಿಕ ಗೊಬ್ಬರ ಹಾಗೂ ಕೀಟನಾಶಗಳ ಬಗ್ಗೆಯೂ ಸಂಶೋಧನೆ ನಡೆಯಬೇಕಿದೆ.

## 9. ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ

ಅಭಿವೃದ್ಧಿಪಡಿಸಬೇಕಾದ ಪ್ರಮುಖ ಅಂಶಗಳು

1. ಸಾರ್ವಜನಿಕ ಜೀವನದ ಭ್ರಷ್ಟಾಚಾರ ಎಲ್ಲರಿಗೂ ಆತಂಕಕಾರಿ

2. ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾ- ಅರ್ಥವ್ಯಾಪ್ತಿ

3. ಹೊಸ ಪ್ರವೃತ್ತಿಯಲ್ಲ


www.shikarat.com

4. ರಾಜಕೀಯ, ಆಡಳಿತ ಮತ್ತು ಕಾನೂನು ಜಾರಿ ವಿಭಾಗಗಳಲ್ಲಿ ನೈತಿಕ ಗುಣಮಟ್ಟ ಗಣನೀಯ ಕುಸಿತ

5. ಪ್ರತಿ ಕ್ಷೇತ್ರದಲ್ಲೂ ಲಂಚ ತಾಂಡವ

6. ಲಂಚದ ಕಾರಣಗಳು ಮತ್ತು ಸಂಭಾವ್ಯ ಪರಿಹಾರಗಳು

ಸಾಮಾನ್ಯವಾಗಿ ಇಬ್ಬರು ಅಥವಾ ಹೆಚ್ಚಿನ ಮಂದಿ ಒಂದೆಡೆ ಸೇರಿ ಪ್ರಸ್ತುತ ಭಾರತೀಯ ಸಮಾಜದ ಬಗ್ಗೆ ಮಾತು ಆರಂಭಿಸಿದರೆ, ತಕ್ಷಣ ಅವರು ಎಲ್ಲ ವ್ಯವಸ್ಥೆ, ಎಲ್ಲ ಸಂಸ್ಥೆಗಳಿಗೆ ಭ್ರಷ್ಟಾಚಾರದ ಸೋಂಕು ತಗುಲಿದೆ ಎಂಬ ನಿರ್ಧಾರಕ್ಕೆ ಬರುತ್ತಾರೆ. ಸಾರ್ವಜನಿಕ ಜೀವನದಲ್ಲಿ ಲಂಚ ಎಷ್ಟರಮಟ್ಟಿಗೆ ಅವಿಭಾಜ್ಯ ಅಂಗವಾಗಿದೆ ಎಂದರೆ ;ಲಂಚವಿಲ್ಲದ ಸಾರ್ವಜನಿಕ ಜೀವನ ಜೀವನವನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ.

ಆದರೆ ವಾಸ್ತವವಾಗಿ ಭ್ರಷ್ಟಾಚಾರ ಎಂದರೆ ಏನರ್ಥ? ಭ್ರಷ್ಟಾಚಾರ ಎಂದರೆ ನೈತಿಕತೆ, ಸಮಗ್ರತೆ, ಚಾರಿತ್ರ್ಯ ಅಥವಾ ವಿಭಿನ್ನ ಹಿತಾಸಕ್ತಿಯಿಂದ ಗೌರವ, ಸರಿ ಮತ್ತು ನ್ಯಾಯಕ್ಕೆ ಬೆಲೆಕೊಡದೇ ಕರ್ತವ್ಯ ನಿರ್ವಹಿಸುವುದು. ಒಬ್ಬ ಲಂಚಕೋರ ವ್ಯಕ್ತಿ ಎಂದರೆ, ಇನ್ನೊಬ್ಬ ವ್ಯಕ್ತಿಯಿಂದ ಹಣ ಅಥವಾ ಇತರ ವಸ್ತುಗಳ ರೂಪದಲ್ಲಿ ರುಷುವತ್ತು ಅಥವಾ ಲಾಭವನ್ನು ಪಡೆಯುವುದು. ಮತ್ತೊಬ್ಬನಿಗೆ ಲಾಭದಾಯಕವಾಗುವಂತೆ ನಿರ್ಧಾರ ಕೈಗೊಳ್ಳುವ ಮೂಲಕ ನ್ಯಾಯಬದ್ಧವಾಗಿ ಒಬ್ಬ ವ್ಯಕ್ತಿಯ ಹಕ್ಕುಗಳಿಂದ ಆತನನ್ನು ವಂಚಿಸಲಾಗುತ್ತದೆ.

ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಎನ್ನುವುದು ಹೊಸ ವಿಧಾನವೇನಲ್ಲ. ಮೌರ್ಯರ ಕಾಲದಲ್ಲೇ ರಾಜಕೀಯ ಹಾಗೂ ನಾಗರಿಕ ಜೀವನದಲ್ಲಿ ಲಂಚಕೋರತನ ಇತ್ತು ಎನ್ನುವುದನ್ನು ಚಾಣಕ್ಯ ತನ್ನ ಅರ್ಥಶಾಸ್ತ್ರದಲ್ಲಿ ವಿವರಿಸಿದ್ದಾನೆ. ಅಂತೆಯೇ ಮೊಘಲರ ಕಾಲದಲ್ಲಿ ಇಂಥ ಲಂಚಕೋರತನ ಮುಗಿಲು ಮುಟ್ಟಿತ್ತು. ಅತ್ಯಂತ ಶಕ್ತಿಶಾಲಿ ಎನಿಸಿದ ಮೊಘಲ್ ಆಡಳಿತ, ದೆಹಲಿಯ ಗಡಿಯನ್ನು ಮೀರಿ ವಿಸ್ತರಣೆಗೊಳ್ಳಲು ವಿಫಲವಾದಾಗ, ಮೊಘಲ್ ವಂಶದ ಕೆಲ ಉತ್ತರಾಧಿಕಾರಿಗಳು ಲಂಚ ಕೊಡುವ ಮತ್ತು ಲಂಚ ನೀಡುತ್ತಿದ್ದ ವಿಷಯ ಇತಿಹಾಸದಲ್ಲಿ ದಾಖಲಾಗಿದೆ. ಕೆಲ ಪ್ರಬಲ ವ್ಯಕ್ತಿಗಳಿಗೆ ಲಂಚ ನೀಡಿ, ತಮ್ಮ ವಿರೋಧಿಗಳ ವಿರುದ್ಧ ಬೆಂಬಲ ನೀಡುವಂತೆ ಕೋರುತ್ತಿದ್ದರು. ಬ್ರಿಟಿಷ್ ಆಡಳಿತದ ಅವಧಿಯಲ್ಲಂತೂ ಭ್ರಷ್ಟಾಚಾರ ಎಲ್ಲೆ ಮೀರಿತು. ಭಾರತಕ್ಕೆ ನಿಯುಕ್ತರಾಗುತ್ತಿದ್ದ ಬಹುತೇಕ ಎಲ್ಲ ಬ್ರಿಟಿಷ್ ಅಧಿಕಾರಿಗಳೂ ಭ್ರಷ್ಟರಾಗಿರುತ್ತಿದ್ದರು. ಆದರೆ ಅವರಿಗಿಂತಲೂ ಅಧಿಕ ಭ್ರಷ್ಟ ಎಂದರೆ ಸಮಗ್ರ ಭಾರತ. ಸಾಮಾನ್ಯವಾಗಿ ಈ ಅವಧಿಯಲ್ಲಿ ಮಧ್ಯವರ್ತಿಗಳ ಮೂಲಕ ಲಂಚ ನೀಡಲಾಗುತ್ತಿತ್ತು. ಅಂದರೆ ಗುಮಾಸ್ತರೇ ಇವರ ಮೊದಲ ಏಜೆಂಟರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಭಾರಿ ಪ್ರಮಾಣದ ಅಕ್ರಮ ಸಂಪತ್ತನ್ನು ಕ್ರೋಢೀಕರಿಸಿದ್ದರು. ಇಂಥ ಗುಮಾಸ್ತರು ನ್ಯಾಯಬದ್ಧವಲ್ಲದ ವ್ಯಾಪಾರ ಮಾಡಲು ಬಯಸುವ ವ್ಯಕ್ತಿಗಳಿಗೆ ದಸ್ತಕ್‌ಗಳನ್ನು ನೀಡುತ್ತಿದ್ದರು. ಆದರೆ ಸಾರ್ವಜನಿಕ ಜೀವನದ ಎಲ್ಲರಂಗಗಳಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿರುವುದು ಇತ್ತೀಚಿನ ಬೆಳವಣಿಗೆ. ಜತೆಗೆ ಇದೀಗ ಸಾರ್ವಜನಿಕರ ಗಮನವನ್ನೂ ಸೆಳೆದಿದೆ. ದುರದೃಷ್ಟವಶಾತ್ ಈಗ ಸಾರ್ವಜನಿಕರು ಭ್ರಷ್ಟ ಪದ್ಧತಿಗಳ ಬಗ್ಗೆ ಪ್ರತಿಭಟನೆ ನಡೆಸುವುದನ್ನೂ ಕೈಬಿಟ್ಟಿದ್ದಾರೆ. ಅಥವಾ ಅನ್ಯಾಯದ ವಿರುದ್ಧ ಹೋರಾಟವನ್ನು, ಯಾವುದೇ ಬೃಹತ್ ಹಗರಣಗಳು ಬಹಿರಂಗಗೊಂಡಾಗ, ದಿಗ್ಭ್ರಮೆ ವ್ಯಕ್ತಪಡಿಸುವ ಮನೋಭಾವವೂ ಜನರಲ್ಲಿ ಇಲ್ಲವಾಗಿದೆ.

ಭಾರತೀಯ ರಾಜಕಾರಣಿಗಳು ಇಂದಿನ ದಿನ ಏನೇ ಆಗಿದ್ದರೂ ಯಾರೂ ಪ್ರಾಮಾಣಿಕರಲ್ಲ. ಒಂದು ಬಾರಿ ಅಧಿಕಾರದ ಫಲ ಉಂಡವರು, ಹಾಡಹಗಲೇ ಸುಲಿಗೆಗೆ ಇಳಿಯುತ್ತಾರೆ. ದಾಖಲೆಗಳಿಂದ ತಿಳಿದುಬರುವಂತೆ, ಭಾರತದಲ್ಲಿ ಕಾಲಕಾಲಕ್ಕೆ ದೊಡ್ಡ ಹಾಗೂ ಸಣ್ಣ ರಾಜಕಾರಣಿಗಳು ತಪ್ಪು ದಾರಿ ತುಳಿಯುತ್ತಿದ್ದಾರೆ. ಕೆಲವರು ಕೆಟ್ಟಮಾರ್ಗಗಳಿಂದ ಅಕ್ರಮ ಮಾರ್ಗಗಳಿಂದ ಹಣ ಸಂಪಾದಿಸಿದರೆ, ಇತರ ರಾಜಕಾರಣಿಗಳು ದುರಾಸೆಯಿಂದ ಸರ್ಕಾರಿ ಕೆಲಸಗಳ ಗುತ್ತಿಗೆಯನ್ನು ಕಳಪೆ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ನೀಡುತ್ತಾರೆ. ಇಂಥ ಅಸಮರ್ಥ ಗುತ್ತಿಗೆದಾರರು ತಮ್ಮ ಹಣದ ದಾಹದಿಂದ ಗುಣಮಟ್ಟದ ಕೆಲಸ ಮಾಡದೇ ಇರುವುದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಹಲವು ಪ್ರಕರಣಗಳಲ್ಲಿ ಇಂಥ ಭ್ರಷ್ಟ ಸಚಿವರು ಮತ್ತು ರಾಜಕಾರಣಿಗಳ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದರೂ, ಅವರು ಭದ್ರವಾಗಿ ಅಧಿಕಾರದ ಸ್ಥಾನದಲ್ಲಿ ಮುಂದುವರಿಯುತ್ತಿದ್ದಾರೆ. ಆಶ್ಚರ್ಯವೆಂದರೆ, ಜನಸಾಮಾನ್ಯರು ಕುಡಾ ಇಂಥ ಭ್ರಷ್ಟರನ್ನು ಮುಂದಿನ ಚುನಾವಣೆಯ ವೇಳೆ ಶಿಕ್ಷಿಸದೇ, ಮತ್ತೆ ಆಯ್ಕೆ ಮಾಡುವ ಮೂಲಕ ಅವರು ಭ್ರಷ್ಟತೆಗೆ ಪರೋಕ್ಷವಾಗಿ ಸಹಕರಿಸುತ್ತಿದ್ದಾರೆ. ಕಳಂಕಿತ ರಾಜಕಾರಣಿಗಳ ಪೂರ್ವ ದಾಖಲೆಗಳನ್ನು ಪರಿಗಣಿಸದೇ ಮತ್ತೆ ಮತ ನೀಡುತ್ತಾರೆ. ಆ ಮೂಲಕ ಅವರು ಭಾರತೀಯ ತೆರಿಗೆದಾರರ ಶ್ರಮದ ದುಡಿಮೆ ಹಣವನ್ನು ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಭ್ರಷ್ಟಾಚಾರ ಅಥವಾ ಲಂಚ ಎನ್ನುವುದು ಕೇವಲ ಭಾರತೀಯ ಸಮಾಜದಲ್ಲಿ ಕಂಡುಬರುವ ವ್ಯವಸ್ಥೆಯಲ್ಲ. ವಿಶ್ವಾದ್ಯಂತ ಅಮೆರಿಕ, ಜಪಾನ್, ಇಟಲಿ ಸೇರಿದಂತೆ ಬಹುತೇಕ ಎಲ್ಲ ದೇಶಗಳಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ಇತರೆಲ್ಲ ರಾಷ್ಟ್ರಗಳಂತೆ ಭಾರತದಲ್ಲೂ ವಿವಿಧ ರೀತಿಯ ಭ್ರಷ್ಟಾಚಾರ ಕಂಡುಬರುತ್ತಿದೆ. ಲಂಚ, ಸ್ವಜನಪಕ್ಷಪಾತ, ಕಳ್ಳತನ ಮತ್ತು ಸಾರ್ವಜನಿಕ ಹಣವನ್ನು ಪೋಲುಮಾಡುವುದು ಮಾತ್ರವಲ್ಲದೇ ಕರ್ತವ್ಯಭ್ರಷ್ಟತೆಯನ್ನು ಕೂಡಾ ಒಂದು ರೀತಿಯ ಭ್ರಷ್ಟಾಚಾರ ಎಂದು ಪರಿಗಣಿಸಲಾಗುತ್ತದೆ. ಆಸ್ಪತ್ರೆಯಲ್ಲಿ ಹುಟ್ಟುವ ಮಗುವಿನಿಂದ ಹಿಡಿದು, ವೃದ್ಧಾಪ್ಯದಲ್ಲಿ ಸಾಯುವವರೆಗೆ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ವಿಧದ ಭ್ರಷ್ಟಾಚಾರದಲ್ಲಿ ಷಾಮೀಲಾಗುತ್ತಾನೆ ಎನ್ನುವುದು ವಾಸ್ತವ. ಸ್ವಜನ ಪಕ್ಷಪಾತ ಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುವ ಭ್ರಷ್ಟಾಚಾರದ ಒಂದು ಮುಖ. ಇದು ಪ್ರತಿಯೊಂದು ಕ್ಷೇತ್ರದಲ್ಲೂ ಇದೆ. ಇದರಿಂದಾಗಿ ಅರ್ಹ ಮತ್ತು ನಿಜವಾಗಿಯೂ ಸಾಮರ್ಥ್ಯ ಇರುವ ಅಭ್ಯರ್ಥಿಗಳು ಸೂಕ್ತ ಹುದ್ದೆಗಳಿಗೆ ಆಯ್ಕೆಯಾಗುತ್ತಿಲ್ಲ. ಇವರ ಜಾಗದಲ್ಲಿ ಪ್ರಭಾವಿ, ಕಡಿಮೆ ಅರ್ಹತೆ ಹೊಂದಿದ ಮತ್ತು ಕಡಿಮೆ ಪ್ರತಿಭೆಯ ಅಭ್ಯರ್ಥಿಗಳು ಸ್ಥಾನ ತುಂಬುತ್ತಾರೆ. ಉದ್ದೇಶಪೂರ್ವಕ ನಿರ್ಲಕ್ಷ್ಯ ಇನ್ನೊಂದು ಬಗೆಯ ಭ್ರಷ್ಟ ವ್ಯವಸ್ಥೆ. ಸರ್ಕಾರಿ ಅಧಿಕಾರಿಗಳು, ಪೊಲೀಸರು, ಶಿಕ್ಷಕರು ಮತ್ತು ವೈದ್ಯರು ಕೂಡಾ, ಜನರ ಸಮಸ್ಯೆಗಳ ಬಗ್ಗೆ


www.shikarat.com

ನಿರ್ಲಕ್ಷ್ಯ ಹೊಂದಿರುವುದನ್ನು ಸಾಮಾನ್ಯವಾಗಿ ಕಾಬಣಬಹುದು. ಇದು ಸಮಾಜದ ಸಾಮಾನ್ಯ ಜನರಿಗೆ ಹಿಂಸೆಯಾಗುವ ವಾತಾವರಣ ಸೃಷ್ಟಿಸುತ್ತದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರ ನಿರ್ಲಕ್ಷ್ಯ ಎಷ್ಟೋ ಪ್ರಕರಣಗಳಲ್ಲಿ ರೋಗಿಗಳ ಸಾವಿಗೆ ಕಾರಣವಾಗುವ ನಿದರ್ಶನಗಳೂ ಸಾಕಷ್ಟಿವೆ. ಪೊಲೀಸ್ ವಿಭಾಗದಲ್ಲಂತೂ ಪರಿಸ್ಥಿತಿ ಇನ್ನಷ್ಟು ದಹಗೆಟ್ಟ ಪರಿಸ್ಥಿತಿ ಇದೆ. ಭಾರತೀಯ ಪೊಲೀಸರು ಇಡೀ ವಿಶ್ವದಲ್ಲೇ ಅತ್ಯಂತ ಭ್ರಷ್ಟರು ಎಂಬ ನಂಬಿಕೆ ಬಲವಾಗಿ ಬೇರೂರಿದೆ. ಒಂದು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲು ಕೂಡಾ ಪೊಲೀಸರ ಕೈ ಬಿಸಿ ಮಾಡಬೇಕಾಗುತ್ತದೆ. ಶಿಕ್ಷಣ ವ್ಯವಸ್ಥೆಯ ಅಧಿಕಾರಿಗಳು ಮತ್ತು ಆಡಳಿತಗಾರರು ಕೂಡಾ ಭ್ರಷ್ಟಾಚಾರದ ಸೋಂಕಿಗೆ ಒಳಗಾಗಿದ್ದಾರೆ. ಇಂಥ ವ್ಯಕ್ತಿಗಳು ಇಡೀ ಶಿಕ್ಷಣ ಸಂಸ್ಥೆಯ ಮೌಲ್ಯವ್ಯವಸ್ಥೆಯನ್ನೇ ಅಣಕಿಸುವಂತಾಗಿದೆ. ಅವರು ನಿಗದಿಪಡಿಸಿದ ಪ್ರಮಾಣದಷ್ಟು ಡೊನೇಷನ್ ನೀಡದೇ, ಭಾರತದ ಉತ್ತಮ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದು ದುರ್ಲಭ. ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗ ವ್ಯವಸ್ಥೆ ಕೂಡಾ ಈ ಪೀಡೆಯಿಂದ ಮುಕ್ತವಾಗಿಲ್ಲ. ಇಂಥ ದುಷ್ಟ ಶಕ್ತಿಗಳು ಇಡೀ ನ್ಯಾಯವ್ಯವಸ್ಥೆಯ ಬಗ್ಗೆಯೇ ಪಿತೂರಿ ಮಾಡುತ್ತಿದ್ದಾರೆ ಎನ್ನಬಹುದು. ಸರಿಯಾಗಿ ಬಹುತೇಕ ತಜ್ಞರು ಗುರುತಿಸಿದಂತೆ, ಭ್ರಷ್ಟ ಅಂಶಗಳು ಎಲ್ಲ ಹಂತಗಳಲ್ಲಿ ಮತ್ತು ಜೀವನದ ಎಲ್ಲ ಕ್ಷೇತ್ರಗಳಲ್ಲಿ ಎದ್ದುಕಾಣುತ್ತಿವೆ.

ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಅಸ್ತಿತ್ವ ಉಳಿಸಿಕೊಳ್ಳಲು ಮತ್ತು ಬೆಳೆಯಲು ವಿಭಿನ್ನ ಕಾರಣಗಳಿವೆ. ದೇಶದಲ್ಲಿ ಜನಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಮತ್ತು ತೀರಾ ದುರ್ಬಲ ಆರ್ಥಿಕ ಮೂಲಸೌಕರ್ಯಗಳು ಇರುವ ಹಿನ್ನೆಲೆಯಲ್ಲಿ, ಜನಸಾಮಾನ್ಯರಿಗೆ ಅಗತ್ಯವಾಗಿ ಮತ್ತು ನಿಗದಿತ ಕಾಲದಲ್ಲಿ ಅನಿವಾರ್ಯವಾದ ಹಲವು ಸರಕು ಮತ್ತು ಸೇವೆಗಳ ಲಭ್ಯತೆ ತೀರಾ ಕಡಿಮೆ ಇದೆ.

ಭ್ರಷ್ಟಾಚಾರ ದೊಡ್ಡ ಸರದಿಯನ್ನು ಉಲ್ಲಂಘಿಸಿ ಬಂದಿರುತ್ತದೆ. ಸೀಮಿತವಾಗಿರುವ ಸೇವೆಯನ್ನು, ಕಡಿಮೆ ಸಮಯ ವ್ಯಯವಾಗುಂತೆ ನೀಡಬೇಕಾಗುತ್ತದೆ. (ಏಕೆಂದರೆ ಹಲವರು ಹೇಳುವಂತೆ ಸಮಯ ಎಂದರೆ ಹಣ). ದೇಶದಲ್ಲಿ ಗ್ರಾಹಕರ ಕೊಳ್ಳುಬಾಕ ಸಂಸ್ಕೃತಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ, ಪ್ರತಿಯೊಬ್ಬರೂ ತಾವು ವಾಸ್ತವವಾಗಿ ಹಾಗೂ ಕಾನೂನುಬದ್ಧವಾಗಿ ದುಡಿಯುವುದಕ್ಕಿಂತ ಹೆಚ್ಚಿನದನ್ನು ಬಯಸುತ್ತಾರೆ. ಆದ್ದರಿಂದ ಸಾರ್ವಜನಿಕ ಸೇವಕರ ಮೇಜಿನ ಕೆಳಗಿನ ವ್ಯವಹಾರ ಜೋರಾಗಿ ಕುದುರುತ್ತದೆ. ಒಬ್ಬ ವ್ಯಕ್ತಿಯ ಕೆಲಸವನ್ನು ಕಾನೂನುಬದ್ಧ ಅವಧಿಗಿಂತ ಮುನ್ನ ಪೂರೈಸಿಕೊಡುವ ಜತೆಗೆ, ಇದರ ವ್ಯಕ್ತಿಗಳ ಮೇಲೆ ತಮಗೆ ಬೇಕಾದ ವ್ಯಕ್ತಿಗೆ ಲಾಭ ಮಾಡಿಕೊಡಲಾಗುತ್ತದೆ. ಆಗ ಒಂದು ನೈತಿಕ ಪ್ರಾಬಲ್ಯದ ವಾತಾವರಣದಲ್ಲಿ, ಹಲವು ಬಗೆಯಲ್ಲಿ ಅಕ್ರಮ ಮಾರ್ಗಗಳನ್ನು ಅನುಸರಿಸಿ, ಅಕ್ರಮ ಫಲಿತಾಂಶವನ್ನೂ ಪಡೆಯುವ ನಿರ್ದಶನಗಳಿವೆ. ಕೆಲ ರಾಜಕಾರಣಿಗಳ ಆಶೋತ್ತರಗಳಿಗೆ ಅನುಗುಣವಾಗಿ, ಅಪರಾಧಿಗಳಿಗೆ ಲಾಭ ಮಾಡಿಕೊಡುವಂಥ ಪರಿಸ್ಥಿತಿಯೂ ಕಂಡುಬರುತ್ತದೆ. ಭಾರತದ ಸದ್ಯದ ಪರಿಸ್ಥಿತಿಯಲ್ಲಿ, ಚುನಾವಣಾ ಸಂಸ್ಥೆಯಲ್ಲೇ, ಭ್ರಷ್ಟ ಆಚರಣೆಗಳು ಕಂಡುಬರುತ್ತಿವೆ. ಇಲ್ಲಿ ರಾಜಕೀಯ ಪಕ್ಷಗಳು ಕೆಟ್ಟಪದ್ಧತಿಗಳ ಮೂಲವಾಗಿರುತ್ತವೆ. ಇಂಥ ರಾಜಕೀಯ ಪಕ್ಷಗಳು ಅಕ್ರಮ ಮಾರ್ಗಗಳ ಮೂಲಕ ಅಧಿಕಾರದ ಗದ್ದುಗೆ ಹಿಡಿದು, ಈ ಭ್ರಷ್ಟ ವ್ಯವಸ್ಥೆ ಬಲಗೊಳ್ಳುವಂತ ಮಾಡುತ್ತವೆ.

ಆರ್ಥಿಕ ಶಕ್ತಿಗಳೂ ಭ್ರಷ್ಟಾಚಾರಕ್ಕೆ ಕಾರಣವಾಗಬಹುದು, ಸಾಮಾನ್ಯ ಭಾರತದಲ್ಲಿ ಕಂಡಬರುವ ಇನ್ನೊಂದು ಪ್ರಮುಖ ಅಂಶವೆಂದರೆ, ಹಣದುಬ್ಬರ ಪ್ರಮಾಣ ಮಿತಿಮೀರಿದ್ದು, ನಿಗದಿತ ವೇತನದ ಸಿಬ್ಬಂದಿ ಸಮೂಹವಂತೂ, ಕನಿಷ್ಠ ಆದಾಯ ಮತ್ತು ಸಣ್ಣ ಉಳಿತಾಯದ ಹಣದಿಂದ ಕುಟುಂಬವನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಿದೆ. ಕನಿಷ್ಠ ಜೀವನಮಟ್ಟವನ್ನು ಪಡೆಯಲು ಬೇಕಾದ ಪ್ರಮಾಣದಲ್ಲಿ ಹಣ ಗಳಿಸಿದ ವ್ಯಕ್ತಿ ಕೊಳ್ಳುಬಾಕ ಸಂಸ್ಕೃತಿಯಿಂದಾಗಿ ಬರುವ ಆದಾಯ ಜೀವನಮಟ್ಟ ಕಾಪಾಡಲು ಸಾಕಾಗುವುದಿಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ. ಈ ಹಂತದಲ್ಲಿ ಭ್ರಷ್ಟಾಚಾರ ಮತ್ತೆ ಪರ್ಯಾಯ ಕ್ರಮವಾಗುತ್ತದೆ. ಮತ್ತೆ ರಿಯಲ್ ಎಸ್ಟೇಟ್ ಉದ್ಯಮ ಕ್ಷೇತ್ರದತ್ತ ಗಮನ ಹರಿಸಿದರೆ, ಖರೀದಿಗೆ ಆಸಕ್ತರಾಗಿರುವ ವ್ಯಕ್ತಿ ಮೊದಲು ಮಾರಾಟಗಾರರನ್ನು ಭೇಟಿ ಮಾಡಿ ಮಾತುಕತೆ ನಡೆಸುತ್ತಾರೆ. ಆತ ವಾಸ್ತವ ಬೆಲೆಯನ್ನು ಆಸ್ತಿ ದಾಖಲೆಯಲ್ಲಿ ನಮೂದಿಸದಂತೆ ಮನವಿ ಮಾಡುತ್ತಾರೆ. ಈ ಮೂಲಕ ಬಂಡವಾಳ ಲಾಭದ ಮೇಲಿನ ತೆರಿಗೆ ತಪ್ಪಿಸಲು ಹವಣಿಸುತ್ತಾರೆ. ಅನಗತ್ಯ ಹಾಗೂ ವಿನಾಕಾರಣವಾಗಿ ಹೆಚ್ಚಿನ ಸ್ಟ್ಯಾಂಪ್ ಶುಲ್ಕವನ್ನು ಮತ್ತು ರಿಜಿಸ್ಟ್ರೇಷನ್ ಶುಲ್ಕವನ್ನು ಕಡಿಮೆ ಮಾಡುವ ಸಲುವಾಗಿ ಕೆಲ ಪ್ರಾಮಾಣಿಕ ವ್ಯಕ್ತಿಗಳು ಕೂಡಾ ಮಾರಾಟ ಕರಾರಿನಲ್ಲಿ ಕಡಿಮೆ ಮೊತ್ತವನ್ನು ನಮೂದಿಸುತ್ತಾರೆ. ಇಂಥ ಸಾವಿರಾರು ನಿದರ್ಶನಗಳು ಭ್ರಷ್ಟಾಚಾರದ ಮುಖಗಳೇ ಆಗಿವೆ.

ಡಾ.ಉಪೇಂದ್ರ ಭಕ್ಷಿ ಹೇಳುವಂತೆ, ಭ್ರಷ್ಟಾಚಾರದ ಅಪರಾಧಶಾಸ್ತ್ರವು ಸಾಮಾನ್ಯವಾಗಿ ಲಂಚದ ಅಪರಾಧಕ್ಕಿಂತ ದೊಡ್ಡದು. ಏಕೆಂದರೆ ಲಂಚ ನೀಡುವ ವ್ಯಕ್ತಿ ಹಾಗೂ ತೆಗೆದುಕೊಳ್ಳುವ ವ್ಯಕ್ತಿಗೆ ಸಂಬಂಧಿಸಿದ್ದು. ಇದು ಭ್ರಷ್ಟ ಮಾರುಕಟ್ಟೆಯಲ್ಲಿ ಲಂಚದ ತಪ್ಪು ಅಂದಾಜಿಗೆ ಕಾರಣವಾಗುತ್ತದೆ. ಇದು ಪರಸ್ಪರ ದ್ವೇಷಸಾಧನೆ ಹಾಗೂ ಹಿಂಸಾಚಾರ ಭುಗಿಲೇಳಲು ಕಾರಣವಾಗುತ್ತದೆ. ಆಶ್ವಾಸನೆ ನೀಡಿದ ಸೇವೆಯನ್ನು ನೀಡಿದರೂ ಕೆಲವೊಂದು ಸಂದರ್ಭದಲ್ಲಿ ಪ್ರತಿ ದ್ವೇಷಸಾಧನೆಗೆ ಕಾರಣವಾಗುತ್ತದೆ.

ತೆರಿಗೆಗಳು ಇಂಥ ಇನ್ನೊಂದು ಪ್ರಚೋದಕ ಅಂಶ. ಇಲ್ಲಿ ವೈಯಕ್ತಿಕ ಆದಾಯ ಮತ್ತು ಖರ್ಚಿನ ನಡುವೆ ಸಮತೋಲನ ಸಾಧಿಸಬೇಕಾದ್ದು ಅಗತ್ಯ. ನಗರದಲ್ಲ ವಾಸಿಸುವ ಜನರಿಂದ ಆಗುತ್ತಿರುವ ವಾಸ್ತವ ಖರ್ಚಿನ ಆಧಾರದಲ್ಲಿ ಬಹುಶಃ ನ್ಯಾಯಬದ್ಧ ತೆರಿಗೆ ಹೇರಲು ಮೂಲವಾಗಬೇಕು. ಸಾಮಾಜಿಕ ಶಾಲೆಗಳು ಹೇಳುವಂತೆ, ಒಂದು ಸಮಾಜದ ನಿರ್ದಿಷ್ಟ ಜನಸಮೂಹ, ಉತ್ಪಾದನಾ ಕೇತ್ರದಲ್ಲಿ ಆಸಕ್ತಿ ಹೊಂದಿರಬೇಕು ಎನ್ನುವುದು ಇವರ ಅಭಿಮತ. ಅದು ಖಾಸಗಿ ಹಾಗೂ ಸರ್ಕಾರಿ ಸಂಸ್ಥೆಗಳಿಗೂ ಅನಿವಾರ್ಯವಾಗುತ್ತದೆ. ಇದರ ಜತೆಗೆ ಉತ್ಪಾದನೆಯ ಎಲ್ಲ ಹಂತಗಳಲ್ಲೂ ಬೆಲೆ ಮಟ್ಟವನ್ನು ನಿಯಂತ್ರಿಸುವುದು ಅಗತ್ಯ. ಆದ್ದರಿಂದ ಒಂದು ಸಮಾಜ ಬಳಸಿಕೊಳ್ಳುವ ವಸ್ತುಗಳ ಬೆಲೆ ಮತ್ತು ಸರಕು ಸಾಮಗ್ರಿಗಳ ಬೆಲೆ ನಿಗದಿಪಡಿಸಲಾಗುತ್ತದೆ. ಇದಕ್ಕೆ ಸಮಾಜಶಾಸ್ತ್ರಜ್ಞರು ಸೋಶಿಯನ್ ಕಂಟ್ರೋಲ್ ಥಿಯರಿಯ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತದೆ. ಇದು ಮುಕ್ತ ಮಾರುಕಟ್ಟೆ ವ್ಯವಸ್ಥೆಗೆ ವಿರುದ್ಧವಾದುದಲ್ಲ. ಮುಕ್ತ ಮಾರುಕಟ್ಟೆವ್ಯವಸ್ಥೆಯು ಶೋಷಣೆಯ ಸ್ವಾತಂತ್ರ್ಯವನ್ನು ನೀಡುವುದಿಲ್ಲ. ಉತ್ಪಾದನಾ ವ್ಯವಸ್ಥೆಯಲ್ಲಿ ಭಾಗವಹಿಸಲು ಇಚ್ಛಿಸುವ ದೇಶದ ಯಾವುದೇ ವ್ಯಕ್ತಿ ಉತ್ಪಾದನಾ ಕಾರ್ಯದಲ್ಲಿ



www.shikarat.com

ಭಾಗವಹಿಸಲು ಅವಕಾಶವಿದೆ. ಆದರೆ ಉತ್ಪಾದನೆ ಹಾಗೂ ಉತ್ಪಾದನೋತ್ತರ ಪ್ರಕ್ರಿಯೆಗಳು ಲಾಭ ಹಾಗೂ ಸಾಮಾಜಿಕ ನೀತಿ ಮತ್ತು ವಾಸ್ತವದ ನಡುವೆ ಸಾಮರಸ್ಯದ ಸಂಬಂಧಗಳನ್ನು ಸ್ಥಾಪಿಸಬೇಕಾದ್ದು ಅಗತ್ಯ.

ರಾಜಕಾರಣಿಗಳು ಹಾಗೂ ಅಧಿಕಾರಿಗಳು ಬಹುತೇಕ ರಾಷ್ಟ್ರಗಳಲ್ಲಿ ಭ್ರಷ್ಟರಾಗಲು ಮುಖ್ಯ ಕಾರಣವೆಂದರೆ, ಅವರಿಗೆ ನೀಡಿರುವ ಅಧಿಕಾರಗಳು. ಅದರಲ್ಲೂ ಮುಖ್ಯವಾಗಿ ಆರ್ಥಿಕ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರ ಅವರ ಭ್ರಷ್ಟಾಚಾರಕ್ಕೆ ಪೂರಕವಾಗಿದೆ. ಭಾರತದಲ್ಲಿ 1991ರಿಂದ ಆರ್ಥಿಕ ಸುಧಾರಣೆಗಳ ನೀತಿಯನ್ನು ಆರಂಭಿಸಿದ ಬಳಿಕ, ಇಂಥ ವಿವೇಚನಾ ಅಧಿಕಾರಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗಿವೆ. ಅದಾಗ್ಯೂ, ಇನ್ನು ಕೂಡಾ ಕೆಲ ಪ್ರಮುಖ ಕ್ಷೇತ್ರಗಳಲ್ಲಿ ಇಂಥ ಭ್ರಷ್ಟಾಚಾರಕ್ಕೆ ಅವಕಾಶ ನೀಡುವಂಥ ಕೆಲ ವಿವೇಚನಾ ಅಧಿಕಾರಗಳು ರಾಜಕಾರಣಿಗಳ ಉಳಿದಿಕೊಂಡಿವೆ. ಆದರೆ ಅವರ ವಿವೇಚನಾ ಅಧಿಕಾರ ಇರುವ ಕ್ಷೇತ್ರಗಳು ನಿಧಾನವಾಗಿ ಕಡಿಮೆಯಾಗುತ್ತಿದ್ದರೂ, ಸದಾ ನಿಯಂತ್ರಣ ಅಧಿಕಾರಗಳು ಸರ್ಕಾರದ ಕೈಯಲ್ಲೇ ಉಳಿಯುತ್ತವೆ ಎನ್ನುವುದು ವಾಸ್ತವ. ಇದನ್ನು ತಡೆಯಲು ಇರುವ ಏಕೈಕ ಮಾರ್ಗವೆಂದರೆ, ಸಾರ್ವಜನಿಕ ಹಿತಾಸಕ್ತಿಯ ಪ್ರತಿ ಕ್ಷೇತ್ರಗಳಲ್ಲೂ, ನೀತಿಗಳನ್ನು ರೂಪಿಸಲು ಮತ್ತು ಅಂಥ ನೀತಿಗಳನ್ನು ಪ್ರತಿ ಪ್ರಕರಣಗಳಿಗೆ ಅನ್ವಯಿಸುವ ಅಧಿಕಾರವನ್ನು ಸ್ವತಂತ್ರ್ಯ ಸಮಿತಿ ಅಥವಾ ಪ್ರಾಧಿಕಾರಕ್ಕೆ ವಹಿಸುವುದು. ಅಂಥ ಪ್ರತಿಯೊಂದು ಸಮಿತಿ ಅಥವಾ ಪ್ರಾಧಿಕಾರಗಳು ಶಾಸನಬದ್ಧ ಅಧಿಕಾರವನ್ನು ಹೊಂದಿರಬೇಕು ಮತ್ತು ಅದಕ್ಕೆ ಸದಸ್ಯರನ್ನು ಆಯ್ಕೆ ಮಾಡುವ ಅಧಿಕಾರ ಕೇಂದ್ರ ಸಚಿವ ಸಂಪುಟಕ್ಕೆ ಇರಬೇಕು.

ಆಯಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ವ್ಯಕ್ತಿಗಳನ್ನು ಗುರುತಿಸಿ, ಅಂಥವರನ್ನು ನಿರ್ದಿಷ್ಟ ಅವಧಿಗೆ ನೇಮಕ ಮಾಡಬೇಕು. ಇಂಥದ್ದೇ ಸೇವಾ ನಿಯಮಗಳನ್ನು ನ್ಯಾಯಾಧೀಶರು ಹಾಗೂ ಇತರ ಸಂವಿಧಾನಾತ್ಮಕ ಅಧಿಕಾರಿಗಳಿಗೆ ಕೂಡಾ ಅನ್ವಯಿಸಿದರೆ, ಹೆಚ್ಚು ಸ್ವತಂತ್ರ್ಯವಾಗಿ ಅವರು ಕಾರ್ಯನಿರ್ವಹಿಸುವುದು ಸಾಧ್ಯವಾಗುತ್ತದೆ. ಇಂಥ ಸಮಿತಿ ಅಥವಾ ಪ್ರಾಧಿಕಾರಗಳ ನಿರ್ಧಾರಗಳು ಸಚಿವರ ಅಧಿಕಾರ ವ್ಯಾಪ್ತಿಗೆ ಒಳಪಡದೇ ಇರುವುದರಿಂದ, ಮತ್ತು ಅವುಗಳನ್ನು ನ್ಯಾಯಾಲಯಗಳಲ್ಲಿ ಮಾತ್ರ ಪ್ರಶ್ನಿಸುವಂತಿರುವುದರಿಂದ, ಭ್ರಷ್ಟಾಚಾರದ ಒಂದು ಪ್ರಮುಖ ಮೂಲವನ್ನು ಹೊರಹಾಕಿದಂತಾಗುತ್ತದೆ. ಇದರ ಜತೆಗೆ ಇಂಥ ಕ್ರಮ ಇಡೀ ಆರ್ಥಿಕತೆಗೆ ಪ್ರಯೋಜನಕಾರಿಯಾಗಲಿದೆ. ಇಂಥ ಸಮಿತಿ ಹಾಗೂ ಪ್ರಾಧಿಕಾರಗಳು ವೃತ್ತಿಪರ ಹಾಗೂ ವಸ್ತುನಿಷ್ಠ ನಿರ್ಧಾರಗಳನ್ನು ಕೈಗೊಳ್ಳುವುದರಿಂದ ಇಡೀ ಪ್ರಕ್ರಿಯೆ ಪಾರದರ್ಶಕವಾಗುತ್ತದೆ.

ಭ್ರಷ್ಟಾಚಾರದ ಇನ್ನೊಂದು ಪ್ರಮುಖ ಕಾರಣವೆಂದರೆ ಚುನಾವಣಾ ವೆಚ್ಚ. ಇದು ಬಹುತೇಕ ಎಲ್ಲ ಪಕ್ಷಗಳಲ್ಲಿ ಚುನಾವಣಾ ಅಕ್ರಮಗಳಿಗೆ ಕಾರಣವಾಗುತ್ತದೆ. ಅದರಲ್ಲೂ ಮುಖ್ಯವಾಗಿ 1969ರಲ್ಲಿ ಇಂದಿರಾಗಾಂಧಿ, ರಾಜಕೀಯ ಪಕ್ಷಗಳಿಗೆ ಕಂಪನಿಗಳು ದೇಣಿಗೆ ನೀಡುವುದನ್ನು ನಿಷೇಧಿಸಿದ ಬಳಿಕ ಈ ಪ್ರವೃತ್ತಿ ಮತ್ತಷ್ಟು ಹೆಚ್ಚಿದೆ. ನಮ್ಮ ಲೋಕಸಭಾ ಸ್ಥಾನಗಳು ವಿಶ್ವದಲ್ಲೇ ಅತಿ ದೊಡ್ಡ ವ್ಯಾಪ್ತಿಯನ್ನು ಹೊಂದಿರುವ ಕ್ಷೇತ್ರಗಳು. ಇದರಿಂದ ಸಹಜವಾಗಿಯೇ ಚುನಾವಣೆಗೆ ಭಾರಿ ಪ್ರಮಾಣದ ವೆಚ್ಚ ತಗುಲುತ್ತದೆ. ನಮ್ಮ ಸಾರಿಗೆ ಮತ್ತು ಸಂಪರ್ಕ ಸಾಧನಗಳು ಇನ್ನೂ ಸಾಕಷ್ಟು ಪ್ರಗತಿ ಅಥವಾ ಅಭಿವೃದ್ಧಿ ಸಾಧಿಸಿಲ್ಲವಾದ್ದರಿಂದ, ಸ್ಥಳೀಯ ರೇಡಿಯೊ ಅಥವಾ ಟಿವಿ ಸ್ಟೇಷನ್‌ಗಳ ಕೊರತೆ ಇರುವುದರಿಂದ, ನಮ್ಮ ಮತದಾರರ ಜಾಗೃತಿ ಬಹಳಷ್ಟು ಕಡಿಮೆ ಪ್ರಮಾಣದಲ್ಲಿ ಆಗಿದೆ. ಇಂಥ ಕ್ಷೇತ್ರದಲ್ಲಿ ಒಂದು ಚುನಾವಣೆಯಲ್ಲಿ ಸ್ಪರ್ಧಿಸುವುದಾದರೆ, ಭಾರಿ ವೆಚ್ಚ ತಗುಲುತ್ತದೆ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ವೈಯಕ್ತಿಕ ಸಂಪರ್ಕಗಳನ್ನು ಸಾಧಿಸಬೇಕಾದರೆ ಮತ್ತು ಅಸ್ತಿತ್ವವನ್ನು ಸಾಬೀತುಪಡಿಸಬೇಕಾದರೆ ಇಂಥ ದುಬಾರಿ ವೆಚ್ಚ ಅನಿವಾರ್ಯ. ಪ್ರತಿ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಗೆ ಕನಿಷ್ಠ ಎಂದರೂ ಕೆಲ ಕೋಟಿ ರೂಪಾಯಿಗಳ ವೆಚ್ಚ ತಗುಲುತ್ತದೆ. ಇಂಥ ಹಣವನ್ನು ಬಹುತೇಕ ವ್ಯಾಪಾರಿ ಸಂಸ್ಥೆಗಳು ಮತ್ತು ವ್ಯಾಪಾರಿಗಳಿಂದ ಸಂಗ್ರಹಿಸಲಾಗುತ್ತದೆ.

ರಾಜಕಾರಣಿಗಳು ದುರಾಸೆಗೆ ಇಂಥ ಕೆಲ ದೊಡ್ಡ ವ್ಯಾಪಾರಿಕುಳಗಳು ಸಾಥ್ ನೀಡುತ್ತವೆ. ಕೆಲ ನಿರ್ದಿಷ್ಟ ರಾಜಕಾರಣಿಗಳಿಂದ ವಿವಿಧ ರೀತಿಯ ಸವಲತ್ತು ಮತ್ತು ಅಕ್ರಮ ಸೌಲಭ್ಯಗಳನ್ನು ಪಡೆದುಕೊಂಡು ವ್ಯಾಪಾರ ಸಾಮ್ರಾಜ್ಯವನ್ನು ಕಟ್ಟಿಕೊಂಡ ದೊಡ್ಡ ಕುಳಗಳು ಚುನಾವಣೆ ಸಂದರ್ಭದಲ್ಲಿ ತಮ್ಮ ರಾಜಕೀಯ ನೇತಾರರಿಗೆ ದೊಡ್ಡ ಪ್ರಮಾಣದ ಹಣವನ್ನು ನೀಡಲು ಸಿದ್ಧರಿರುತ್ತಾರೆ. ಭಾರತದ ಹಲವು ವ್ಯಾಪಾರಿ ಸಾಮ್ರಾಜ್ಯಗಳು ಬೆಳೆದದ್ದು, ಭ್ರಷ್ಟಾಚಾರದ ಹಿನ್ನೆಲೆಯಿಂದ ಎಂದರೆ ಅತಿಶಯೋಕ್ತಿಯಲ್ಲ. 1992ರ ವರೆಗೂ ಭಾರತದಲ್ಲಿ ಜಾರಿಯಲ್ಲಿದ್ದ ಲೈಸನ್ಸ್ ಹಾಗೂ ಪರ್ಮಿಟ್‌ಕೋಟಾ ರಾಜ್ ಪದ್ಧತಿಯನ್ನು ಶೋಷಣೆಗೆ ಬಳಸಿಕೊಂಡು ದೊಡ್ಡ ವ್ಯಾಪಾರ ಸಾಮ್ರಾಜ್ಯಗಳನ್ನು ಕಟ್ಟಿದರು ಎನ್ನುವುದು ಸುಳ್ಳಲ್ಲ. ರಾಜಕಾರಣಿಗಳು ಹಾಗೂ ಇಂಥ ವ್ಯಾಪಾರ ಸಾಮ್ರಾಜ್ಯಗಳ ನಡುವಿನ ಅಪವಿತ್ರ ಮೈತ್ರಿಯಿಂದಾಗಿ ಒಬ್ಬ ಪ್ರಾಮಾಣಿಕ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸುವುದು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಇಂಥ ವ್ಯಕ್ತಿಗಳು ರಾಜಕೀಯ ಕ್ಷೇತ್ರದ ಇಂಥ ಬದ್ಧತೆಗಳನ್ನು ಪೂರೈಸಲು ತಮ್ಮಿಂದ ಸಾಧ್ಯವೇ ಇಲ್ಲ ಎಂಬ ಕಾರಣಕ್ಕೆ ಸುಮ್ಮನಾಗುತ್ತಾರೆ.

ಇದಕ್ಕೆ ಉತ್ತಮ ಪರಿಹಾರ ಎಂದರೆ, ಸರ್ಕಾರವೇ ಅಭ್ಯರ್ಥಿಗಳ ಚುನಾವಣಾ ವೆಚ್ಚವನ್ನು ಭರಿಸುವುದು. ಸಂಸತ್ತಿನಲ್ಲಿ ಒಂದು ಅರ್ಹತೆ ಪಡೆದ ಕನಿಷ್ಠ ಮತವನ್ನು ಹೊಂದಿರುವ ಪಕ್ಷಗಳು ಸ್ಪರ್ಧೆಗೆ ಇಳಿಸುವ ಅಭ್ಯರ್ಥಿಗಳ ಚುನಾವಣಾ ವೆಚ್ಚವನ್ನು ಸರ್ಕಾರವೇ ಭರಿಸುವುದು ಸ್ವಲ್ಪಮಟ್ಟಿಗೆ ಪ್ರಯೋಜನಕಾರಿಯಾಗಬಹುದು. ಭ್ರಷ್ಟಾಚಾರವನ್ನು ಕಡಿಮೆ ಮಾಡುವುದು ಮಾತ್ರವಲ್ಲದೇ, ಸರ್ಕಾರ ಚುನಾವಣಾ ವೆಚ್ಚವನ್ನು ಭರಿಸುವ ಕ್ರಮದಿಂದಾಗಿ ಪ್ರಾಮಾಣಿಕ ಮತ್ತು ಸಭ್ಯ ವ್ಯಕ್ತಿಗಳು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೊಡ್ಡ ಮಟ್ಟದ ಹಗರಣಗಳು, ನಾಗರಿಕರು ಹಾಗೂ ಜನಪ್ರತಿನಿಧಿಗಳ ನಡುವಿನ ಅಲಿಖಿತ ಒಪ್ಪಂದವನ್ನು ಸಂಪೂರ್ಣವಾಗಿ ಉಲ್ಲಂಘಿಸುತ್ತವೆ. ವಾಸ್ತವವಾಗಿ ರೈತರ ಹಿತಾಸಕ್ತಿಗಳನ್ನು ರಕ್ಷಿಸಬೇಕಾದ ಜನಪ್ರತಿನಿಧಿಗಳು ಇದಕ್ಕೆ ವಿರುದ್ಧವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಇದಕ್ಕೆ ಕಾನೂನಾತ್ಮಕ ಮತ್ತು ಸಂವಿಧಾನಾತ್ಮಕ ತಡೆ ಇದ್ದರೂ, ಇಂಥ ಪ್ರಕರಣಗಳು ಮೇಲಿಂದ ಮೇಲೆ ಸಂಭವಿಸುತ್ತಲೇ ಇರುತ್ತವೆ. ಇದು ದೇಶದ ರಾಜಕೀಯ ಹಾಗೂ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಒಂದು ರೀತಿಯ ಸಾಂಸ್ಥಿಕ ಅವ್ಯವಸ್ಥೆ ಹಾಗೂ ಅರಾಜಕತೆಗೆ ಕಾರಣವಾಗುತ್ತದೆ.

ಸಾರ್ವಜನಿಕ ಅಧಿಕಾರಿಗಳ ಮತ್ತು ರಾಜಕಾರಣಿಗಳ ಇಂಥ ಲೋಪಗಳಿಗೆ ಏಕೈಕ ಪರಿಹಾರವೆಂದರೆ ಖಾಸಗೀಕರಣ. ಇಲ್ಲಿ ಮೊದಲು ನಮ್ಮ ಮನಸ್ಸಿಗೆ ಬರುವುದು ಸಾಮಾನ್ಯವಾಗಿ ವ್ಯಾಪಾರ ಕ್ಷೇತ್ರದಲ್ಲಿ ದಕ್ಷತೆಗೆ ಹೆಚ್ಚಿನ ಮಹತ್ವ ಇರುತ್ತದೆ. ಇಂಥ ದಕ್ಷತೆ ಮತ್ತು ಹೊಣೆಗಾರಿಕೆ


www.shikarat.com

ಸಾರ್ವಜನಿಕ ಕಾರ್ಯಚಟುವಟಿಕೆಗಳಿಗೂ ಅಗತ್ಯ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸೇವೆಯನ್ನು ಖಾಸಗಿ ವ್ಯಾಪಾರಿಗಳ ಸುಪರ್ದಿಗೆ ಬಿಡಬೇಕು. ಅದಾಗ್ಯೂ ಎಲ್ಲ ಖಾಸಗಿ ವ್ಯಾಪಾರಿ ಸಂಸ್ಥೆಗಳು ಮತ್ತು ವೃತ್ತಿಪರ ಘಟಕಗಳು ದಕ್ಷವಾಗಿರಬೇಕು ಎಂದೇನಿಲ್ಲ. ಖಾಸಗಿ ವಲಯದಲ್ಲೂ ಹಲವು ಹಣಕಾಸು ಹಗರಣಗಳು ಬೆಳಕಿಗೆ ಬಂದಿದ್ದು, ಇದನ್ನು ನಾವು ಎಚ್ಚರಿಕೆಯ ಘಂಟೆಗಾಗಿ ಪರಿಗಣಿಸಬೇಕು.

ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಒಂದು ಅಂಶವೆಂದರೆ ಆಧುನಿಕ ಅರ್ಥಶಾಸ್ತ್ರದ ಪಿತಾಮಹ ಎನಿಸಿಕೊಂಡ ಆಡಂ ಸ್ಮಿತ್ ಬಹಳಷ್ಟು ಹಿಂದೆಯೇ, ಮಾರುಕಟ್ಟೆ ಸ್ವಯಂ ಆಗಿ ದಿಢೀರನೇ ರೂಪುಗೊಳ್ಳಬಾರದು. ಬದಲಾಗಿ ಇದನ್ನು ಸರ್ಕಾರ ಮತ್ತು ಆಡಳಿತ ವ್ಯವಸ್ಥೆ ಇದನ್ನು ಸ್ಥಾಪಿಸಬೇಕು ಮತ್ತು ನಿರ್ವಹಿಸಿಕೊಂಡು ಹೋಗಬೇಕು ಎಂದು ಸಲಹೆ ಮಾಡಿದ್ದರು. ಅಂದರೆ ಸಮರ್ಪಕ ರಾಜಕೀಯ ಸಂಸ್ಥೆಗಳಿಲ್ಲದೇ, ಯಾವುದೇ ಮಾರುಕಟ್ಟೆ ಆರ್ಥಿಕತೆ ಅಥವಾ ಮಾರುಕಟ್ಟೆ ಸುಧಾರಣೆಗಳು ಸಾಧ್ಯವಿಲ್ಲ. ಆದರೆ ಇದೇ ಅವಕಾಶವಾದಿ ರಾಜಕಾರಣಿಗಳು ಮತ್ತು ಅವರ ಬಾಲಬಡುಕರಾದ ಅಧಿಕಾರಿ ಮಧ್ಯವರ್ತಿಗಳು, ಎಲ್ಲ ನಿಯಮಾವಳಿಗಳನ್ನು ಗಾಳಿಗೆ ತೂರಿ ಗುತ್ತಿಗೆ ನಿಯಮಗಳನ್ನು ರೂಪಿಸುವವರೇ ಇಂಥ ಮಾರುಕಟ್ಟೆ ಸುಧಾರಣೆಗಳನ್ನೂ ಜಾರಿಗೊಳಿಸುವವರಲ್ಲವೇ? ಇಂಥ ಪರಿಸ್ಥಿತಿಯಲ್ಲಿ, ಇಂಥ ಭ್ರಷ್ಟ ಸಾರ್ವಜನಿಕ ಸೇವಕರಿಗೆ ಖಾಸಗೀಕರಣ ಎನ್ನುವುದು, ಸಾರ್ವಜನಿಕ ಸಂಪನ್ಮೂಲವನ್ನು ತಮ್ಮ ಸ್ನೇಹಿತರಿಗೆ, ಸಂಬಂಧಿಕರಿಗೆ ಮತ್ತು ಕಕ್ಷಿದಾರರ ಕೈಗೆ ನೀಡಲು ದಾರಿ ಮಾಡಿಕೊಟ್ಟಂತಾಗುತ್ತದೆ ಎನ್ನುವುದು ವಾಸ್ತವ.

ಈ ಹಿನ್ನೆಲೆಯಲ್ಲಿ ಆರ್ಥಿಕ ಸುಧಾರಣೆಗಳ ಅಧ್ಯಯನವು ರಾಜಕೀಯ ಪುನರ್‌ರಚನೆ ಮತ್ತು ಸುಧಾರಣೆಗಳ ವಿಶ್ಲೇಷಣೆಯನ್ನು ಹೊರಗಿಡುವಂತಿಲ್ಲ. ಈ ಹಿನ್ನೆಲೆಯಲ್ಲಿ, ನಿಷ್ಕ್ರಿಯ ಹಾಗೂ ಭ್ರಷ್ಟ ರಾಜಕೀಯ ಸಂಸ್ಥೆಗಳು, ಸಾಮಾಜಿಕವಾಗಿ ಲಭದಾಯಕ ಹಾಗೂ ಸಾಂಸ್ಥಿಕ ಬದಲಾವಣೆಗಳ ಮನೋಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕಾದ್ದು, ಮಾರುಕಟ್ಟೆ ವ್ಯವಸ್ಥೆಯ ಯಶಸ್ಸಿಗೆ ಅನಿವಾರ್ಯವಾಗುತ್ತದೆ. ರಾಜಕೀಯ ಸಂಸ್ಥೆಗಳನ್ನು ಸರಿಯಾಗದಿದ್ದರೆ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ವ್ಯಾಪಕವಾಗಿರುವ ಅದಕ್ಷತೆ ನಿವಾರಣೆಯಾಗದಿದ್ದರೆ, ನಾವು ಕೇವಲ ಮಾರುಕಟ್ಟೆ ವ್ಯವಸ್ಥೆಯನ್ನೇ ನೆಚ್ಚಿಕೊಳ್ಳುವಂತಿಲ್ಲ. ಏಕೆಂದರೆ ಹಾಲಿ ಇರುವ ಸಾಂಸ್ಥಿಕ ವೈಫಲ್ಯದ ಪರಿಸ್ಥಿತಿಗೆ ಮಾರುಕಟ್ಟೆ ಶಿಸ್ತಿನ ಕೊರತೆ ಕಾರಣವಲ್ಲ. ಬದಲಾಗಿ, ಪ್ರಜಾಪ್ರಭುತ್ವದಲ್ಲಿ ಶಿಸ್ತು ಮೂಡಿಸುವ ವ್ಯವಸ್ಥೆಯ ಕೊರತೆ ಇದಾಗಿದೆ. ಉದಾರೀಕರಣಕ್ಕೆ ಕೇವಲ ಸರ್ಕಾರಿ ನೀತಿಗಳಷ್ಟೇ ಸಾಲದು; ಜತೆಗೆ ನಾಗರಿಕರನ್ನು ಸಶಕ್ತಗೊಳಿಸುವ ಕಾರ್ಯವೂ ಆಗಬೇಕು. ಅಂದರೆ ಸರ್ಕಾರಿ ಕಾರ್ಯಯಂತ್ರದ ಜತೆಗೆ ಖಾಸಗಿ ವಲಯ ಕೂಡಾ ನ್ಯಾಯಬದ್ಧ ನಿಯಮದ ಮೂಲಕ ಆರೋಗ್ಯಕರ ಪೈಪೋಟಿಯನ್ನು ನೀಡಲು ಅನುಕೂಲಕರ ಪರಿಸ್ಥಿತಿ ನಿರ್ಮಿಸಿಕೊಡಬೇಕು.

ಸ್ಪಷ್ಟವಾಗಿ ಹೇಳುವುದಾದರೆ, ಭ್ರಷ್ಟಾಚಾರ ಹಾಗೂ ಲಂಚವನ್ನು ನಿರ್ಮೂಲನ ಮಾಡಬೇಕಾದರೆ, ಕೇವಲ ಕಾನೂನಾತ್ಮಕ ಹಾಗೂ ಸಂವಿಧಾನಾತ್ಮಕ ತಡೆ ಹಾಗೂ ಸಮತೋಲನ ಅನಿವಾರ್ಯವಾದರೂ ಇವಷ್ಟೇ ಸಾಲದು; ಲಂಚ ಹಾಗೂ ಭ್ರಷ್ಟಾಚಾರದಿಂದ ರಕ್ಷಣೆ ಪಡೆಯಲು ಕೇವಲ ಸಂವಿಧಾನಾತ್ಮಕ ಮಾರ್ಗದಿಂದ ಸಾಧ್ಯವಿಲ್ಲ. ವಾಸ್ತವವಾಗಿ ರಾಜಕೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಸಂವಿಧಾನದ ವ್ಯಾಪ್ತಿಯಿಂದ ಹೊರಗಿಡುವಂತಿಲ್ಲ. ಪರಿಣಾಮಕಾರಿ ಸಾಂಸ್ಥಿಕ ಚೌಕಟ್ಟನ್ನು ಬಲಗೊಳಿಸಬೇಕಾದರೆ, ನಾವು ಪ್ರಜಾಪ್ರಭುತ್ವದ ವಾಸ್ತವ ಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಬೇಕು ಮತ್ತು ಅದರಲ್ಲೂ ಮುಖ್ಯವಾಗಿ ಆಡಳಿತದ ಸ್ಥಳೀಯ ಸಂರಚನೆಯನ್ನು ನಿರ್ದಿಷ್ಟವಾಗಿ ಬದಲಿಸುವ ಅಗತ್ಯವಿದೆ.

ಅಂದರೆ ನಾಗರಿಕ ಸಂಘ ಸಂಸ್ಥೆಗಳು ತಳಹಂತದಿಂದಲೇ ಒತ್ತಡ ತಂದು ಸರ್ಕಾರಿ ಅಧಿಕಾರಿಗಳು ಮತ್ತು ರಾಜಕೀಯ ನೇತಾರರು ಸಾರ್ವಜನಿಕ ಆಸ್ತಿಗಳನ್ನು ತಮ್ಮ ವೈಯಕ್ತಿಕ ಹಿತಾಸಕ್ತಿಗೆ ದುರುಪಯೋಗಪಡಿಸಿಕೊಳ್ಳದಂತೆ, ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು. ಇಂಥ ತಳಹಂತದ ಕಾರ್ಯಾಚರಣೆಯಿಂದಷ್ಟೇ ನಾವು ಭ್ರಷ್ಟಾಚಾರವನ್ನು ಸಮಗ್ರವಾಗಿ ನಿರ್ಮೂಲನೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂಬ ನಿರ್ಧಾರಕ್ಕೆ ಬರಬಹುದು. ಇದಕ್ಕೆ ಅಧಿಕಾರಸ್ಥರ ಬೊಗಳೆ ಭರವಸೆಗಳು, ನಂಬಲರ್ಹ ಬದ್ಧತೆಗಳಾಗಿ ಬದಲಾಗಬೇಕಾದ್ದು ಅಗತ್ಯ.

ಸ್ಥಳೀಯಮಟ್ಟದ ಸಮುದಾಯ ಸಂಘಟನೆಗಳು ಅಂದರೆ ನಾಗರಿಕ ಕಾವಲು ಸಮಿತಿಗಳಂಥ ಸಂಘಟನೆಗಳು ಸ್ಥಳೀಯ ಹಂತದ ಹೊಣೆಗಾರಿಕೆ ವ್ಯವಸ್ಥೆಯಾಗಿ ಬದಲಾಗಬೇಕು. ಸ್ಥಳೀಯ ಮಧ್ಯಸ್ಥಿಕೆದಾರ ಸಂಸ್ಥೆಗಳು, ಪಂಚಾಯತ್‌ರಾಜ್ ಸಂಸ್ಥೆಗಳು ಕೂಡಾ ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು. ಅಂಥ ಸ್ಥಳೀಯ ಪ್ರಜಾಪ್ರಭುತ್ವ ಘಟಕಗಳ ಕಾರ್ಯ ಚಟುವಟಿಕೆಗಳು, ಸಕ್ರಿಯವಾಗಿದ್ದು, ಸ್ಥಳೀಯ ಆಡಳಿತ ವ್ಯವಸ್ಥೆಯ ಮೇಲೆ ಒತ್ತಡ ತರಬೇಕು. ಆಗ ಮಾತ್ರ ಅಧಿಕಾರಾತ್ಮಕ ಮತ್ತು ಮೇಲ್ವಿಚಾರಣೆ ಅಧಿಕಾರಗಳು ದುರುಪಯೋಗವಾದಂತೆ ತಡೆಯಬಹುದು.

ನಮ್ಮ ಜನಸಮೂಹದ ಬಡತನವನ್ನು ನೋಡಿದಾಗ ಒಂದು ಬಗೆಯ ನಿರಾಶಾವಾದ ಬೆಳೆಯುತ್ತದೆ. ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಮಂದಿ, ಎಂದೂ ತಮ್ಮ ರಾಜಕೀಯ ಹಕ್ಕನ್ನು ಚಲಾಯಿಸಲು ಸಮರ್ಥರಾಗದ ಮಂದಿ, ಇಂಥ ಭ್ರಷ್ಟ ಸಾರ್ವಜನಿಕ ಸೇವಕರನ್ನು ಕಿತ್ತೊಗೆಯಲು ಇನ್ನೂ ಸಮರ್ಥರಾಗಲಿಲ್ಲ. ಖಂಡಿತವಾಗಿಯೂ ಹಕ್ಕು ಚಲಾವಣೆಯಾಗುವುದು ಕನಿಷ್ಠ ಆರ್ಥಿಕ ಭದ್ರತೆಯನ್ನು ಕಲ್ಪಿಸಿದಾಗ. ಸಮಾಜದಲ್ಲಿ ಆದಾಯದ ಅಸಮಾನತೆ, ಲಿಂಗ ಅಸಮಾನತೆ ಮತ್ತು ಜಾತಿ ಪದ್ಧತಿ ಇರುವವರೆಗೂ ಸ್ಥಳೀಯ ಸಂಸ್ಥೆಗಳು ಉಳ್ಳವರ ಮತ್ತು ಪ್ರಭಾವಿಗಳ ಹಿಡಿತದಲ್ಲೇ ಮುಂದುವರಿಯುತ್ತವೆ. ಇಂಥ ಭಾರಿಪ್ರಮಾಣದ ಅಸಮಾನತೆಯ ಪರಿಸ್ಥಿತಿಯಲ್ಲಿ, ಸ್ಥಳೀಯ ರಾಜಕೀಯ ಸಂರಚನೆಗಳು, ಸಾಂಸ್ಥಿಕ ವೈಫಲ್ಯಕ್ಕೆ ಒಳಗಾಗುವ ಸಾಧ್ಯತೆಗಳು ಅಧಿಕವಾಗಿರುತ್ತವೆ. ಇಂಥ ಸ್ಥಳೀಯ ಸಂಸ್ಥೆಗಳು ಸಾಂಸ್ಥಿಕ ಬದಲಾವಣೆಗೆ ವಿರುದ್ಧವಾಗಿರುತ್ತವೆ ಮತ್ತು ಸಮಗ್ರ ಅಭಿವೃದ್ಧಿಗೆ ತಡೆಯಾಗಿ ಪರಿಣಮಿಸುತ್ತವೆ.

ಅಂದರೆ ಪರಿಸ್ಥಿತಿಯ ಸುಧಾರಣೆಗೆ ಏನೂ ಮಾಡುವಂತಿಲ್ಲವೇ? ಖಂಡಿತವಾಗಿಯೂ ಧನಾತ್ಮಕ ಕ್ರಮಗಳು ಸಾಧ್ಯ. ನಾಗರಿಕರು ಹೆಚ್ಚು ಸಕ್ರಿಯರಾಗುವುದು ಮತ್ತು ಸ್ಥಳೀಯ ಹಂತದಲ್ಲಿ ಜನರ ಪಾಲ್ಗೊಳ್ಳುವಿಕೆ ಅಧಿಕವಾಗುವುದರಿಂದ ಪರಿಸ್ಥಿತಿಯಲ್ಲಿ ಬದಲಾವಣೆ ಸಾಧ್ಯ. ಸಮುದಾಯ ಸಂಘಟನೆಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳ ಮೂಲಕ ಇಂಥ ಜನ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಬಹುದು. ಸ್ಥಳೀಯ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷಗಳು ಅಸಮಾನತೆಯನ್ನು ನಿವಾರಿಸುವಲ್ಲಿ ಮತ್ತು ಬಡವರಿಗೆ ಆರ್ಥಿಕ ಭದ್ರತೆ ಒದಗಿಸುವಲ್ಲಿ ಧನಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು. ಅಸಮಾನತೆ ಕಡಿಮೆಯಾದಾಗ ಸಹಜವಾಗಿಯೇ ಜನರು ತಮ್ಮ ರಾಜಕೀಯ ಹಕ್ಕನ್ನು ಚಲಾಯಿಲು



www.shikarat.com

Universal Coaching Centre

ಮುಂದಾಗುತ್ತಾರೆ. ಇದರಿಂದ ಬೇಜವಾಬ್ದಾರಿಯುತ ರಾಜಕಾರಣಿಗಳು ಖಂಡಿತವಾಗಿಯೂ ಸಾರ್ವಜನಕರಿಗೆ ಹೊಣೆಗಾರಿಕೆ ಪ್ರದರ್ಶಿಸುವ ಮನೋಭಾವ ಬೆಳೆಸಿಕೊಳ್ಳುತ್ತಾರೆ ಮತ್ತು ಸಾರ್ವಜನಿಕ ಬೇಡಿಕೆಗಳಿಗೆ ಸಮರ್ಪಕವಾಗಿ ಸ್ಪಂದಿಸುತ್ತಾರೆ. ಮಾರುಕಟ್ಟೆ ಸುಧಾರಣೆಯ ನಿಟ್ಟಿನಲ್ಲಿ ದಕ್ಷತೆ ಹಾಗೂ ಕಲ್ಯಾಣದ ಉದ್ದೇಶಗಳು ಈಡೇರಿದಂತಾಗುತ್ತದೆ. ಇಂಥ ಸಾಂಸ್ಥಿಕ ಸುಧಾರಣೆಗಳು ಪ್ರಜಾಪ್ರಭುತ್ವ ಮೌಲ್ಯಗಳ ಸುಧಾರಣೆಗೂ ಕಾರಣವಾಗುತ್ತವೆ.

ಇಂದು ಮನೆಮಾಡಿರುವ ಭ್ರಷ್ಟ ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸುವ ನಿಟ್ಟಿನಲ್ಲಿ, ಹೊಸ ಪ್ರಜಾಸತ್ತಾತ್ಮಕ ಪ್ರಯೋಗಗಳಿಗೆ ವೇದಿಕೆಯಾಗಿ ಸದ್ಯದ ಪರಿಸ್ಥಿತಿಯನ್ನು ನಾವು ಬದಲಿಸಿಕೊಳ್ಳಬೇಕು. ಭಾರತದಂಥ ಮುಕ್ತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಟ್ಟ ವ್ಯಾಪಾರಿಗಳು ಮತ್ತು ರಾಜಕಾರಣಿಗಳು ಕಾನೂನಿನ ವ್ಯಾಪ್ತಿಗೆ ಒಳಪಡಬೇಕಾಗುತ್ತದೆ. ಚುನಾವಣೆಗಳು ನಡೆಯುವ ವರ್ಷಗಳ ಮಧ್ಯೆ ಕೂಡಾ ರಾಜಕಾರಣಿಗಳು ಸಮಾಜಕ್ಕೆ ಹೊಣೆಗಾರಿಕೆ ಪ್ರದರ್ಶಿಸುವಂತಿರಬೇಕು. ಇದಕ್ಕೆ ಪೂರಕವಾದ ಕಾನೂನನ್ನು ತರುವ ಅಗತ್ಯವಿದೆ. ಆದರೆ ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ; ಏಕೆಂದರೆ ರಾಜಕಾರಣಿಗಳೇ ಪೊಲೀಸ್ ಹಾಗೂ ವಿಚಾರಣಾ ವ್ಯವಸ್ಥೆಯ ನಿಯಂತ್ರಣವನ್ನು ಹೊಂದಿರುತ್ತಾರೆ. ಈಗ ಇರುವ ಪರಿಸ್ಥಿತಿಯಲ್ಲಿ ಎಲ್ಲ ರಾಜಕೀಯ ಪಕ್ಷಗಳ ನಡುವಿನ ಒಂದು ಅಲಿಖಿತ ಒಪ್ಪಂದವೆಂದರೆ, ಯಾವ ಚುನಾಯಿತ ಪ್ರತಿನಿಧಿಗಳು ಕೂಡಾ ವಿಚಾರಣೆಗೆ ಗುರಿಯಾಗುವಂತಿಲ್ಲ. ಇದರಿಂದಾಗಿ ಡಕಾಯಿತರು ಮತ್ತು ದರೋಡೆಕೋರರು ಶಾಸಕರಾಗಿ ಆಯ್ಕೆಯಾಗಲು ಇಚ್ಛಿಸಿದರೆ ಅಥವಾ ಆಯ್ಕೆಯಾದರೆ ಆಶ್ಚರ್ಯಪಡಬೇಕಿಲ್ಲ. ಇಂದು ಕೇಂದ್ರ ಹಾಗೂ ರಾಜ್ಯಗಳಲ್ಲಿ ಗೃಹಸಚಿವರು ಪೊಲೀಸ್ ವ್ಯವಸ್ಥೆ ಹಾಗೂ ವಿಚಾರಣಾ ವ್ಯವಸ್ಥೆಯನ್ನು ನಿಯಂತ್ರಿಸುತ್ತಾರೆ. ಆದರೆ ಗೃಹಸಚಿವರೇ, ಅಪರಾಧಜಗತ್ತಿನ ಸಂಪರ್ಕ ಇರುವ ರಾಜಕೀಯ ವ್ಯವಸ್ಥೆಯ ಭಾಗವಾಗಿರುವಾಗ, ಅವರು ಅಪರಾಧ ಮನೋಭಾವವನ್ನು ನಿಯಂತ್ರಿಸಲು ಶ್ರಮಿಸುವುದು ಅಸಂಭವ. ಈ ಕಾರಣದಿಂದ ಗೃಹಸಚಿವರಿಂದ ಮುಕ್ತವಾದ ಸ್ವತಂತ್ರ ಸಂಸ್ಥೆಯ ಅಗತ್ಯ ಕಾಣುತ್ತಿದೆ. ಅಪರಾಧ ಪತ್ತೆ ಮತ್ತು ವಿಚಾರಣೆಯ ವ್ಯವಸ್ಥೆಯನ್ನು ರಾಜಕೀಯದಿಂದ ಮುಕ್ತಗೊಳಿಸುವ ಮೂಲಕ ಅಂಥ ಸಂಸ್ಥೆಗಳಿಗೆ ಸ್ವತಂತ್ರ ಪ್ರಾಧಿಕಾರದ ಸ್ಥಾನಮಾನ ನೀಡುವ ಸಂಬಂಧ ಸಂವಿಧಾನಕ್ಕೆ ತಿದ್ದುಪಡಿ ತರುವ ಅಗತ್ಯವಿದೆ.

ಪೊಲೀಸರಿಗೆ ಸಾಮಾನ್ಯವಾಗಿ ಎರಡು ವಿಭಿನ್ನ ಕಾರ್ಯಗಳನ್ನು ವಹಿಸಲಾಗಿರುತ್ತದೆ. ಒಂದು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಹಾಗೂ ಇನ್ನೊಂದು ಅಪರಾಧಿಗಳನ್ನು ಹಿಡಿಯುವುದು. ಭಯೋತ್ಪಾದನೆ ತಡೆಯೂ ಸೇರಿದಂತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಖಂಡಿತವಾಗಿಯೂ ರಾಜಕೀಯ ಕಾರ್ಯ. ಇದನ್ನು ಗೃಹಸಚಿವರ ಮೇಲುಸ್ತುವಾರಿಯಲ್ಲೇ ಮಾಡಬೇಕು. ಆಧರೆ ಅಪರಾಧ ಪತ್ತೆ ವಿಭಾಗವನ್ನು ತೆಗೆದುಕೊಂಡರೆ, ಇದು ರಾಜಕೀಯ ಹಿಡಿತದಿಂದ ಮುಕ್ತವಾಗಿರಬೇಕು. ಇದು ರಾಜಕೀಯ ನಿಯಂತ್ರಣದಲ್ಲಿ ನಡೆಯಬೇಕಾದ ಅಗತ್ಯವೇ ಇಲ್ಲ.

ಇದು ಒಂದು ರೀತಿಯಲ್ಲಿ ಕಡಿಮೆ ಪ್ರಮಾಣದ ತೆರಿಗೆ ದರ ಹೆಚ್ಚು ತೆರಿಗೆ ಆದಾಯ ತರುವಂತೆ. ತೆರಿಗೆ ದರ ಕಡಿಮೆಯಾಗುವುದರಿಂದ ತೆರಿಗೆಗಳ್ಳರ ಪ್ರಮಾಣವೂ ಕಡಿಮೆಯಾಗುತ್ತದೆ. ಸಹಜವಾಗಿಯೇ ಹೆಚ್ಚಿನ ಮಂದಿ ತೆರಿಗೆ ಪಾವತಿ ಮಾಡುವುದರಿಂದ ತೆರಿಗೆ ಆದಾಯ ಹೆಚ್ಚುತ್ತದೆ. ಆದರೆ ಒಂದು ನಿರ್ದಿಷ್ಟ ಮಿತಿಯಿಂದ ತೆರಿಗೆಯ ದರವನ್ನು ಕಡಿಮೆ ಮಾಡುವುದು ಸಾಧ್ಯವಿಲ್ಲ. ಏಕೆಂದರೆ ಅಂಥ ಕ್ರಮ ಕೈಗೊಂಡರೆ ಅದು ಸರ್ಕಾರದ ಕಾರ್ಯನಿರ್ವಹಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಅಕ್ರಮ ನಿಧಿಗೆ ಎಲ್ಲಿಯವರೆಗೆ ಆಗ್ರಹ ಇರುತ್ತದೆಯೋ ಅಲ್ಲಿಯವರೆಗೆ ಭ್ರಷ್ಟಾಚಾರ ಅಥವಾ ಲಂಚವನ್ನು ಕಡಿಮೆ ಮಾಡುವುದು ಅಸಾಧ್ಯ. ಇಂಥ ಆಗ್ರಹ ರಾಜಕಾರಣಿಗಳ ಚುನಾವಣಾ ನಿಧಿಯ ಬೇಡಿಕೆಯಿಂದಷ್ಟೇ ಅಥವಾ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಇರುವವರಿಂದ ಮಾತ್ರ ಉದ್ಭವಿಸುವುದಲ್ಲ. ಇದಕ್ಕೆ ಸಾಮಾಜಿಕ ಮನೋಪ್ರವೃತ್ತಿ ಕೂಡಾ ಕಾರಣವಾಗುತ್ತದೆ. ಯಾವುದೇ ತಡೆಯಿಲ್ಲದ ದುಂದುಗಾರಿಕೆ ಸಾಮಾಜಿಕ ಸ್ಥಾನಮಾನವನ್ನು ತಂದುಕೊಡುವುದಾದರೆ, ಖಂಡಿತವಾಗಿಯೂ ತಮ್ಮ ಸಾಮರ್ಥ್ಯಕ್ಕಿಂತ ಅಧಿಕ ವೆಚ್ಚ ಮಾಡುವ ಎಲ್ಲ ಸಾಧ್ಯತೆಗಳೂ ಇರುತ್ತವೆ. ತೆರಿಗೆ ಪಾವತಿಸಿ ಉಳಿಯುವ ಹಣವನ್ನಷ್ಟೇ ಆತ ಖರ್ಚು ಮಾಡುವುದಲ್ಲದೇ, ಅಧಿಕ ವೆಚ್ಚಕ್ಕಾಗಿ, ಹೆಚ್ಚಿನ ಆದಾಯ ಪಡೆಯಲು, ವಾಮಮಾರ್ಗವನ್ನು ಅನುಸರಿಸುವುದು ಸಹಜ. ಇಂಥ ಸಾಮಾಜಿಕ ವಾತಾವರಣವೇ ಭ್ರಷ್ಟಾಚಾರ ವ್ಯಾಪಕವಾಗಿ ಮುಂದುವರಿಯಲು ಪ್ರಮುಖ ಕಾರಣ. ಕಲಬೆರಕೆ ಆಹಾರ ಮಮಾರಾಟ ಮಾಡುವುದು ಮತ್ತು ನಕಲಿ ಔಷಧಿಗಳನ್ನು ಮಾರಾಟ ಮಾಡುವುದು, ಪರೀಕ್ಷೆಗಳಲ್ಲಿ ವಂಚನೆ, ವಿದೇಶಿ ವಸ್ತುಗಳನ್ನು ಅಗ್ಗದ ದರದಲ್ಲಿ ಪಡೆಯುವ ಸಲುವಾಗಿ ಕಳ್ಳಸಾಗಣೆದಾರರನ್ನು ರಾಷ್ಟ್ರಪ್ರೇಮಿಗಳಂತೆ ಬಿಂಬಿಸುವುದು. ಭಯೋತ್ಪಾದನಾ ಕೃತ್ಯಗಳಿಗೆ ಹಣಕಾಸು ನೆರವು ನಿಡುವುದು ಕೂಡಾ ಭ್ರಷ್ಟಾಚಾರದ ಮುಖಗಳೇ. ರಾಷ್ಟ್ರದ ಭದ್ರತೆಯನ್ನು ಒತ್ತೆ ಇಟ್ಟೂ, ಉನ್ನತ ಮಟ್ಟದಲ್ಲಿ ಇಂಥ ದೊಡ್ಡ ಪ್ರಮಾಣದ ಭ್ರಷ್ಟಾಚಾರಗಳೂ ನಡೆಯುತ್ತವೆ.

ಭ್ರಷ್ಟಾಚಾರ ಅಥವಾ ಲಂಚವನ್ನು ಕೇವಲ ಅಪರಾಧಿ ವರ್ಗಕ್ಕಷ್ಟೇ ಸೀಮಿತಗೊಳಿಸುವ ಸಲುವಾಗಿ, ಭ್ರಷ್ಟರಾಗುವ ಅಪಾಯದ ಸಾಧ್ಯತೆಯನ್ನು ಗಣನೀಯವಾಗಿ ಹೆಚ್ಚಿಸುವುದು ಅಗತ್ಯ. ಇದು ಕೇವಲ ಕಾನೂನುಬದ್ಧ ದಂಡವನ್ನು ಹೆಚಿಸುವುದರಿಂದಷ್ಟೇ ಸಾಧ್ಯವಾಗದು. ಭ್ರಷ್ಟಾಚಾರವು ಒಬ್ಬ ವ್ಯಕ್ತಿಯ ಸಾಮಾಜಿಕ ಸ್ಥಾನಮಾನದಿಂದ ವಂಚಿತರಾಗುವಂತೆಯೂ ಮಾಡಬೇಕು. ಆಗ ಸಾಮಾಜಿಕ ಸ್ಥಾನಮಾನ ಕಳೆದುಕೊಳ್ಳುವ ಭಯದಿಂದ ಎಂಥ ಪರಿಸ್ಥಿತಿಯಲ್ಲೂ, ಭ್ರಷ್ಟಾಚಾರದಿಂದ ಗಳಿಸುವ ಆದಾಯ ಮಹತ್ವದ್ದಲ್ಲ ಎಂಬ ನಿರ್ಧಾರಕ್ಕೆ ಆ ವ್ಯಕ್ತಿ ಬರುವಂತಾಗುತ್ತದೆ. ನಾಗರಿಕ ಸಮಾಜದ ನಿಯಮಾವಳಿಗಳನ್ನು ಉಲ್ಲಂಘಿಸಿ ಭ್ರಷ್ಟಾಚಾರದಲ್ಲಿ ತೊಡಗುವ ವ್ಯಕ್ತಿಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಬೇಕು ಎಂದು ನಾಗರಿಕ ಸಮಾಜ ನಿರ್ಧರಿಸುವ ವರೆಗೂ ಪರಿಸ್ಥಿತಿ ಬದಲಾಗದು. ಒಂದು ಸಮಾಜದಲ್ಲಿ ಎಲ್ಲರೂ ಅಲ್ಲದಿದ್ದರೂ, ಬಹುತೇಕ ಮಂದಿ ಈಗ ಇರುವ ನಿಯಮಾವಳಿಗಳು ನ್ಯಾಯಬದ್ಧವಾಗಿದೆ ಎಂಬ ನಿರ್ಧಾರಕ್ಕೆ ಬರಬೇಕು. ದೇಶದ ಕಾನೂನನ್ನು ಸಮಗ್ರವಾಗಿ, ಸಮರ್ಥವಾಗಿ ಮತ್ತು ನ್ಯಾಏಬದ್ಧವಾಗಿ ಚಲಾಯಿಸಿದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಯಬಹುದು. ಸಾರ್ವಜನಿಕ ಸೇವಕರು ಎನಿಸಿಕೊಂಡವರು, ಉನ್ನತ ಮಟ್ಟದ ನೈತಿಕ ಮೌಲ್ಯಗಳನ್ನು ಪ್ರದರ್ಶಿಸುವುದು ಇದಕ್ಕೆ ಅಗತ್ಯ. ಇದು ಖಂಡಿತವಾಗಿಯೂ ಆದರ್ಶವಾದವಲ್ಲ. ವಾಸ್ತವ ವಾದ. ಸಾಮಾಜಿಕ ವ್ಯವಸ್ಥೆಯಲ್ಲಿ ಜನರು ನೈತಿಕವಾಗಿ ಸಮರ್ಥರಾಗುವವರೆಗೂ ಮತ್ತು ಭ್ರಷ್ಟಾಚಾರದ ಅಪಾಯಗಳ ಬಗ್ಗೆ



www.shikarat.com

ಜಾಗೃತರಾಗುವವರೆಗೂ, ಸಾರ್ವಜನಿಕ ಜೀವನದ ಮೇಲೆ ಪ್ರಭಾವ ಬೀರುವ ಸಾಮರ್ಥ್ಯ ಬೆಳೆಸಿಕೊಳ್ಳುವವರೆಗೂ ಇದು ಸಾಧ್ಯವಿಲ್ಲ. ಇದಾಗದಿದ್ದರೆ ಪ್ರಜಾಪ್ರಭುತ್ವ ಎನ್ನುವುದು ಏಕಚಕ್ರಾಧಿತ್ಯವಾಗಿ ಬದಲಾಗುತ್ತದೆ.

## 10. ಮಾನವಹಕ್ಕುಗಳು

ಪ್ರಮುಖವಾಗಿ ಅಭಿವೃದ್ಧಿಪಡಿಸಬೇಕಾದ ಅಂಶಗಳು

1. ಜಾಗತಿಕ ಮಟ್ಟದಲ್ಲಿ ಮಾನವಹಕ್ಕುಗಳಿಗೆ ಹೆಚ್ಚುತ್ತಿರುವ ಮಹತ್ವ

2. ಮಾನವ ಹಕ್ಕುಗಳ ಪರಿಕಲ್ಪನೆಯ ಬಗ್ಗೆ ಬೇರೆ ಬೇರೆಯವರು ಬೇರೆ ಬೇರೆ ವ್ಯಾಖ್ಯೆಗಳನ್ನು ನೀಡಿದ್ದಾರೆ. ಆದರೆ ಪಾಶ್ಚಿಮಾತ್ಯ ದೃಷ್ಟಿಕೋನವೇ ಎಲ್ಲೆಡೆ ಎದ್ದುಕಾಣುತ್ತಿದೆ.

3. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಎಂಬ ರಾಜಕೀಯ ವಿಭಜನೆ ಹಿನ್ನೆಲೆಯಲ್ಲಿ ಉತ್ತರ ಮತ್ತು ಪಶ್ಚಿಮ ಭಾಗದ ದೇಶಗಳು ಮಾನವ ಹಕ್ಕುಗಳನ್ನು ಪ್ರತಿಪಾದಿಸುತ್ತಿದ್ದರೆ, ಪೂರ್ವ ಮತ್ತು ದಕ್ಷಿಣ ಭಾಗದ ದೇಶಗಳು ಆರ್ಥಿಕ ಹಾಗೂ ಸಾಮಾಜಿಕ ಹಕ್ಕುಗಳಿಗೆ ಒತ್ತು ನೀಡಿವೆ.

4. ಆದರೆ ಎರಡೂ ಕಡೆಯವರ ವಿಶ್ವಾಸಾರ್ಹತೆ ಮಾತ್ರ ಪ್ರಶ್ನಾರ್ಹ. ಏಕೆಂದರೆ ಎರಡೂ ದೃಷ್ಟಿಕೋನಗಳೂ ತಮ್ಮ ಮೂಗಿನ ನೇರಕ್ಕೇ ಇದ್ದು, ವೈಯಕ್ತಿಕ ಲಾಭದ ಅಂಶಗಳಿಗೆ ಅನುಗುಣವಾಗಿಯೇ ಪ್ರತಿಪಾದನೆಯಾಗಿವೆ.

5, ಭಾರತದ ದೃಷ್ಟಿಕೋನ ಮತ್ತು ಮಾನವಹಕ್ಕುಗಳ ಸ್ಥಿತಿಗತಿ

6. ಸಾರ್ವಜನಿಕರಲ್ಲಿ ಮಾನವಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯತೆ

7. ಎಲ್ಲ ಬಗೆಯ ಮಾನವ ಹಕ್ಕುಗಳು ಕೂಡಾ ಸಮಾನವಾಗಿ ಪ್ರಮುಖ.

ವಿಶ್ವಸಂಸ್ಥೆಯ ಮಾನವಹಕ್ಕು ಘೋಷಣೆಗೆ ಬದ್ಧವಾಗಿರಲು ವಿಶ್ವದ ಬಹುತೇಕ ಎಲ್ಲ ದೇಶಗಳು ಒಪ್ಪಿಕೊಮಡಿದ್ದು,

ಅಂತಾರಾಷ್ಟ್ರೀಯ ಅಭಿಪ್ರಾಯಕ್ಕೆ ಮನ್ನಣೆ ನೀಡುವ ಬದ್ಧತೆಯನ್ನು ಪ್ರದರ್ಶಿಸಿವೆ. ಅಂಥ ಅಂತಾರಾಷ್ಟ್ರೀಯ ಜನಾಭಿಪ್ರಾಯವನ್ನು ಒಪ್ಪಿಕೊಳ್ಳದಿದ್ದರೆ ಅಂಥ ದೇಶಗಳಿಗೆ ಮಾನವಹಕ್ಕು ವಿರೋಧಿ ದೇಶ ಎಂಬ ಹಣೆಪಟ್ಟಿ ಕಟ್ಟಲಾಗುತ್ತದೆ. ಕೆಲ ದೇಶಗಳು ರಾಜಕೀಯ ಅಸ್ಥಿರತೆ, ಸಾಮಾಜಿಕ ವಿಭಜನೆ, ಸಮರ್ಪಕ ಸಾಂಸ್ಥಿಕ ಚೌಕಟ್ಟಿನ ಕೊರತೆ, ಅಸಮರ್ಪಕ ಸಂಪನ್ಮೂಲ ಲಭ್ಯತೆ ಮತ್ತಿತರ ಅನಿವಾರ್ಯ ಕಾರಣಗಳಿಂದಾಗಿ ವಿಶ್ವಸಂಸ್ಥೆ ನಿಗದಿಪಡಿಸಿದ ಮಾನದಂಡವನ್ನು ಅನುಸರಿಸಲು ವಿಫಲವಾದರೆ, ಅಂಥ ದೇಶಗಳನ್ನೂ ಮಾನವಹಕ್ಕು ವಿರೋಧಿ ದೇಶಗಳ ಗುಂಪಿಗೆ ಸೇರಿಸಲಾಗುತ್ತಿದೆ. ಅದಾಗ್ಯೂ ಮಾನವಹಕ್ಕುಗಳ ಪ್ರಶ್ನೆ ಇಂದು ಸಮಾಜದಲ್ಲಿ ಆಳವಾದ ಮಹತ್ವನ್ನು ಹೊಂದಿವೆ. ಬಹುಕಾಲದ ವರೆಗೆ ವಿವಿಧ ಆಡಳಿತಗಳು ನಿರಾಕರಿಸಿದ ಹಕ್ಕನ್ನು ಇದೀಗ ಉದಾರವಾದಿಗಳು ಮತ್ತು ವಿವೇಚನಾಶೀಲ ಸಾಮಾಜಿಕ ಕಾರ್ಯಕರ್ತರು ನಡೆಸಿದ ಪ್ರಯತ್ನಗಳ ಫಲವಾಗಿ, ಮಾನವಹಕ್ಕುಗಳು ಇದೀಗ ಜಾಗತಿಕ ರಾಜಕೀಯ ಕಾರ್ಯಸೂಚಿಯಲ್ಲಿ ಸ್ಥಾನಪಡೆದಿವೆ ಮಾತ್ರವಲ್ಲದೇ, ಪ್ರಚಲಿತ ಸಮಸ್ಯೆ ಎಂಬ ಸ್ಥಾನಮಾನವನ್ನೂ ಹೊಂದಿವೆ.

ಮಾನವಹಕ್ಕು ಎಂದರೇನು ಎಂಬ ಬಗ್ಗೆ ವಿಶ್ವಾದ್ಯಂತ ತೀಕ್ಷ್ಣವಾದ ಅಭಿಪ್ರಾಯಭೇದಗಳಿವೆ. ಅವುಗಳನ್ನು ಹೇಗೆ ಅನುಷ್ಠಾನಕ್ಕೆ ತರಬೇಕು, ವಿಶ್ವಸಂಸ್ಥೆ, ಇತರ ಅಂತಾರಾಟ್ರೀಯ ಸಂಘಸಂಸ್ಥೆಗಳು ಅಥವಾ ಸ್ವಯಂಸೇವಾ ಸಂಸ್ಥೆಗಳು ಇದರಲ್ಲಿ ಯಾವ ಪಾತ್ರವನ್ನು ನಿರ್ವಹಿಸಬೇಕು, ಮಾನವಹಕ್ಕು ಉಲ್ಲಂಘನೆ ಅಥವಾ ನಿಂದನೆ ಎಂದರೇನು, ಯಾವ ಮಾನವಹಕ್ಕುಗಳಿಗೆ ಇತರ ಹಕ್ಕುಗಳಿಗಿಂತ ಆದ್ಯತೆ ನೀಡಬೇಕು ಹೀಗೆ ವಿಭಿನ್ನ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿವೆ. ಮಾನವಹಕ್ಕುಗಳ ಪ್ರತಿಪಾದನೆ, ಮಾನವತೆಯ ಬಗೆಗಿನ ಹೊಸ ಅಂತಾರಾಷ್ಟ್ರೀಯ ಜಾಗೃತಿಯಿಂದ ಆಗಿದೆಯೇ ಅಥವಾ ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯಲ್ಲಿ ಇದೊಂದು ಅಸ್ತ್ರಮಾತ್ರವೇ ಎಂಬ ಬಗ್ಗೆಯೂ ಜಿಜ್ಞಾಸೆಗಳಿವೆ. ಅದೇನೇ ಇದ್ದರೂ, ಮಾನವಹಕ್ಕುಗಳ ವಿಚಾರದಲ್ಲಿ ಪ್ರಬಲ ಪಾಶ್ಚಿಮಾತ್ಯ ದೇಶಗಳು ತಮ್ಮ ಅಭಿಪ್ರಾಯವನ್ನು ಇತರರ ಮೇಲೆ ಹೇರಲು ಯತ್ನಿಸುವುದರಿಂದ ಹಾಗೂ ಇತರರು ಅವರ ಪರಿಕಲ್ಪನೆ ಮತ್ತು ವಿಶ್ಲೇಷಣೆಯಲ್ಲಿ ಒಪ್ಪದಿರುವ ಹಿನ್ನೆಲೆಯಲ್ಲಿ ವ್ಯಾಜ್ಯಗಳು ಮತ್ತು ವಿವಾದಗಳು ಹಾಗೆಯೇ ಉಳಿದುಕೊಂಡಿವೆ.

ಪಾಶ್ಚಿಮಾತ್ಯ ಚಿಂತನೆಗೆ ಮೊಟ್ಟಮೊದಲು ಸಾಂಪ್ರದಾಯಿಕ ವಿರೋಧ ಬಂದದ್ದು ಸೋವಿಯತ್ ಯೂನಿಯನ್ ಹಾಗೂ ಅದರ ಮಿತ್ರರಾಷ್ಟ್ರಗಳಿಂದ. ಇಂಥ ದೇಶಗಳು ಪಾಶ್ಚಿಮಾತ್ಯ ದೇಶಗಳ ನಿರುದ್ಯೋಗ ಹಾಗೂ ಸಮಾಜದಲ್ಲಿ ವಿವಿಧ ವರ್ಗಗಳ ನಡುವೆ ಭಾರಿಪ್ರಮಾಣದ ಆರ್ಥಿಕ ಅಸಮತೋಲನ ಇರುವುದನ್ನು ಬಲವಾಗಿ ವಿರೋಧಿಸಿದವು. ಇತರ ಆರೋಪಗಳ ಜತೆಗೆ ಕಲಿಕೆ ವೇಳೆಯಲ್ಲೇ ಗಳಿಕೆ ಕಲ್ಪನೆ ಮೂಲಕ ಮೂಲಭೂತ ಮಾನವಹಕ್ಕು ಉಲ್ಲಂಘನೆ ಪ್ರಮುಖವಾದ ಆರೋಪವಾಗಿತ್ತು. ಕಮ್ಯುನಿಸಂ ಪತನದಿಂದಾಗಿ, ಮಾನವಹಕ್ಕುಗಳ ಬಗೆಗಿನ ಸೈದ್ಧಾಂತಿಕ ಅಭಿಪ್ರಾಯ ಸಮರ ಮುಗಿದಿದೆ ಎಂಬ ಅರ್ಥವಲ್ಲ. ಜಿನೀವಾದಲ್ಲಿ ನಡೆದ ಮಾನವಹಕ್ಕು ಆಯೋಗದ ಅಧಿವೇಶದಲ್ಲಿ ನಡೆದ ಎರಡು ಸಿದ್ಧಾಂತಗಳ ನಡುವೆ ದೊಡ್ಡ ಸಂಘರ್ಷವೇ ನಡೆದಿದೆ. ಒಂದೆಡೆ ಪಾಶ್ಚಿಮಾತ್ಯದೇಶಗಳು ನಾಗರಿಕ ಹಾಗೂ ರಾಜಕೀಯ ಹಕ್ಕುಗಳಿಗೆ ಒತ್ತು ನೀಡುತ್ತಿವೆ. ಇದರಲ್ಲಿನ ಉಪಗುಂಪಿನ ಸದಸ್ಯರಾದ ಇಸ್ಲಾಮಿಕ್ ದೇಶಗಳು, ಕಮ್ಯುನಿಸ್ಟ್ ದೇಶಗಳು ಮಾನವಹಕ್ಕುಗಳ ಬಗೆಗಿನ ದೃಷ್ಟಿಕೋನವನ್ನೇ ಬದಲಿಸಿವೆ ಎಂಬ ಆರೋಪ ಮಾಡಿವೆ.


www.shikarat.com

ಪಾಶ್ಚಿಮಾತ್ಯ ದೇಶಗಳ ಪ್ರಕಾರ, ಮಾನವಹಕ್ಕು ಎನ್ನುವುದು ಜೀವನದ ಶಾಸ್ತ್ರೀಯ ಸ್ವಾತಂತ್ರ್ಯ, ಯೋಚನೆಗಳು, ಅಭಿವ್ಯಕ್ತಿ ಮತ್ತು ಸಂಘಟನೆಗಳ ಸ್ವಾತಂತ್ರ್ಯ ಎನ್ನಬಹುದು. ಇಲ್ಲಿ ವ್ಯಕ್ತಿಗಳು ಮಾನವಹಕ್ಕುಗಳ ಕೇಂದ್ರಬಿಂದುಗಳಾಗುತ್ತಾರೆ. ಆದರೆ ಪಾಶ್ಚಾತ್ಯ ರಾಷ್ಟ್ರಗಳನ್ನು ಹೊರತುಪಡಿಸಿ ಇತರ ದೇಶಗಳು, ಸಂಘಟನಾತ್ಮಕ ಶಕ್ತಿಯೇ ಮಾನವಹಕ್ಕುಗಳ ಮೂಲ ಎಂಬ ನಿರ್ಧಾರಕ್ಕೆ ಬಂದಿವೆ. ಒಬ್ಬ ವ್ಯಕ್ತಿ ಅಭಿವೃದ್ಧಿಹೊಂದುವುದು ಸಮಾಜ ಅಭಿವೃದ್ಧಿಯಾದಾಗ ಮಾತ್ರ ಎನ್ನುವುದು ಅವರ ಚಿಂತನೆ. ಇಂಥ ಹಕ್ಕುಗಳು ಕೇವಲ ಸಂಘಟಿತ ಹಂತದಲ್ಲಿ ಮಾತ್ರ ವಾಸ್ತವವಾಗಲು ಸಾಧ್ಯ. ಇದನ್ನು ಸಾಧಿಸಲು ಕೆಲ ವ್ಯಕ್ತಿಗಳ ವೈಯಕ್ತಿಕ ಹಕ್ಕುಗಳ ಉಲ್ಲಂಘನೆಯಾಗಲು ಅವಕಾಶವಿದೆ ಎನ್ನುವುದು ಇವರ ಚಿಂತನೆ. ಆದರೆ ಪಾಶ್ಚಿಮಾತ್ಯ ದೇಶಗಳು ಮತ್ತು ಇತರ ಬಹುತೇಕ ದೇಶಗಳು ಮಾನವಹಕ್ಕು ಅಂಶಗಳು ವಿಶ್ವಾದ್ಯಂತ ಸಾರ್ವತ್ರಿಕವಾಗಿ ಅನ್ವಯವಾಗಬೇಕು; ವಿವಿಧ ದೇಶಗಳ ಸಾಂಸ್ಕೃತಿಕ, ಸಾಮಾಜಿಕ ಅಥವಾ ರಾಜಕೀಯ ವ್ಯವಸ್ಥೆಯ ಹೊರತಾಗಿಯೂ ಎಲ್ಲ ಸರ್ಕಾರಗಳು ಇದಕ್ಕೆ ಬದ್ಧವಾಗಿರಬೇಕು ಎಂದು ಪ್ರತಿಪಾದಿಸುತ್ತವೆ. ಆದರೆ ಇತರ ದೇಶಗಳ ವಾದದ ಪ್ರಕಾರ, ಮಾನವಹಕ್ಕುಗಳು ನಿರ್ದಿಷ್ಟ ಸಂಸ್ಕೃತಿಗೆ ಅನುಗುಣವಾಗಿ ಬದಲಾಗುತ್ತಿರುತ್ತವೆ. ಎಲ್ಲ ಸಾಂಸ್ಕೃತಿಕ ಹಾಗೂ ಸಾಮಾಜಿಕ ವ್ಯವಸ್ಥೆಗಳಿಗೆ ಸಾರ್ವತ್ರಿಕವಾಗಿ ಒಂದನ್ನೇ ಅನ್ವಯಿಸಲಾಗದು ಎಂದು ಅಭಿಪ್ರಾಯಪಡುತ್ತವೆ.

ಸಾರ್ವತ್ರೀಕರಣ ಹಾಗೂ ಸಾಂಸ್ಕೃತಿಕ ಪ್ರತ್ಯೇಕತೆ ಬಗೆಗಿನ ಭಿನ್ನಾಭಿಪ್ರಾಯಕ್ಕೆ ಇದು ಕಾರಣವಾಗಿದೆ. ಇಸ್ಲಾಮಿಕ್ ರಾಷ್ಟ್ರಗಳು ಕೂಡಾ ಇಂಥ ದೇಶಗಳ ವಾದವನ್ನು ಬೆಂಬಲಿಸಿದ್ದು, ವಿಶ್ವಮಟ್ಟದಲ್ಲಿ ಸಾರ್ವತ್ರಿಕ ಮಾನವಹಕ್ಕುಗಳ ಪರಿಕಲ್ಪನೆಯನ್ನು ಒಪ್ಪಿಕೊಳ್ಳಲಾಗದು ಎಂದು ಸ್ಪಷ್ಟಪಡಿಸಿವೆ. ಮಾನವಹಕ್ಕುಗಳ ವ್ಯಾಖ್ಯೆಯು ಆಯಾ ದೇಶಗಳ ಸಾಂಸ್ಕೃತಿಕ ವೈವಿಧ್ಯವನ್ನು ರಕ್ಷಿಸಬೇಕು. ಈ ಹಿನ್ನೆಲೆಯಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿ ಕಂಡುಬರುವ ವೈಯಕ್ತಿಕ ಸ್ವಾತಂತ್ರ್ಯ ಮತ್ತು ವಿಮೋಚನೆಯ ಅಂಶಗಳನ್ನು ಇತರ ಎಲ್ಲ ದೇಶಗಳಿಗೂ ಸಾರ್ವತ್ರಿಕಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಪಾಶ್ಚಿಮಾತ್ಯ ದೇಶಗಳು ತಮ್ಮ ದೃಷ್ಟಿಕೋನ ಅಥವಾ ತಮ್ಮ ಮಾನವಹಕ್ಕುಗಳ ಅಂಶಗಳನ್ನು ಇತರ ದೇಶಗಳ ಮೇಲೆ ಹೇರಲು ಪ್ರಯತ್ನಿಸಬಾರದು ಎನ್ನುವುದು ಈ ದೇಶಗಳ ಒಟ್ಟಾರೆ ನಿಲುವು.

ವಿಶ್ವದಲ್ಲಿ ಪ್ರಮುಖವಾಗಿ ದಕ್ಷಿಣ ಏಷ್ಯಾ ದೇಶಗಳು ಪಾಶ್ಚಿಮಾತ್ಯ ವಾದವನ್ನು ತಿರಸ್ಕರಿಸಿ, ಈ ಪರಿಕಲ್ಪನೆ ಅಸಮರ್ಪಕ ಮತ್ತು ನಿರ್ದಿಷ್ಟವಾಗಿ ಅವರ ವಿಶ್ಲೇಷಣೆಗಷ್ಟೇ ಸೀಮಿತ ಎಂದು ಅಭಿಪ್ರಾಯಪಟ್ಟಿವೆ. ಪಾಶ್ಚಿಮಾತ್ಯ ದೇಶಗಳ ಪ್ರಕಾರ, ಶೀತಲ ಸಮರದ ಯುಗಾಂತ್ಯದ ಬಳಿಕ, ಪಾಶ್ಚಾತ್ಯರ ಪ್ರಕಾರಮ ಸ್ವಾತಂತ್ರ್ಯದ ಕಾರ್ಯಸೂಚಿಯು ಪ್ರತಿ ಕೈದಿಯ ಆತ್ಮಸಾಕ್ಷಿಗೆ ಅನುಗುಣವಾಗಿ, ಪ್ರತಿ ಸಂತ್ರಸ್ತರನ್ನು ಹಿಂಸೆಯಿಂದ ಮುಕ್ತಗೊಳಿಸುವ ಸಲುವಾಗಿ ಹಾಗೂ ಪ್ರತಿ ವ್ಯಕ್ತಿಗಳ ಹಕ್ಕುಗಳನ್ನು ಗೌರವಿಸುವ ನೀತಿಯನ್ನು ಒಳಗೊಂಡಿರಬೇಕು. ಚೀನಾ, ಇಂಡೋನೇಷ್ಯಾ, ಸಿಂಗಾಪುರ, ಮಲೇಷ್ಯಾ ಕ್ಯೂಬಾ ಮತ್ತಿತರ ದೇಶಗಳು ಉದಾರವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಹೊರಗುಳಿದು, ಪ್ರತಿ ಕೈದಿಗಳನ್ನು ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಸಿಕೊಳ್ಳಬೇಕು ಎನ್ನುವ ಅಂಶ ನಮ್ಮ ಆಂತರಿಕ ವ್ಯವಹಾರಗಳ ಮೇಲೆ ಬಾಹ್ಯ ಅಂಶಗಳನ್ನು ಹೇರುವ ಹುನ್ನಾರ ಎಂದು ತಿರಸ್ಕರಿಸಿವೆ. ಯಾವ ವ್ಯಕ್ತಿಯ ಹಕ್ಕುಗಳು ಕೂಡಾ ದೇಶದ ಹಿತಾಸಕ್ತಿ ಅಥವಾ ಹಕ್ಕುಗಳಿಗಿಂತ ದೊಡ್ಡದಲ್ಲ ಎನ್ನುವುದು ಈ ರಾಷ್ಟ್ರಗಳ ಸ್ಪಷ್ಟ ಅಭಿಮತ, ಪ್ರತಿ ರಾಷ್ಟ್ರಗಳಿಗೂ ಅವುಗಳದ್ದೇ ಸ್ವಂತ ವ್ಯವಸ್ಥೆ ಮತ್ತು ಸಂಸ್ಥೆಗಳನ್ನು ಹೊಂದಿರುವ ಹಕ್ಕು ಇದೆ. ಜತೆಗೆ ಇಂಥ ವ್ಯವಸ್ಥೆಯನ್ನು ಸ್ಥಿರಗೊಳಿಸಲು ಮತ್ತು ಹಕ್ಕುಗಳ ಉಲ್ಲಂಘನೆ ವಿಚಾರದಲ್ಲಿ ಯಾವುದೇ ಬಾಹ್ಯ ಹಸ್ತಕ್ಷೇಪಕ್ಕೆ ಅವಕಾಶವಿಲ್ಲ ಎನ್ನುವುದು ಸ್ಪಷ್ಟ ನಿಲುವು.

ಇನ್ನೊಂದು ಪ್ರಮುಖ ಹಾಗೂ ಪರಿಕಲ್ಪನೆಗೆ ಸಂಬಂಧಿಸಿದ ವಿವಾದವೆಂದರೆ, ತುಲನಾತ್ಮಕ ಮಹತ್ವ ಅಥವಾ ಮಾನವಹಕ್ಕುಗಳು ಮತ್ತು ನಾಗರಿಕ, ರಾಜಕೀಯ ಹಕ್ಕುಗಳಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕು ಎನ್ನುವ ವಿಚಾರ. ಪಾಶ್ಚಿಮಾತ್ಯ ದೇಶಗಳು ತೀರಾ ಇತ್ತೀಚಿನ ವರೆಗೂ ಮಾನವಹಕ್ಕುಗಳನ್ನು ರಾಜಕೀಯ ಹಕ್ಕು ಎಂಬ ಅರ್ಥದಲ್ಲೇ ವಿಶ್ಲೇಷಿಸುತ್ತಾ ಬಂದಿದ್ದವು. ಮಾನವಹಕ್ಕುಗಳ ಪಾಶ್ಚಾತ್ಯ ಪರಿಕಲ್ಪನೆ ಕೈದಿಗಳ ಹಿಂಸೆ ಅಥವಾ ನಿಂದನೆಯನ್ನು ಇಲ್ಲವೇ ಕೈದಿಗಳನ್ನು ಸರಿಯಾಗಿ ನಡೆಸಿಕೊಳ್ಳದಿರುವುದನ್ನು ವಿರೋಧಿಸುತ್ತದೆ. ಇದರ ಜತೆಗೆ ಅವರ ಬಂಧನ, ಅವರ ಖಾಸಗಿತನದ ಉಲ್ಲಂಘನೆ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧ, ಪತ್ರಿಕೆ ಅಥವಾ ಸಂಘ ಸಂಸ್ಥೆಗಳ ಮೇಲೆ ನಿರ್ಬಂಧವನ್ನು ವಿರೋಧಿಸುವುದಲ್ಲದೇ, ಕೆಲವೊಮ್ಮೆ ಅವರ ಆತ್ಮಬದ್ಧತೆಯನ್ನು ಗೌರವಿಸುವಂತೆಯೂ ಸೂಚಿಸುತ್ತವೆ.

ಅಭಿವೃದ್ಧಿಶೀಲ ದೇಶಗಳ ವಾದದಂತೆ, ನಾಗರಿಕ ಹಾಗೂ ರಾಜಕೀಯ ಹಕ್ಕುಗಳು, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳ ದಮನಕ್ಕೆ ಹೋಲಿಸಿದರೆ ಕಡಿಮೆ ಮಹತ್ವ ಹೊಂದಿವೆ, ಅಂತಾರಾಷ್ಟ್ರೀಯ ವ್ಯವಸ್ಥೆಯ ಮೇಲೆ ಪಾಶ್ಚಿಮಾತ್ಯರ ಹಿಡಿತ ಸಮರ್ಥನೀಯವಲ್ಲ. ಆಂತರಿಕ ರಾಜಕೀಯ ವ್ಯವಸ್ಥೆಗೆ ಅನುಗುಣವಾಗಿ ನಡೆದುಕೊಳ್ಳುವುದು ಮಾನವಹಕ್ಕುಗಳ ಉಲ್ಲಂಘನೆ ಎನ್ನುವ ವಾದ ಅಸಮರ್ಥನೀಯ. ಅಭಿವೃದ್ಧಿಶೀಲ ರಾಷ್ಟ್ರಗಳ ಅಭಿಪ್ರಾಯದ ಪ್ರಕಾರ, ಮಾನವಹಕ್ಕುಗಳನ್ನು ಸಮರ್ಪಕಗೊಳಿಸುವ ಯಾವುದೇ ರಾಜಕೀಯ ಅರ್ಥದ ಸಂವಾದ ಅಥವಾ ಅಭಿಪ್ರಾಯಗಳು ವಿಶ್ವಮಟ್ಟದಲ್ಲಿ ಸೈದ್ಧಾಂತಿಕವಾಗಿ ಉತ್ತರ ಭಾಗದವರು ದಕ್ಷಿಣ ಭಾಗದವರ ಮೇಲೆ ಹೇರುವ ಹುನ್ನಾರ. ದಕ್ಷಿಣದ ದೇಶಗಳಲ್ಲಿ ಪಾಶ್ಚಾತ್ಯ ದೇಶಗಳಿಗೆ ಹೋಲಿಸಿದರೆ ಅವರು ವಾದಿಸುವ ಮಾನವಹಕ್ಕುಗಳಿಗೆ ಸಂಬಂಧಿಸಿದ ನೈತಿಕ ಹಾಗೂ ಸಾಂಸ್ಕೃತಿಕ ಶ್ರೇಷ್ಠತೆ ಇದೆ ಎಂದು ವಾದಿಸುತ್ತವೆ.

ಭಾರತ ಮಾತ್ರ ಎರಡೂ ವಾದಗಳ ನಡುವಿನ ಸಮಾನಾಂತರ ದಾರಿಯಲ್ಲಿ ಮುನ್ನಡೆಯುತ್ತಿದ್ದು, ಇಂಥ ಚರ್ಚೆಗಳಿಂದ ಅಂತರ ಕಾಪಾಡಿಕೊಂಡಿದೆ. ಭಾರತದಲ್ಲಿ ಉದಾರ ಪ್ರಜಾಸತ್ತಾತ್ಮಕ ಸಂಸ್ಥೆಗಳು ಹಾಗೂ ಸಂಸದೀಯ ವ್ಯವಸ್ಥೆಯ ಸರ್ಕಾರವಿದ್ದು, ಈ ಎರಡೂ ವಾದಗಳ ಭಿನ್ನತೆಯನ್ನು ಮೀರುವ ಅಂಶಗಳನ್ನು ಭಾರತ ಹೊಂದಿದೆ. ಆದರೆ ಮಾನವಹಕ್ಕುಗಳ ಲೋಪಗಳು ಮತ್ತು ಆರ್ಥಿಕ ದುರ್ಬಲತೆಯ ಅಂಶಗಳು ಭಾರತ ಅಂತಾರಾಷ್ಟ್ರೀಯ ಒತ್ತಡಕ್ಕೆ ಮಣಿಯಬೇಕಾದ ಪರಿಸ್ಥಿತಿಯನ್ನು ಸೃಷ್ಟಿಸಿವೆ. ಈ ಹಿನ್ನೆಲೆಯಲ್ಲಿ ಮಾನವಹಕ್ಕು ವಿಚಾರಗಳನ್ನು ಭಾರತದ ವಿರುದ್ಧದ ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಮಾನವಹಕ್ಕುಗಳ ವಿಚಾರದಲ್ಲಿ ಭಾರತ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ. ಆದರೆ ಅದೇ ವೇಳೆ, ಪಟ್ಟಭದ್ರ ಹಿತಾಸಕ್ತಿಗಳು ಮಾನವಹಕ್ಕು ಘೋಷಣೆಗಳನ್ನು ಅಸ್ತ್ರವಾಗಿ ಬಳಸಿಕೊಳ್ಳುವುದನ್ನು ಸಹಿಸಲು ಸಾಧ್ಯವಿಲ್ಲ. ದೇಶದ ಸಮಗ್ರತೆ ಹಾಗೂ ರಾಜಕೀಯ ನೀತಿಗಳ ವಿರುದ್ಧದ ಅಸ್ತ್ರವಾಗಿ ಮಾನವಹಕ್ಕುಗಳ ಘೋಷಣೆಯನ್ನು ಸಹಿಸುವುದಿಲ್ಲ ಎಂಬ ಸ್ಪಷ್ಟ ಹಾಗೂ ದೃಢ ನಿರ್ಧಾರವನ್ನು ಪ್ರಕಟಿಸಿದೆ.ಎ


www.shikarat.com
Universal Coaching Centre

ತೃತೀಯ ಜಗತ್ತಿನ ಹಲವು ದೇಶಗಳ ವಾದದಂತೆ, ಎಲ್ಲಿಯವರೆಗೆ ಪಾಶ್ಚಿಮಾತ್ಯ ದೇಶಗಳು ತಮ್ಮ ನೈತಿಕತೆಯ ಬೋಧನೆಯ ನೆಪದಲ್ಲಿ ಊಳಿಗಮಾನ್ಯ ಪದ್ಧತಿಯನ್ನು ಹೇರುತ್ತವೆಯೋ ಅಲ್ಲಿಯವರೆಗೆ ಅವರು ಹೇಳುವ ಅಂಶಗಳನ್ನು ಅನುಸರಿಸದ ದೇಶಗಳ ಮೇಲೆ ಬಲಪ್ರಯೋಗದ ಅಸ್ತ್ರವಾಗಿ ಮಾನವಹಕ್ಕುಗಳನ್ನು ಬಳಸಿಕೊಳ್ಳಲಾಗುತ್ತದೆ. ಇದಕ್ಕೆ ಕೆಲ ಪೂರಕ ಪುರಾವೆಗಳೂ ಇವೆ. ಸೋವಿಯತ್ ಯೂನಿಯನ್ ಪತನದ ಬಳಿಕ ಉದಾರ ಪ್ರಜಾಪ್ರಭುತ್ವ ನೀತಿಯೇ ವಿಶ್ವದ ಏಕೈಕ ಹಾಗೂ ಪ್ರಬಲ ರಾಜಕೀಯ ವ್ಯವಸ್ಥೆ ಎಂಬ ಸಂದೇಶವನ್ನು ಪಾಶ್ಚಿಮಾತ್ಯ ದೇಶಗಳು ಹೇರಲು ಯತ್ನಿಸಿದವು. ಇದನ್ನು ಅಮೆರಿಕ ತನ್ನ ವಿದೇಶಾಂಗ ನೀತಿಯಲ್ಲೂ ಸಮರ್ಥವಾಗಿ ಬಳಸಿಕೊಂಡಿತು. ಹಿಂದಿನ ಯುಗೋಸ್ಲಾವಿಯಾ ಅಥವಾ ಇರಾಕ್ ವಿಚಾರವನ್ನು ಉದಾಹರಣೆಗೆ ತೆಗೆದುಕೊಂಡರೆ, ಮಾನವಹಕ್ಕುಗಳ ಸಂರಕ್ಷಣೆಯ ನೆಪದಲ್ಲಿ ರಾಜಕೀಯ ಹಾಗೂ ಮಿಲಿಟರಿ ಹಸ್ತಕ್ಷೇಪಕ್ಕೆ ಅಮೆರಿಕ ಮುಂದಾದದ್ದು ಇದಕ್ಕೆ ಉತ್ತಮ ನಿದರ್ಶನ. ತಳಹಂತದಲ್ಲಿ ಅಂತಾರಾಷ್ಟ್ರೀಯ ಸಮುದಾಯ ವಿಶ್ವಸಂಸ್ಥೆಯ ಮೂಲಕ ಒತ್ತಡ ಹೇರುವ ಪ್ರಯತ್ನ ನಡೆಯುತ್ತಿದೆ. ಅದು ಈಕ್ವಿಟೇರಿಯಲ್ ಗುನಿಯಾದಿಂದ ಹಿಡಿದು ಶ್ರೀಲಂಕಾ ದೇಶದವರೆಗೂ ಎಲ್ಲೆಡೆ ಪ್ರಜೆಗಳ ನಾಗರಿಕ ಹಾಗೂ ರಾಜಕೀಯ ಹಕ್ಕುಗಳನ್ನು ಗೌರವಿಸುವಂತೆ ಒತ್ತಡ ತರಲಾಗುತ್ತಿದೆ.

ಅಮೆರಿಕದ ಸರ್ಕಾರಿ ವಿಭಾಗವು ತಮ್ಮ ದೇಶವನ್ನು ಹೊರತುಪಡಿಸಿ, ವಿಶ್ವದ ಉಳಿದೆಲ್ಲ ದೇಶಗಳ ಮಾನವಹಕ್ಕು ವರದಿಗಳನ್ನು ಕ್ರೋಢೀಕರಿಸುತ್ತದೆ. ಈ ದೊಡ್ಡಣ್ಣ, ಉತ್ತರ ಅಮೆರಿಕದ ಜನತೆಯನ್ನು ಈ ಪ್ರಕ್ರಿಯೆಯಿಂದ ಸಂಪೂರ್ಣವಾಗಿ ಹೊರಗಿಟ್ಟಿದೆ. ಇದರಿಂದಾಗಿ ಲಕ್ಷಾಂತರ ಆಫ್ರಿಕನ್ನರ ಜೀತ ಇಂದಿಗೂ ಜೀವಂತವಾಗಿದೆ. ಅವರ ನಾಗರಿಕ ಹಕ್ಕುಗಳನ್ನು ಮೂರು ದಶಕಗಳ ಹಿಂದಿನವರೆಗೂ ನಿರಾಕರಿಸುತ್ತಾ ಬರಲಾಗಿತ್ತು. ಬಾಂಬ್‌ದಾಳಿಯಿಂದ ಸಾವಿರಾರು ಮಂದಿ ಕೊರಿಯನ್ನರು, ವಿಯೆಟ್ನಾಂ ಪ್ರಜೆಗಳು ಮತ್ತು ಇರಾಕ್ ಪ್ರಜೆಗಳನ್ನು ಕೊಲ್ಲಲಾಗಿದೆ ಮತ್ತು ವಿಶ್ವಾದ್ಯಂತ ಲಕ್ಷಾಂತರ ಮಂದಿಯ ಮಾನವಹಕ್ಕುಗಳನ್ನು, ಆರ್ಥಿಕ, ಸಾಮಾಜಿಕ, ಪರಿಸರ ನೀತಿ ಹೆಸರಿನಲ್ಲಿ ಉಲ್ಲಂಘಿಸಲಾಗುತ್ತಿದೆ. ಇನ್ನೊಂದು ಕಡೆ ಕಾಶ್ಮೀರ ಅಥವಾ ಪಂಜಾಬ್‌ನಲ್ಲಿ ಕೆಲ ಉಗ್ರವಾದಿಗಳು ಹಾಗೂ ಪ್ರತ್ಯೇಕತಾವಾದಿಗಳ ಮಾನವಹಕ್ಕು ಉಲ್ಲಂಘನೆಯಾಗಿದೆ ಎಂದು ಕಳಕಳಿ ವ್ಯಕ್ತಪಡಿಸಲಾಗುತ್ತಿದೆ. ಅಂತೆಯೇ ಸೆರ್ಬಿಯನ್ನರು, ಇರಾಕಿಗಳು ಮತ್ತು ಇರಾನ್ ಪ್ರಜೆಗಳು ಮತ್ತು ಇವರಿಗೆ ಆಶ್ರಯ ನೀಡಿದ ದೇಶಗಳನ್ನು, ಪಾಶ್ಚಿಮಾತ್ಯ ಚಿಂತನೆಯನ್ನು ವಿರೋಧಿಸುವ ದೇಶಗಳನ್ನು ಮಾನವಹಕ್ಕು ರಾಜತಾಂತ್ರಿಕತೆಯ ಹೆಸರಿನಲ್ಲಿ ಗುರಿ ಮಾಡಲಾಗಿದೆ. ಇಸ್ರೇಲಿಗಳು ಏನು ಮಾಡಿದರೂ ಅದು ಮಾನವಹಕ್ಕು ಉಲ್ಲಂಘನೆ ಎನಿಸುವುದಿಲ್ಲ; ಅಥವಾ ಕೆಲವು ಬಾರಿ ಅದಕ್ಕೆ ಎಚ್ಚರಿಕೆಯನ್ನಷ್ಟೇ ನೀಡಲಾಗುತ್ತದೆ.

ಇದರ ಜತೆಗೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಾಗರಿಕ ಹಾಗೂ ರಾಜಕೀಯ ಹಕ್ಕುಗಳ ಉಲ್ಲಂಘನೆಯಾದಾಗ, ಪಾಶ್ಚಿಮಾತ್ಯ ದೇಶಗಳು ಅದಕ್ಕೆ ಬಹಳಷ್ಟು ಮಹತ್ವ ನೀಡುತ್ತವೆ. ಆದರೆ ವರ್ಣಭೇಧ ನೀತಿ ಮತ್ತು ತಾವೇ ಶ್ರೇಷ್ಠವೆಂಬ ಮನೋಭಾವದಿಂದ ಪಾಶ್ಚಾತ್ಯ ಯೂರೋಪ್‌ನಲ್ಲಿ ಅದರಲ್ಲೂ ಮುಖ್ಯವಾಗಿ ಜರ್ಮನಿಯಲ್ಲಿ ಶೋಷಣೆ ಅಥವಾ ಮಾನವಹಕ್ಕುಗಳ ಉಲ್ಲಂಘನೆ ನಡೆದಾಗ ಯಾವ ಪಾಶ್ಚಾತ್ಯ ದೇಶಗಳೂ ಸೊಲ್ಲೆತ್ತುವುದಿಲ್ಲ ಎನ್ನುವುದು ವಾಸ್ತವ. ಜಪಾನ್ ಸಾಮಾನ್ಯವಾಗಿ ಪಾಶ್ಚಾತ್ಯರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಆದರೆ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬಲಾತ್ಕಾರದಿಂದ ಹಲವಾರು ಮಂದಿ ಕೊರಿಯನ್ನರನ್ನು ದೇಶಕ್ಕೆ ತಂದುಕೊಂಡದ್ದನ್ನು ಮರೆತಿದೆ. ಇಂದಿಗೂ ಅವರ ವಿರುದ್ಧ ತಾರತಮ್ಯ ನೀತಿ ಅನುಸರಿಸಲಾಗುತ್ತಿದ್ದು, ಅವರ ಮೇಲೆ ದಬ್ಬಾಳಿಕೆ ನಡೆಯುತ್ತಿರುವುದನ್ನು ಪರಿಗಣಿಸುತ್ತಿಲ್ಲ. ಕಮ್ಯುನಿಸಂವಾದಿಗಳ ದೊಡ್ಡ ಗುಂಪೇ (ಆತ್ಮಸಾಕ್ಷಿಯ ಕೈದಿಗಳು) ಜಪಾನ್ ಜೈಲುಗಳಲ್ಲಿ ವಿಚಾರಣೆಯೂ ಇಲ್ಲದೇ ಕೊಳೆಯುತ್ತಿದೆ.

ಈ ಬಗ್ಗೆ ಪಾಶ್ಚಿಮಾತ್ಯ ದೇಶಗಳು ಮಾತನಾಡುವುದಿಲ್ಲ. ಕೆಲ ಸಂದರ್ಭದಲ್ಲಿ ಪರಸ್ಪರ ದೂಷಣೆ ಮನೋಭಾವ ಕೂಡಾ ಮಾನವಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಒಂದು ರಾಷ್ಟ್ರ ತನ್ನ ಶತ್ರುರಾಷ್ಟ್ರದ ಮೇಲೆ ಆರೋಪ ಮಾಡುವ ಪ್ರವೃತ್ತಿಯೂ ಅಧಿಕವಾಗಿದೆ. ಪಾಕಿಸ್ತಾನದ ದೃಷ್ಟಿಯಲ್ಲಿ ಭಾರತದ ಪಂಜಾಬ್ ಹಾಗೂ ಕಾಶ್ಮೀರದಲ್ಲಿ ಭಾರಿ ಪ್ರಮಾಣದ ಮಾನವಹಕ್ಕು ಉಲ್ಲಂಘನೆಯಾಗುತ್ತಿದೆ. ನಂತರ ಅಯೋಧ್ಯಾದಲ್ಲಿ ಕೂಡಾ ಇದೇ ಪ್ರಮಾಣದ ಮಾನವಹಕ್ಕುಗಳ ಉಲ್ಲಂಘನೆಯಾಗಿದೆ. ಆದರೆ ಉತ್ತರದ ಎರಡು ಸೂಕ್ಷ್ಮ ರಾಜ್ಯಗಳಲ್ಲಿ ಪಾಕಿಸ್ತಾನ ವಹಿಸಿರುವ ಪಾತ್ರವಾದರೂ ಏನು? ಅಯೋಧ್ಯೆ ಘಟನೆಯ ಹಿನ್ನೆಲೆಯಲ್ಲಿ ಪಾಕಿಸ್ತಾನದಲ್ಲಿ ಏನು ನಡೆಯಿತು?

ಇಂಥ ದ್ವಿಮುಖ ನೀತಿಗಳ ಹೊರತಾಗಿಯೂ, ಮಾನವಹಕ್ಕುಗಳ ವಿಚಾರವನ್ನು ವಿದೇಶಿ ನೀತಿಯ ಹಿತಾಸಕ್ತಿಗಳಿಗೆ ಪೂರಕವಾಗಿ ಮಾನವಹಕ್ಕುಗಳ ಜಾಗತಿಕ ಕಾರ್ಯಸೂಚಿಯನ್ನು ರೂಪಿಸುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಅಭಿವೃದ್ಧಿಶೀಲ ವಿಶ್ವದ ಹಲವು ರಾಷ್ಟ್ರಗಳಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳು ಹೆಸರಿಗೆ ಮಾತ್ರ ಇವೆ. ಅಲ್ಲಿ ವಾಸ್ತವವಾಗಿ ಮಿಲಿಟರಿ ಆಡಳಿತವಿದೆ. ಭ್ರಷ್ಟ ಹಾಗೂ ನಿರಂಕುಶವಾದಿ ಮುಖಂಡರು ಇಂದಿಗೂ ದೊಡ್ಡಸಂಖ್ಯೆಯ ಜನರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ ಎನ್ನುವುದು ವಾಸ್ತವ. ಆದರೆ ಭಾರತದಂಥ ದೇಶಗಳಲ್ಲಿ, ಸಾಮಾಜಿಕ ಉದ್ವಿಗ್ನತೆ ಕುದಿಬಿಂದು ತಲುಪಿದ್ದು, ಸರ್ಕಾರ ಮತ್ತು ಸಮಾಜದ ನಡುವಿನ ಸಂಬಂಧ ಕೂಡಾ ಬದಲಾಗುತ್ತಿದೆ. ಭಾರತ ಸೃಷ್ಟಿಸಿದ ಉದಾರ ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ ಅಪಾಯ ಎದುರಾಗಿದೆ. ಉಗ್ರವಾದದ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಇಂಥ ಅರಾಜಕತೆ ಹಾಗೂ ಉಗ್ರವಾದ ಬೆಳೆಯಲು ಭ್ರಷ್ಟವ್ಯವಸ್ಥೆ ಹಾಗೂ ಅಸಮರ್ಪಕ ಆಡಳಿತ ಕಾರಣವಾದದ್ದು ಎನ್ನುವುದೂ ಅಷ್ಟೇ ವಾಸ್ತವವಲ್ಲವೇ?

ಸಮಾಜದ ತುಳಿತಕ್ಕೊಳಗಾದ ವ್ಯಕ್ತಿಗಳ ಮೇಲೆ ನಡೆಯುತ್ತಿರುವ ಪೊಲೀಸ್ ದಬ್ಬಾಳಿಕೆಯನ್ನು ಕೂಡಾ ಯಾರೂ ನಿರ್ಲಕ್ಷಿಸುವಂತಿಲ್ಲ. ನ್ಯಾಯಬದ್ಧವಾಗಿ ನೋಡುವುದಾದರೆ ಬಹಳಷ್ಟು ಸಂದರ್ಭಗಳಲ್ಲಿ, ಇದು ವ್ಯಕ್ತಿಗಳ ಅಥವಾ ಸಮಾಜದ ರಾಜಕೀಯ ಹಾಗೂ ಆರ್ಥಿಕ ಹಕ್ಕುಗಳ ನಡುವಿನ ಸಂಘರ್ಷವಲ್ಲ. ಇಂಥ ಉದ್ವಿಗ್ನ ಪರಿಸ್ಥಿತಿ ಉದ್ಭವಿಸುವುದು ಸರ್ಕಾರ, ರಾಜಕೀಯ, ಆಡಳಿತದ ನೇತಾರರು ಜನರ ಹಿತಾಸಕ್ತಿಗಳ ವಿರುದ್ಧ ಪಟ್ಟಭದ್ರ ಹಿತಾಸಕ್ತಿಗಳನ್ನು ಬೆಂಬಲಿಸುವ ಕಾರಣದಿಂದ. ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಭೌಮತ್ವ ನಿಜವಾಗಿಯೂ ನೈಜ ಕಳಕಳಿಯಲ್ಲ; ಆದರೆ ಸ್ವಾರ್ಥ, ದುರಾಸೆ ಮತ್ತು ಅಲ್ಪಾವಧಿ ರಾಜಕೀಯ ಫಲಿತಾಂಶಗಳು ನಿಜವಾದ ಕಾರಣಗಳು.


Universal Coaching Centre
www.shikarat.com

ಇಂದಿನ ಸದ್ಯದ ಪರಿಸ್ಥಿತಿಯಲ್ಲಿ ಪಾಶ್ಚಿಮಾತ್ಯ ದೇಶಗಳು ಇಡೀ ವಿಶ್ವವನ್ನು ನಿರ್ದೇಶಿಸುವ ಸ್ಥಿತಿಯಲ್ಲಿವೆ. ದುರುದ್ದೇಶದಿಂದ ಸಹಾಯ ಮಾಡುವುದನ್ನೂ ಅಲ್ಲಗಳೆಯಲಾಗದು. ಆದರೆ ಕೆಲವೊಮ್ಮೆ ಕಹಿಗುಳಿಗೆ ಮತ್ತು ಆತ್ಮಘಾತುಕತನವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋದರೆ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಹಕ್ಕುಗಳು ನಂಬಿಕೆ ಹಾಗೂ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತವೆ ಎನ್ನುವ ವಾದದಲ್ಲಿ ಯಾವುದೇ ಹುರುಳಿಲ್ಲ. ಇವೆಲ್ಲವೂ ಒಂದೇ ವಸ್ತುವಿನ ಅಂಶಗಳಿದ್ದಂತೆ. ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶ ಅಥವಾ ಸಂಸ್ಕೃತಿಯ ವ್ಯಾಪ್ತಿಯಿಂದ ಒಂದು ನಿರ್ದಿಷ್ಟ ನಂಬಿಕೆಯನ್ನು ಹರಡಲು ಅವಕಾಶ ನಿರಾಕರಿಸಿರುವುದು ನಿಜವಾದರೆ, ಬೌದ್ಧಧರ್ಮ ಉತ್ತರ ಭಾರತಕ್ಕಷ್ಟೇ ಸೀಮಿತವಾಗಿರಬೇಕಾಗುತ್ತಿತ್ತು. ಕ್ರೈಸ್ತಧರ್ಮ ಮಧ್ಯಪ್ರಾಚ್ಯದ ನೇರಕ್ಕೆ ಮತ್ತು ಇಸ್ಲಾಂ ಅರೇಬಿಯಾಕ್ಕಷ್ಟೇ ಸೀಮಿತವಾಗಿರುತ್ತಿತ್ತು.

ಬಹುಶಃ ದೇಶದಲ್ಲೇ ಕಾರ್ಯಕರ್ತರ ಒತ್ತಡ ಮತ್ತು ಬಾಹ್ಯ ಒತ್ತಡಗಳ ಕಾರಣದಿಂದಾಗಿಯೇ ಭಾರತ ಮಾನವಹಕ್ಕು ಉಲ್ಲಂಘನೆ ಪ್ರಕರಣಗಳ ಬಗ್ಗೆ ನಿಗಾ ಇಡಲು ರಾಷ್ಟ್ರೀಯ ಮಾನವಹಕ್ಕುಗಳ ಆಯೋಗವನ್ನು ನೇಮಿಸಿದೆ.ಸಾಂಸ್ಕೃತಿಕ ಸಂಬಂಧ ಖಂಡಿತವಾಗಿಯೂ ಸಾರ್ವತ್ರಿಕ ಮಾನವಹಕ್ಕುಗಳ ಗುಣಮಟ್ಟ ಹಾಗೂ ಬದ್ಧತೆಗಳಿಗೆ ಅಡ್ಡಿಯಾಗದು. ಮಾನವಹಕ್ಕುಗಳ ಬಗೆಗಿನ ಬರವಣಿಗೆಗಳನ್ನು ಗಮನಿಸಿದರೆ, ಅವುಗಳು ನಿರ್ದಿಷ್ಟ ಪ್ರದೇಶ ಅಥವಾ ಸಂಸ್ಕೃತಿಗೆ ಸೀಮಿತವಾಗಿರುವಂಥವುಗಳೇ ವಿನಃ ಸಾರ್ವತ್ರಿಕವಾಗಿ ಅವುಗಳನ್ನು ಅನ್ವಯಿಸಲಾಗದು. ಮಾನವಹಕ್ಕುಗಳ ಸಂಶಯಾಸ್ಪದ ವೈಫಲ್ಯಕ್ಕೆ ಮೂಲ ಕಾರಣವೆಂದರೆ, ಜಾತ್ಯತೀತ, ಪ್ರಜಾಸತ್ತಾತ್ಮಕ ಹಾಗೂ ಬಹುಮುಖಿ ಮೌಲ್ಯಗಳಿಗೆ ತನ್ನ ಮೂಲವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗದೇ ಇದ್ದುದು. ಇಡೀ ತಲೆಮಾರಿನ ಸಾಮಾಜಿಕ ಕಲ್ಪನೆಯನ್ನೇ ಇಂಥ ಸಿದ್ಧಾಂತಗಳು ಹಿಡಿದಿಟ್ಟುಕೊಂಡಿರುವುದು ವಿಪರ್ಯಾಸ. ಇಂಥ ಕ್ರಮವನ್ನು ಖಂಡಿತವಾಗಿಯೂ ಹತ್ತಿಕ್ಕಬೇಕು. ಒತ್ತಡ ಹೇರುವ ತಂತ್ರದ ಬದಲಾಗಿ, ಕುಟುಂಬ ಸಂಸ್ಕೃತಿಯನ್ನು ಪ್ರತಿಪಾದಿಸುವ ಕೆಲಸ ಆಗಬೇಕು. ಪರಸ್ಪರ ಕೊಡು– ಕೊಳ್ಳುವ ಮನೋಭಾವ ಕುಟುಂಬ ಹಂತದಲ್ಲಿ ಮೊದಲು ಬೆಳೆಯಬೇಕು. ಉದಾಹರಣೆಗೆ ಮಕ್ಕಳಹಕ್ಕುಗಳ ವಿಚಾರಕ್ಕೆ ಬಂದರೆ, ಪ್ರೌಢರು ಯಾವ ಹಕ್ಕುಗಳನ್ನು ಬಯಸುತ್ತಾರೋ, ಮಕ್ಕಳು ಕೂಡಾ ಅದನ್ನೇ ಬಯಸುತ್ತಾರೆ ಎನ್ನುವುದು ವಾಸ್ತವ. ಇಂಥ ದೃಷ್ಟಿಕೋನ ಖಂಡಿತವಾಗಿಯೂ ಹಕ್ಕುಗಳ ಸಂರಕ್ಷಣೆ ನಿಟ್ಟಿನಲ್ಲಿ ಹೆಚ್ಚು ಪರಿಣಾಮಕಾರಿಯಾಗಬಹುದೇ ವಿನಃ ಕಾನೂನುಬದ್ಧವಾಗಿ ಇದನ್ನು ಸಾಧಿಸಲಾಗದು. ಇಂಥ ಕಾನೂನಾತ್ಮಕ ರೀತಿಯನ್ನು ನೋಡಿದರೆ ಇದು ಯಾವಾಗಲೂ ಸರ್ಕಾರದ ಹಕ್ಕುಗಳ ವಿರುದ್ಧ ವೈಯಕ್ತಿಕ ಹಕ್ಕುಗಳನ್ನು ಪ್ರತಿಪಾದಿಸಿದಂತಾಗುತ್ತದೆ.

ಮಾನವಹಕ್ಕುಗಳು ನಿಜವಾಗಿಯೂ ನೈತಿಕ ಹಕ್ಕುಗಳಾಗಿದ್ದು, ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಬಗ್ಗೆ ಇರಬೇಕಾದ ಕಳಕಳಿಯಾಗಿದ್ದರೆ, ಅದು ಕೇವಲ ಮಾನವೀಯತೆಯ ದೃಷ್ಟಿಯಿಂದ ಮಾತ್ರ. ಇದು ಪಾಶ್ಚಿಮಾತ್ಯ ದೃಷ್ಟಿಕೋನವಾದ ವ್ಯಕ್ತಿಗತ ಅಂಶಗಳಿಗೆ ಒತ್ತು ನೀಡುವಂಥದ್ದೇ ವಿನಃ ಸಮಷ್ಟಿಯ ಹಿತಕ್ಕೆ ಮಹತ್ವ ನೀಡುವಂಥದ್ದಲ್ಲ. ಅಂದರೆ ಇಂಥ ಬೋಧನೆಗಳು ವೈಯಕ್ತಿಕ ಹಕ್ಕುಗಳನ್ನು ಪ್ರತಿಪಾದಿಸುತ್ತವೆಯೇ ವಿನಃ ದೇಶದ ಹಕ್ಕುಗಳನ್ನಲ್ಲ. ಇದು ಮತ್ತಷ್ಟು ವಿಭಜನೆಗೆ ಕಾರಣವಾಗಬಹುದು. ವಿಭಿನ್ನ ಹಿತಾಸಕ್ತಿ ಹಾಗೂ ಪೈಪೋಟಿಯುತ ವಿಶ್ವದಲ್ಲಿ ಮಾನವಹಕ್ಕುಗಳ ವಿಚಾರದಲ್ಲಿ ಒಂದು ಹಂತದವರೆಗೂ ಭಿನ್ನಾಭಿಪ್ರಾಯಗಳು ಅನಿವಾರ್ಯ. ಎಲ್ಲ ದೇಶಗಳ ಮಾನವಹಕ್ಕು ಪ್ರತಿಪಾದನೆಯ ಉದ್ದೇಶ ಕೂಡಾ ಅವರ ಅಗತ್ಯಕ್ಕೆ ಅನುಗುಣವಾದದ್ದು.

ಉದಾಹರಣೆಗೆ ವಿಶ್ವದ ಹಲವು ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ನಡೆಯುತ್ತಿದೆ ಎಂದು ಬೊಬ್ಬಿಡುವ ಅಮೆರಿಕದಲ್ಲೇ ವಾಸ್ತವವಾಗಿ ಮಾನವಹಕ್ಕು ವಿಚಾರದಲ್ಲಿ ವೈಭವದ ಇತಿಹಾಸ ಇಲ್ಲ. ಅಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ಹಲವು ಮಂದಿ ತಜ್ಞರು ಅಭಿಪ್ರಾಯಪಡುವಂತೆ, ಅಮೆರಿಕದಲ್ಲೂ ಮಾನವಹಕ್ಕುಗಳ ಉಲ್ಲಂಘನೆ ವ್ಯಾಪಕವಾಗಿ ನಡೆಯುತ್ತಿದೆ. ಇದನ್ನು ತಡೆಯಲು ನಡೆದ ಎಲ್ಲ ಬಾಹ್ಯ ಒತ್ತಡಗಳೂ ವಿಫಲವಾಗಿವೆ. ಪ್ರತಿ ಜನಾಂಗಗಳಿಗೂ ತಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಮೌಲ್ಯಗಳ ಬಗ್ಗೆ ಅಭಿಮಾನ ಹಾಗೂ ಪ್ರೀತಿ ಇರುತ್ತದೆ. ಇವುಗಳಲ್ಲಿ ಕೆಲ ಲೋಪಗಳು ಕಂಡುಬಂದರೂ ಅದನ್ನು ಪತ್ತೆ ಮಾಡಿ ಕಿತ್ತುಹಾಕಲು ಕೆಲ ಸಮಯ ಬೇಕಾಗಬಹುದು. ಇದು ಮಾನವಹಕ್ಕುಗಳ ವಿಚಾರಕ್ಕೂ ಅನ್ವಯಿಸುತ್ತದೆ. ಭಾರತದ ಪರಿಸ್ಥಿತಿ ಬಡ, ಅಭಿವೃದ್ಧಿಶೀಲ ಹಾಗೂ ಸಾಂಸ್ಕೃತಿಕ ವೈವಿಧ್ಯವಿದ್ದರೂ,

ಮೂಲಭೂತ ಅವಶ್ಯಕತೆಗಳಾದ ಆಹಾರ, ಸೂರು ಮತ್ತು ಬಟ್ಟೆಯ ಅಗತ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಆಧುನಿಕ ಅವಶ್ಯಕತೆಗಳಾದ ವಿದ್ಯುತ್, ರಸ್ತೆ, ಶುದ್ಧ ಕುಡಿಯುವ ನೀರು ಮತ್ತು ನಾಗರಿಕ ಸ್ವಾತಂತ್ರ್ಯವೂ ಇದರಲ್ಲಿ ಸೇರುತ್ತದೆ. ಈ ವಿಚಾರದಲ್ಲಿ ಒಬ್ಬ ವ್ಯಕ್ತಿ ಮತ್ತೊಬ್ಬನ ಹಕ್ಕನ್ನು ಉಲ್ಲಂಘಿಸಲಾಗದು. ಮಾನವಹಕ್ಕುಗಳ ವಿಯೆನ್ನಾ ಸಮಾವೇಶದಲ್ಲಿ, ಪ್ರಜಾಪ್ರಭುತ್ವ, ಅಭಿವೃದ್ಧಿ ಮತ್ತು ಮಾನವಹಕ್ಕುಗಳು ಎಲ್ಲವೂ ಪರಸ್ಪರ ಸಂಬಂಧ ಇರುವ ಪರಿಕಲ್ಪನೆಗಳು ಮತ್ತು ಆದರ್ಶಗಳು ಎನ್ನುವ ಅಂಶವನ್ನು ಎಲ್ಲ ರಾಷ್ಟ್ರಗಳೂ ಒಪ್ಪಿಕೊಂಡಿವೆ.

## 11. ಪ್ರವಾಸೋದ್ಯಮ: ಅವಕಾಶ ಮತ್ತು ಸಮಸ್ಯೆ

ಪ್ರಮುಖವಾಗಿ ಅಭಿವೃದ್ಧಿಪಡಿಸಬೇಕಾದ ಅಂಶಗಳೆಂದರೆ:

1. ವಿಶ್ವದ ಬೃಹತ್ ಉದ್ಯಮಗಳಲ್ಲಿ ಪ್ರವಾಸೋದ್ಯಮವೂ ಒಂದು

2. ಪ್ರವಾಸೋದ್ಯಮದ ಪ್ರಯೋಜನಗಳು

3. ತಾರತಮ್ಯದ ಪ್ರವಾಸೋದ್ಯಮದ ಅವಗುಣಗಳು

4. ಪ್ರಯೋಜನವಾಗುವ ರೀತಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಇರುವ ಸಮಸ್ಯೆಗಳು

5. ಭಾರತದ ಸ್ಥಿತಿಗತಿ: ಪ್ರವಾಸೋದ್ಯಮ ಅಭಿವೃದ್ಧಿಗೆ ಸಾಕಷ್ಟು ಅವಕಾಶಗಳಿದ್ದರೂ, ಪ್ರವಾಸೋದ್ಯಮ ಭಾರತದಲ್ಲಿ ಯಶಸ್ವಿಯಾಗಿಲ್ಲ. ಇದರ ಕಾರಣಗಳು ಮತ್ತು ಪರಿಸ್ಥಿತಿ ಸುಧಾರಿಸಲು ಸಲಹೆಗಳು.

6. ದೇಶದ ಆರ್ಥಿಕ ಅಭಿವೃದ್ಧಿಗೆ ಪ್ರವಾಸೋದ್ಯಮ ಅಭಿವೃದ್ಧಿ ಅಗತ್ಯ.



www.shikarat.com